ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 15 | ಸಂಚಿಕೆ 42 | 24 ಅಕ್ಟೋಬರ್ 1993 | ರೂ. 2.00

ವಾರದ ನುಡಿ

ದೋಸ್ನಿಯಾದಲ್ಲಿ ಪೆಟ್ಟು ತಿಂದಿರುವ ಅಮೇರಿಕೆ ಈಗ ಸೋಮಾಲಿಯದಲ್ಲೂ ಪೆಟ್ಟು ತಿನ್ನತೊಡಗಿದೆ. ಯಾವುದೇ ಖಚಿತ ಉದ್ದೇಶ ಅಥವಾ ತಂತ್ರಗಳಿಲ್ಲದೆ ಅಂತಾರಾಷ್ಟ್ರೀಯ ಸಮಸ್ಯೆಗಳಲ್ಲಿ ಹಸ್ತಕ್ಷೇಪ ಮಾಡುವ ಅಮೇರಿಕೆಯು ಈಗ ಅದಕ್ಕಾಗಿ ಭಾರಿ ಬೆಲೆ ತೆತ್ತದೇಕಾಗಿದೆ. ಅಮೆರಿಕೆಯು ಪ್ರತೀಕಾರದ ಮನೋಭಾವವನ್ನು ತ್ಯಜಿಸಿ, ವಿಶ್ವಸಂಸ್ಥೆಯ ಸದ್ಯದ ಅತ್ಯಂತ ಮಹತ್ವಾಕಾಂಕ್ಷೆಯ ಕಾರ್ಯಾಚರಣೆಯಲ್ಲಿ ಮಾನವೀಯತೆಯನ್ನು ಮರೆಯಬೇಕಾಗಿದೆ.

ಸಂಯುಕ್ತ ಕರ್ನಾಟಕ
ಸಂಪಾದಕೀಯ -13.10.1993

ನವೆಂಬರ್ ಚುನಾವಣೆಗಳ ಮಹತ್ವ

-- ಕಾಂ. ಸುರ್ಜಿತ್

ನವೆಂಬರ್‌ನಲ್ಲಿ ಆರು ರಾಜ್ಯಗಳಾದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ, ಹಿಮಾಚಲ ಪ್ರದೇಶ, ದೆಹಲಿ ಮತ್ತು ಮಿಝೋರಾಮ್‌ಗಳಿಗೆ ಚುನಾವಣೆ ನಡೆಯಲಿದೆ. ಹಿಂದೀ ಪ್ರದೇಶದ ಐದು ರಾಜ್ಯಗಳಲ್ಲಿ ಚುನಾವಣೆ ಪರಿಣಾಮಗಳು ದೇಶದ ರಾಜಕೀಯದ ಮೇಲೆ ಪ್ರಭಾವ ಬೀರಲಿದೆ. ಈ ಐದರಲ್ಲಿ ನಾಲ್ಕು ರಾಜ್ಯಗಳು ಹಿಂದೆ ಬಿಜೆಪಿಯ ಆಡಳಿತದಲ್ಲಿದ್ದವು. ಬಿಜೆಪಿ ಎಂತಹ ಕೆಟ್ಟ ಆಡಳಿತ ನೀಡಿತು. ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ ರಚನೆಗೆ ಹೇಗೆ ಅದು ಕೊಡಲಿಯೇಟು ನೀಡಿತು ಎಂಬುದು ಈಗ ನಮ್ಮೆಲ್ಲ ತಿಳಿದ ವಿಷಯ ರಾಷ್ಟ್ರೀಯ ರಂಗ ಸರ್ಕಾರ ಆಡಳಿತದಲ್ಲಿದ್ದಾಗಿನಿಂದ ಹಿಡಿದು ಇಂದಿನವರೆಗೆ ಆ ಪಕ್ಷ ಜನರಲ್ಲಿ ಕೋಮು ದಳ್ಳುರಿ ಹಬ್ಬಿಸಿ ಅಲ್ಪಸಂಖ್ಯಾತರ ಮನದಲ್ಲಿ ಭಯ ತುಂಬುತ್ತಲೇ ಬಂದಿದೆ. ಅಯೋಧ್ಯೆಯ ವಿಷಯದಲ್ಲಿ ಎಲ್ಲ ರಾಜಕೀಯ ಶಕ್ತಿಗಳು ಸುಪ್ರೀಂ ಕೋರ್ಟಿನ ತೀರ್ಪಿಗೆ ತಲೆಬಾಗುತ್ತೇವೆನ್ನುವಾಗ ಬಿಜೆಪಿ ಅದರ ವಿರುದ್ಧ ಮಾತನಾಡುತ್ತಿದೆ.

ಹಿಂದೆ ಹಲವು ಬಾರಿ ಹೇಳಿದಂತೆ ಕಾಂಗ್ರೆ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲಾರದು. ಎಡ ಮತ್ತು ಜಾತ್ಯಾತೀತ ಶಕ್ತಿಗಳು ಬಿಜೆಪಿಯ ಕೋಮು ಪ್ರಚೋದನೆಯನ್ನು ತಡೆಗಟ್ಟಲು ಹೋರಾಡುತ್ತಿದ್ದರೆ ಕಾಂಗ್ರೆ ಅದರೊಂದಿಗೆ ರಾಜಿ ಸೂತ್ರ ಅನುಸರಿಸಿತು. ಬಿಜೆಪಿ ನಾಲ್ಕು ರಾಜ್ಯಗಳಲ್ಲಿ ತಾನು ಆಡಳಿತದಲ್ಲಿದ್ದಾಗ ತನ್ನ ಭರವಸೆಗಳನ್ನು ಈಡೇರಿಸಲಿಲ್ಲ. ಹಾಗೆಯೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆ ತನ್ನ ಕರ್ತವ್ಯ ಮಾಡಲಿಲ್ಲ. ಇದು ದೇಶದಾದ್ಯಂತ ಕೋಮು ದ್ವೇಷದ ಬೆಂಕಿಯನ್ನೇ ಹಬ್ಬಿಸಿತು. ಬಿಜೆಪಿ ತನ್ನ 'ಹಿಂದುತ್ವ' ಪ್ರಚಾರ ಮಾಡುತ್ತಾ ಮಸೀದಿಯನ್ನು ನಾಶ ಮಾಡಿತು. ವಿ.ಹೆಚ್.ಪಿ. 'ಬಿಜೆಪಿ, ಆರ್.ಎಸ್.ಎಸ್.' ದೇಶದಾದ್ಯಂತ ನಗ್ನ ತಾಂಡವವಾಡಿದವು. ಈಗ ಈ ಚುನಾವಣೆಗೂ ರಾಮಜನ್ಮಸ್ಥಾನದ ವಿವಾದವನ್ನು ದೊಡ್ಡದು ಮಾಡಿ ಬಿಜೆಪಿ ದೇಶವನ್ನು ಕೋಮು ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲೇ ಮುಂಬರುವ ಚುನಾವಣೆಗಳು ಬಹಳ ಪ್ರಾಮುಖ್ಯತೆ ಪಡೆಯುವುದು. ಬಿಜೆಪಿ ಗೆದ್ದರೆ ದೇಶಕ್ಕೆ ಅದರಿಂದ ಅತ್ಯಂತ ದೊಡ್ಡ ಅಪಾಯ ಕಾದಿದೆ. ದೇಶದ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಚಳುವಳಿಗೆ ಇದರಿಂದ ಬಲವಾದ ಏಟು ಬೀಳುತ್ತದೆ. ಜನತೆಯ ಪ್ರಜಾಪ್ರಭುತ್ವ ಪ್ರಜ್ಞೆಯನ್ನು ಹಾಳುಗೆಡವಿ ಅದು ಮೂಲಬೂತವಾದವನ್ನು ಬಿತ್ತುತ್ತದೆ. ಇದರಿಂದ ದೇಶದ ರಾಜಕೀಯ ರೂಪವೊಂದೇ ಬದಲಾಗವುದಿಲ್ಲ. ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕೂ ವಿರೂಪಗೊಳ್ಳುತ್ತದೆ.

ಉತ್ತರ ಪ್ರದೇಶದಲ್ಲಿ ಕಾಂಗ್ರೆ ಹೋರಾಟ

ದೇಶದಲ್ಲಿ ಇಂದಿಗೂ ದೊಡ್ಡ ರಾಜಕೀಯ ಶಕ್ತಿಯಾಗಿರುವ ಕಾಂಗ್ರೆಸ್ ತನ್ನ ಜಾತ್ಯಾತೀತ ಘೋಷಣೆಗಳೊಂದಿಗೆ ಹೋರಾಟಕ್ಕೆ ಇಳಿಯಬೇಕಾಗಿತ್ತು. ಆದರೆ ಅದು ಆ ಧೈರ್ಯ ತೋರುವ ಬದಲು ಕೋಮುವಾದಿಗಳ ಜೊತೆಗೆ ರಾಜಿ ಮಾಡಿಕೊಳ್ಳುತ್ತಿದೆ. ಕಾಂಗ್ರೆ ಇತ್ತೀಚೆಗೆ 'ಸೋಮಯಜ್ಞ' ಮಾಡಿದ್ದು ರಾಮಮಂದಿರ ಕಟ್ಟಿಸುವುದಕ್ಕೆ ಶಂಕರಾಚಾರ್ಯರುಗಳ ಸಭೆ ಸೇರಿಸಿ ಅವರ ಬೆಂಬಲ ಪಡೆಯುವ ಪ್ರಯತ್ನ ಮಾಡಿದ್ದು ಇವೆಲ್ಲ ಈ ರಾಜಿ ಮನೋಭಾವವನ್ನು ತೋರುತ್ತದೆ. ಈಗ ರಾಮಮಂದಿರ ವಿವಾದಕ್ಕೆ ಪರಿಹಾರ ಕಂಡು ಹಿಡಿಯುವ ಪ್ರಾಮಾಣಿಕ ಪ್ರಯತ್ನ ಮಾಡುವುದನ್ನು ಬಿಟ್ಟು ಕಾಂಗ್ರೆ ರಾಮಮಂದಿರ ಕಟ್ಟಲು ಬಿಜೆಪಿಯೊದಿಗೆ ಪೈಪೋಟಿಗಿಳಿದಿದೆ. ಇಂತಹ ರಾಜಕಾರಣದಿಂದಾಗಿ ಕಾಂಗ್ರೆ ದೇಶದ ಜಾತ್ಯಾತೀತತೆ ಮತ್ತು ಏಕತೆಗೆ ಹೊಡೆತ ನೀಡಿದೆ.

ಇತ್ತೀಚೆಗೆ 40 ಬಿಜೆಪಿ, ವಿ.ಹೆಚ್.ಪಿ. ಜನರ ವಿರುದ್ಧ ಮೊಕದ್ದಮೆ ಹೂಡುವ ನಿರ್ಧಾರವೂ ತಾತ್ಕಾಲಿಕ ರಾಜಕೀಯ ಲಾಭಕ್ಕಾಗಿ ಮಾಡಿದಂತವು. ಕಳೆದ ಹತ್ತು ತಿಂಗಳಲ್ಲಿ ಸರ್ಕಾರ ಈ ತಪ್ಪಿತಸ್ಥರನ್ನು ಶಿಕ್ಷಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಈಗ ಚುನಾವಣೆಯ ಹಿನ್ನೆಲೆಯಲ್ಲಿ ನಿಷ್ಠುರತೆಯ ಸೋಗು ಹಾಕುತ್ತಿದೆ. ತನ್ನ ಆರ್ಥಿಕ ನೀತಿಗಳಿಗೆ ತುಂಬು ಬೆಂಬಲ ನೀಡುತ್ತಿರುವ ಬಿಜೆಪಿಯ ಬಗೆಗೆ ಕಾಂಗ್ರೆನಲ್ಲಿ ಸ್ನೇಹಭಾವ ಬೆಳೆದಿದ್ದರೂ ಇರಬಹುದು. ಈ ನೀತಿಗಳನ್ನು ದುಡಿಯುವ ವರ್ಗ ವಿರೋಧಿಸುತ್ತಿದೆ. ಈ ವಿರೋಧಕ್ಕೆ ಯಾವುದೇ ಪ್ರಚಾರ ಸಿಗದಂತೆ ಮಾಡುವ ತಂತ್ರಗಾರಿಕೆಯೂ ಇದಿರಬಹುದು.

ಅಲ್ಪ ಸಂಖ್ಯಾತರ ಹಿತಾಸಕ್ತಿಗೆ ಯಾವುದೇ ಧಕ್ಕೆಯುಂಟಾಗದು ಎಂಬ ಭರವಸೆ ಮೂಡಿಸುವದರಲ್ಲಿಯೂ ಕಾಂಗ್ರೆ ವಿಫಲವಾಗಿದೆ. ಕೋಮು ವಿಷಯದಲ್ಲಿ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಆಗಬಹುದಾದ ಪರಿಣಾಮಗಳ ಬಗ್ಗೆ ಕಾಂಗ್ರೆ ಇನ್ನೂ ಪಾಠ ಕಲಿತಂತಿಲ್ಲ.

ಈ ಎಲ್ಲವುಗಳಿಂದಲೇ ಈ ಚುನಾವಣೆಗಳಿಗೆ ಇಂತಹ ಮಹತ್ವ ಬಂದಿರುವುದು. ದೇಶದ ಜಾತ್ಯಾತೀತತೆಯನ್ನು

ಪುಟ 8ನೋಡಿ

ಅತಿವೃಷ್ಟಿಯಿಂದ ಕಂಗಾಲಾಗಿರುವ ಜನರು ಒಳಜಗಳದಲ್ಲಿ ನಿರತರಾಗಿರುವ ಕಾಂಗ್ರೈಗಳು

ಕರ್ನಾಟಕದ ರಾಯಚೂರು, ಬಿಜಾಪುರ, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಮತ್ತು ಇತರ ಕೆಲವು ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ಬಿದ್ದ ಮಳೆ ಸಹಸ್ರಾರು ಕುಟುಂಬಗಳನ್ನು ವಸತಿ ಹೀನರನ್ನಾಗಿ ಮಾಡಿದೆ. ಬೆಳೆಯನ್ನು ಹಾಳು ಮಾಡಿದೆ, ರಸ್ತೆಗಳಿಗೆ ಜಖಂ ಮಾಡಿದೆ. ರಾಯಚೂರು ಜಿಲ್ಲೆಯೊಂದರಲ್ಲಿಯೇ 50,000 ಮನೆಗಳು, ನಾಶವಾಗಿದೆ, ಬಿದ್ದು ಹೋಗಿವೆ. ಇಲ್ಲವೇ ಜಖಂ ಆಗಿವೆ. ಈ ಅತಿವೃಷ್ಟಿಯಿಂದ ಸುಮಾರು 25 ಜನರು ಸತ್ತಿದ್ದಾರೆ.

ಸೆಪ್ಟೆಂಬರ್ 29 ರಂದು ಆದ ಭೂಕಂಪವು ಬೀದರ್, ಬಿಜಾಪುರ, ಗುಲ್ಬರ್ಗ ಜಿಲ್ಲೆಯಲ್ಲಿ ಅವಾಂತರ ಮಾಡಿತು. ಜತೆ ಜತೆಗೇ ಮಹಾರಾಷ್ಟ್ರದ ಉಸ್ಮಾನ್‌ಬಾದ್ ಮತ್ತು ಲಾತೂರು ಜಿಲ್ಲೆಗಳಲ್ಲಿ ಭೂಕಂಪ ಸಂಭವಿಸಿ ಅರವತ್ತು ಸಾವಿರ ಜನರು ಸತ್ತು ಪ್ರಪಂಚದ ಗಮನ ಸೆಳೆದುದರಿಂದ ರಾಜ್ಯದಲ್ಲಿ ಆದ ಭೂಕಂಪದಿಂದ ಆದ ಕಷ್ಟನಷ್ಟ ತುಲನಾತ್ಮಕವಾಗಿ ಅಷ್ಟು ದೊಡ್ಡದೆನಿಸಲಿಲ್ಲ. ಮುಖ್ಯಮಂತ್ರಿ ವೀರಪ್ಪಮೋಯಿಲಿಯವರು ಕೇಂದ್ರ ಸರ್ಕಾರದಿಂದ ಭೂಕಂಪ ಪೀಡಿತರಿಗೆ ಧನಸಹಾಯವನ್ನು ಕೇಳುವುದಿಲ್ಲ ಎಂದು ಬಿಟ್ಟರು. ಭೂಕಂಪ ಪೀಡಿತರಿಗೆ ಅವಶ್ಯಕವಾದ ಪರಿಹಾರ ಎಷ್ಟರ ಮಟ್ಟಿಗೆ ತಲುಪಿದೆ ಎಂಬುದು, ಎಲ್ಲರಿಗೂ ತಲುಪಿದೆಯೋ ಎಂಬುದು ಪ್ರಶ್ನಾರ್ಹ.

ಅತಿವೃಷ್ಟಿಯಿಂದ ಆಗಿರುವ ಹಾನಿಗೆ ಪರಿಹಾರ ಕೊಡಲು ಕೇಂದ್ರದಿಂದ ಧನ ಸಹಾಯವನ್ನು ಕೇಳುವುದಾಗಿ ವೀರಪ್ಪ ಮೊಯಿಲಿಯವರು ಹೇಳಿರುವುದಾಗಿ ವರದಿಯಾಗಿದೆ.

ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿಯ ನಿಜ ಚಿತ್ರವನ್ನು ಮೊಯಿಲಿ ಜನರ ಮುಂದಿಡುತ್ತಿಲ್ಲ. ಅವರು ಸರ್ಕಾರದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆಯೆಂದು ಜನರಿಗೆ ಸುಳ್ಳು ಹೇಳುತ್ತಿದ್ದಾರೆ. ಒಂದು ವೇಳೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೊಡಬೇಕಾಗಿದ್ದ ರೂ. 400 ಕೋಟಿಯನ್ನು ಬಾಕಿಯನ್ನು ಯಾಕೆ ಪಾವತಿ ಮಾಡುತ್ತಿಲ್ಲ. ಜೋಗ್‌ನಲ್ಲಿ ಕೆಟ್ಟು ಹೋಗಿರುವ ವಿದ್ಯುತ್ ಜನರೇಟರುಗಳನ್ನು ರಿಪೇರಿ ಮಾಡಿಸಲು ಯಾಕೆ ಹಣ ಕೊಡುತ್ತಿಲ್ಲ ಒಂದು ಪ್ರಶ್ನಾವಳಿಯನ್ನೇ ಸಿದ್ಧಪಡಿಸಬಹುದು.

ಅತಿವೃಷ್ಟಿಗೆ ಗುರಿಯಾಗಿರುವ ಪ್ರದೇಶಗಳ ಸಂತ್ರಸ್ತರ ಕಷ್ಟವನ್ನು ಕಾಂಗ್ರೆ ಸರ್ಕಾರದ ಮುಖಂಡರು ಅರ್ಥ ಮಾಡಿಕೊಳ್ಳಲು ಆಗುತ್ತದೆಯೇ? ತಲೆತಲಾಂತರದಿಂದ ವಾಸಿಸುತ್ತಿದ್ದ ಮನೆ ಬಿದ್ದುಹೋಗಿ ಒಂದೊಂದು ದಿನ, ಒಂದೊಂದು ರಾತ್ರಿಯನ್ನು ಕಳೆಯಲು ಗಂಡಸರು, ಹೆಂಗಸರು, ಮಕ್ಕಳು, ವೃದ್ಧರು ಪಡುತ್ತಿರುವ ಪಾಡು ಮೊಯಿಲಿ ಕಂಪೆನಿಯವರಿಗಾಗಲಿ ಭಿನ್ನ ಕಂಪನಿಗಾಗಲೀ ತಿಳಿಯುತ್ತಿದೆಯೇ?

ಲಾಭ, ಆಸ್ತಿ, ಅಧಿಕಾರ, ಭೋಗ, ಕೀರ್ತಿಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆ ಸರ್ಕಾರದ ಮುಖಂಡರಾಗಲೀ, ಕಾಂಗ್ರೆ ಪಕ್ಷದ ನಾಯಕರಿಗಾಗಲೀ ಅತಿವೃಷ್ಟಿ ಪೀಡಿತರ ಕಷ್ಟದ ಬಗ್ಗೆ ವಿಚಾರ ಮಾಡುವರೇ?

ಅತಿವೃಷ್ಟಿಯಿಂದ ಎಷ್ಟು ಹಾನಿಯಾಗಿದೆ ಎಂಬುದನ್ನು ಸರ್ವೆ ಮಾಡಲು ಮಂತ್ರಿಗಳನ್ನು ಕರೆದೊಯ್ಯುವ ವಿಮಾನವು ಕಂದಾಯ ಸಚಿವ ರಾಜಶೇಖರ ಮೂರ್ತಿಯನ್ನು ಬಿಟ್ಟು ಹೋಗುವುದು ಒಂದು ಸುದ್ದಿ. ಈ ವಿಚಾರದ ಮಟ್ಟಿಗಾದರೂ ಕಾಂಗ್ರೆ ಸರ್ಕಾರದ ನಾಯಕರು ಅತಿವೃಷ್ಟಿಯ ಸಂತ್ರಸ್ತರಿಗೆ ಪರಿಹಾರ ಕೊಡುವರು ಎಂಬುದು ಕನಸಿನ ಮಾತು.

ಮೋಯಿಲಿಯವರನ್ನು ಅಧಿಕಾರದ ಗದ್ದುಗೆಯಿಂದ ಇಳಿಸಬೇಕೆಂದಿರುವ ಕಾಂಗ್ರೆ ಭಿನ್ನಮತೀಯರಾದರೂ ಅವರು ಸಭೆ ಸೇರುವಾಗ ಈ ಸಂತ್ರಸ್ತರಿಗೆ ಪರಿಹಾರ ಕೊಡುವ ವಿಚಾರ ಮಾಡಿದ ಸುದ್ದಿ ಬಂದಿಲ್ಲ.

ಈ ದುಸ್ಥಿತಿಯ ವಿರುದ್ಧ ಪ್ರಜಾಪ್ರಭುತ್ವ ಚಳುವಳಿಯು ಬಲವಾದ ಹೋರಾಟವನ್ನು ನಡೆಸಬೇಕು.

ತಿದ್ದುಪಡಿ

17 ಅಕ್ಟೋಬರ್ ಸಂಚಿಕೆಯಲ್ಲಿ ಮುಖಪುಟದಲ್ಲಿ ಪ್ರಕಟವಾದ ಲೇಖನದ ತಲೆಬರಹ "ವೀರಪ್ಪ ಮೋಯಿಲಿ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯದ ಛೀಮಾರಿ" ಎಂದು ಅಚ್ಚಾಗಬೇಕಾದದ್ದು "ವೀರಪ್ಪ ಮೋಯಿಲಿ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯ ಶಿಕ್ಷೆ/ಛೀತೂರಿ" ಎಂದು ಅಚ್ಚಾಗಿದೆ ತಪ್ಪಿಗಾಗಿ ವಿಷಾಧಿಸುತ್ತೇವೆ.

-ಸಂ.

ರಷ್ಯದಲ್ಲಿ ವರ್ತಮಾನ ಪತ್ರಿಕೆಗಳ ನಿಷೇಧ

ರಷ್ಯದಲ್ಲಿ ಯೆಲ್ಟ್‌ಸಿನ್‌ರ ರಾಕ್ಷಸೀಕೃತ್ಯದ ಕುರಿತು ಕಳೆದ ಸಂಚಿಕೆ ಮುಖಪುಟದಲ್ಲಿ ವರದಿ ಮಾಡಿದ್ದಿತು. ಯೆಲ್ಟ್‌ಸಿನ್ ಸರ್ಕಾರವು ಹನ್ನೆರಡಕ್ಕೂ ಹೆಚ್ಚು ವೃತ್ತ ಪತ್ರಿಕೆಗಳನ್ನು ನಿಷೇಧಿಸಿರುವುದಾಗಿಯೂ, ಕೆಲವು ರೇಡಿಯೋ ಪ್ರಸಾರಗಳನ್ನು, ಒಂದು ದೂರದರ್ಶನದ ಪ್ರಸಾರವನ್ನು ಆಕಾಶವಾಣಿಯು ನಿಷೇಧಿಸಿರುವುದಾಗಿ ಅಕ್ಟೋಬರ್ 15 ರಂದು ಪ್ರಸಾರ ಮಾಡಿದೆ.

ಯೆಲ್ಟ್‌ಸಿನ್ ಸರ್ಕಾರವು ಬಂಧಿಸಿದವರ ಪೈಕಿ ರಷ್ಯದ ಪಾರ್ಲಿಮೆಂಟಿನ ಸಾಂವಿಧಾನಿಕ ಸಮಿತಿಯ ಅಧ್ಯಕ್ಷ ವ್ಲಾಡಿಮಿರ್ ಇಸಾಕೋವ್ ಒಬ್ಬರು, ಅವರನ್ನು ಬಂಧಿಸಿ ಮಾಸ್ಕೋದ 22ನೆಯ ನಂಬರಿನ ಪೋಲೀಸ್ ಠಾಣೆಯಲ್ಲಿ ಇಡಲಾಗಿದ್ದಿತು. ತಮ್ಮಮೇಲೆ ನಡೆದ ಆಕ್ರಮಣದ ಬಗ್ಗೆ ಅವರು ಒಂದು ಕಾಗದದ ಮೇಲೆ ಬರೆದು ಅದನ್ನು ಗುಪ್ತವಾಗಿ ಠಾಣೆಯಿಂದ ಹೊರಗೆ ಕಳಿಸಿದರು. 'ಗಾರ್ಡಿಯನ್' ಪತ್ರಿಕೆ ತನ್ನ ಅಕ್ಟೋಬರ್ 6ರ ಸಂಚಿಕೆಯಲ್ಲಿ ಇದನ್ನು ಪ್ರಕಟಿಸಿದೆ. ಅವರ ಮಾತುಗಳನ್ನು ಕೇಳಿ: "ನನಗೆ ನಕ್ಷತ್ರಗಳು ಕಾಣುತ್ತಿವೆ" ನಾನು ಚಿಕ್ಕಮಗುವಾಗಿದ್ದಾಗ ಈ ರೀತಿ ಹೊಡೆತ ತಿಂದಿಲ್ಲ.

"ಓಮನ್ (ಸ್ಪೆಷಲ್ ರಯಟ್ ಪೋಲೀಸ್) ನನ್ನನ್ನು ಹೊಡೆದರು, ಅವರು ಅಣತಿಗಳನ್ನು ಪಾಲಿಸುತ್ತಿದ್ದರು. ಅವರಲ್ಲಿ ಹೆಚ್ಚಿನವರಿಗೆ ತಾವು ಮಾಡುತ್ತಿರುವುದು ಕಾನೂನು ಬಾಹಿರ, ಕ್ರಿಮಿನಲ್ ಎಂದು ಅರಿವಾಗುತ್ತಿದ್ದಿತು. ಅಸಾಲ್ಟ್ ರೈಫಲ್ಲಿಗಳಿದ್ದ ಕೆಲವು ಸ್ವಯಂ ಸೇವಕರು ರಕ್ಷಿಸುತ್ತಿದ್ದ ಪಾರ್ಲಿಮೆಂಟನ್ನು ಅವರು ಟ್ಯಾಂಕುಗಳನ್ನು ಆರ್ಮೋರ್ಡ್ ಕಾರುಗಳನ್ನು ಉಪಯೋಗಿಸಿ ಧ್ವಂಸ ಮಾಡುತ್ತಿದ್ದರು."

"ಒಂದು ಟ್ಯಾಂಕ್ ಡಿವಿಜನ್ನಿನ ಕೆಲವು ಸೈನಿಕರು ತಾವು ಹಿಂಸಕರೂ ಅಲ್ಲ ಕೊಲೆಗಡುಕರೂ ಅಲ್ಲ ಎಂದು ಹೇಳುತ್ತಿದ್ದರು........"

"ಸುಡುತ್ತಿರುವ ಪಾರ್ಲಿಮೆಂಟ್ ಕಟ್ಟಡದಿಂದ ಹೊರ ಬಂದ ಕೆಲವೇ ರಕ್ಷಕರು ಕದನ ವಿರಾಮದ ಒಪ್ಪಂದದ ನಂತರ ಸುಮಾರು 300 ಜನರಿದ್ದರು. ಸುತ್ತಮುತ್ತಲ ಕಟ್ಟಡಗಳಿಂದ, ಸೇತುವೆಯ ಮೇಲಿಂದ ವೀಕ್ಷಿಸುತ್ತಿದ್ದ ಸಹಸ್ರಾರು ಜನರು ಇನ್ನೂ ಹೆಚ್ಚು ಮಂದಿಯನ್ನು ನಿರೀಕ್ಷಿಸಿದ್ದರು."

ಅವರು ನಮ್ಮನ್ನು ಗಂಟೆಗಟ್ಟಲೆ ನಿಲ್ಲಿಸಿದ್ದರು. ಬಸ್ಸುಗಳು ನಿಮ್ಮನ್ನು ಮೆಟ್ರೋಗೆ ಕೊಂಡೊಯ್ಯುತ್ತಿವೆ ಎಂದು ಹೇಳಿದರು. ಆದರೆ ಸತ್ಯ ಸಂಗತಿಯೆಂದರೆ ಅವರು ನಮ್ಮನ್ನು ಶಿಕ್ಷಿಸಲು ಸಿದ್ಧರಾಗುತ್ತಿದ್ದರು. ಅವರು ನಮ್ಮನ್ನು ರಬ್ಬರ್ ಕೋಲುಗಳಲ್ಲಿ, ತಮ್ಮ ಬಂದೂಕುಗಳ ತುದಿಯಿಂದ ಹೊಡೆದರು. "ಖಾಸಗೀಕರಣ ನಿಮಗೆ ಕಾದಿದೆ" ಎಂದು ಹೇಳುತ್ತಾ ಅತ್ಯಂತ ಕೆಟ್ಟ ಮಾತುಗಳಲ್ಲಿ ಬಯ್ಯುತ್ತಾ ಬೂಟುಕಾಲುಗಳಲ್ಲಿ ಒದ್ದರು.

"ಡೆಪ್ಯುಟಿಗಳ (ಎಂದರೆ ಎಂ.ಪಿ.ಗಳು) ಕಿಸೆಗಳನ್ನು ಹುಡುಕಿ ಸಿಕ್ಕಿದುದನ್ನು ಬಾಗಿಲಿನತ್ತ ಎಸೆದರು. ಬಂಧಿಸಲ್ಪಟ್ಟ ನಮ್ಮ ನಡುವೆ ಇದ್ದವರು ಡಾಕ್ಟರುಗಳು, ಶಿಕ್ಷಕರು, ಪೋಲೀಸರು, ಫ್ಯಾಕ್ಟರಿಗಳ ಡೈರೆಕ್ಟರುಗಳು, ನಾವು ಡೆಪ್ಯುಟಿಗಳಾಗಿದ್ದುದರಿಂದ ಯೆಲ್ಟ್‌ಸಿನ್ ಆಡಳಿತವು ನಮ್ಮನ್ನು ದ್ವೇಷಿಸುತ್ತಿದ್ದರು" "ಸುಧಾರಣೆ" ಪೂರ್ಣ ವೇಗದಲ್ಲಿ ಜ್ಯಾರಿ ಮಾಡಲು ಅವರನ್ನು ನಮ್ಮನ್ನು ಶತ್ರುಗಳಂತೆ ಪರಿಗಣಿಸಿ ನಾಶ ಮಾಡುವರು.

"ನಾವು ಪೋಲೀಸ್ ಸ್ಟೇಷನ್ನಿನಲ್ಲಿದ್ದಷ್ಟು ಕಾಲ ಗೋಲೀಬಾರಿನ ಸದ್ದು ಕೇಳುತ್ತಲೇ ಇದ್ದಿತು...."

ರಷ್ಯದ ಮತದಾರರು ತಮ್ಮ ಮತವನ್ನು ಚಲಾಯಿಸಿ, ಚುನಾಯಿಸಿ ಕಳಿಸಿದ ಡೆಪ್ಯುಟಿಗಳನ್ನು ಹೇಗೆ ಹಿಂಸಿಸಲಾಗಿದೆ ಎಂಬುದು ರಷ್ಯದ ಪಾರ್ಲಿಮೆಂಟಿನ ಸಂವಿಧಾನಿಕ ಸಮಿತಿಯ ಅಧ್ಯಕ್ಷರ ಮೇಲಿನ ಪತ್ರದಿಂದ ವೇದ್ಯವಾಗುತ್ತದೆ.

ಪಾಶ್ಚಿಮಾತ್ಯ ಪ್ರಸಾರ ಮಾಧ್ಯಮಗಳು ರಷ್ಯದಲ್ಲಿ ನಡೆಯುತ್ತಿರುವುದನ್ನು ಮರೆಮಾಚುತ್ತಿವೆ. ಆ ಪ್ರಸಾರ ಮಾಧ್ಯಮಗಳಿಂದ ಪಡೆದ ಸುದ್ದಿಗಳನ್ನು ಭಾರತದ ಪ್ರಸಾರ ಮಾಧ್ಯಮಗಳು ಪ್ರಸಾರ ಮಾಡುತ್ತಿವೆ. ಯೆಲ್ಟಿನ್ ಸರ್ಕಾರವು ಅಲ್ಲಿಯ ಪ್ರಸಾರ ಮಾಧ್ಯಮಗಳನ್ನು ನಿಷೇಧಿಸಿದೆ. ರಷ್ಯದ ಬೆಳವಣಿಗೆಗಳ ಕುರಿತು ಜಾಗತಿಕ ಬಂಡವಾಳಶಾಹಿಯ ಪ್ರಪಂಚದ ಜನರು ಏನನ್ನು ತಿಳಿಯಬೇಕು ಎಂದು ಬಯಸುತ್ತದೆಯೋ ಆ ಸುದ್ದಿ ಮಾತ್ರ ಪ್ರಸಾರವಾಗುತ್ತಿದೆ. ಆದುದರಿಂದ "ಗಾರ್ಡಿಯನ್" ಪತ್ರಿಕೆಯ ಪ್ರಕಟಣೆ ಅಪರೂಪವಾಗಿದೆ, ಅಮೂಲ್ಯವಾಗಿದೆ.

ಪುಟ 8ನೋಡಿ

ರಫ್ತು ಅಭಿಮುಖ ಕೃಷಿ: ವಿಷ ವರ್ತುಲಕ್ಕೆ ಬಾಗಿಲು

ಪರ್ಯಾಯ ಕೃಷಿ ನೀತಿಯ ಮೇಲೆ ದೆಹಲಿಯಲ್ಲಿ ನಡೆದ ವಿಚಾರ ಗೋಷ್ಠಿಯ ಕೊನೆಯ ಗೋಷ್ಠಿಯಲ್ಲಿ ದೇಶದ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಪ್ರಭಾತ್ ಪಟ್ನಾಯಿಕ್ ಮಂಡಿಸಿದ ಪೇಪರ್‌ನ ಸಾರಾಂಶ ಇದು.

ಐ.ಎಂ.ಎಫ್.-ವಿಶ್ವಬ್ಯಾಂಕ್ ನಿರ್ದೇಶಿತ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮದ ಪರಿಣಾಮವಾಗಿ ದೇಶ ಸ್ವತಂತ್ರಗೊಂಡ ನಂತರ ಬೆಳೆಸಿದ ಆಹಾರ ರಕ್ಷಣಾ ವ್ಯವಸ್ಥೆ ಪೂರ್ಣವಾಗಿ ಕುಸಿದು ಬಿದ್ದು ಬರಗಾಲಗಳು ಹೆಚ್ಚಾಗಲಿವೆ.

ಈ ಕಾರ್ಯಕ್ರಮದ ಮುಖ್ಯ ಒತ್ತು ಸಹಾಯ ಧನಗಳನ್ನು ತೆಗೆದು ಹಾಕುವುದು, ವ್ಯಾಪಾರ ನಿರ್ಬಂಧಗಳನ್ನು ತೆಗೆದು ಹಾಕಿ ಅಂತರಿಕ ಬೆಲೆಗಳು ಮತ್ತು ಜಾಗತಿಕ ಬೆಲೆಗಳು ಸಮಾನವಾಗುವಂತೆ ಮಾಡುವುದು, ಎರಡು ತರಹದ ಬೆಲೆಗಳನ್ನು ತೆಗೆದು ಹಾಕುವುದು, ಸಾರ್ವಜನಿಕ ವಿತರಣಾ ಪದ್ಧತಿಯ ಕತ್ತು ಹಿಸುಕಿ ಅದು ಇನ್ನಿಲ್ಲದಂತೆ ಮಾಡುವುದು. ಇದಲ್ಲದೆ ದೊಡ್ಡ ಉತ್ಪಾದಕರಿಗೆ ಹೇಗೆ, ಯಾರಿಗೆ ಬೇಕಾದರೂ ಮಾರುವ ಸ್ವಾತಂತ್ರ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ವ್ಯಾಪಾರದಲ್ಲಿ ಪೂರ್ಣ ಸ್ವಾತಂತ್ರ್ಯ ಇತ್ಯಾದಿಗಳೂ ಸೇರಿವೆ. ಅಂತಿಮವಾಗಿ ಭೂ ಹಿಡುವಳಿ ಮಿತಿಯನ್ನೂ ಈ ಕ್ರಮಗಳು ತೆಗೆದು ಹಾಕುತ್ತವೆ.

ಇದರ ಪರಿಣಾಮವಾಗಿ ನಮ್ಮ ಜನರ ಬಳಕೆಗೆ ಕಡಿಮೆ ಆಹಾರ ಧಾನ್ಯ ಲಭ್ಯವಾಗುತ್ತದೆ. ದೊಡ್ಡ ರೈತರು ರಫ್ತಿನಿಂದ ಅಲ್ಪಕಾಲದಲ್ಲೇ ಹೆಚ್ಚು ಲಾಭ ಪಡೆಯುತ್ತಾರೆ. ದೀರ್ಘ ಕಾಲದಲ್ಲಿ ಇದು ನಮ್ಮ ಆಹಾರ ರಕ್ಷಣಾ ಪದ್ಧತಿಯನ್ನೇ ಹಾಳುಗೆಡುವುತ್ತದೆ. ಸಾಮ್ರಾಜ್ಯಶಾಹಿಗಳ ಅಂತರಾಷ್ಟ್ರೀಯ ವ್ಯಾಪಾರದ ಮೇಲಿನ ಹಿಡಿತದಿಂದಾಗಿ ಈ ರಫ್ತು ಸಹ ಸತತವಾಗಿ ಇರದೆ ದೇಶ ಬರೀ ಪ್ರಾಥಮಿಕ ಸರಕು ಉತ್ಪಾದಿಸುವ ಸ್ಥಳವಾಗಿ ಪರಿವರ್ತಿತವಾಗುತ್ತದೆ.

ಹಿಂದೆ ಬ್ರಿಟಿಷರು ನಮ್ಮನ್ನು ಆಳುತ್ತಿದ್ದ ಕಾಲದಲ್ಲಿ ಕೃಷಿಯಲ್ಲಿ ಸಾರ್ವಜನಿಕ ಹಣದ ಹೂಡಿಕೆ ಇಲ್ಲದ ಕಾರಣ ಕೃಷಿ ಅಭಿವೃದ್ಧಿ ಹೊಂದಲಿಲ್ಲ. ಇದಲ್ಲದೆ ಮುಕ್ತ ವ್ಯಾಪಾರವೂ ಇದ್ದುದರಿಂದ ತಲಾ ಆಹಾರ ಲಭ್ಯತೆ ತೀವ್ರ ಕಡಿಮೆಯಾಗಿ 1943ರ ಬಂಗಾಳದ ಬರಗಾಲ ಸಂಭವಿಸಿತು.

ಈ ಭಯಂಕರ ಅನುಭವದ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತದ ಸರ್ಕಾರ ಕೃಷಿಯಲ್ಲಿ ಸಾರ್ವಜನಿಕ ಹಣ ಹೂಡಿ, ನೀರಾವರಿ, ರಸಗೊಬ್ಬರ, ಬೀಜ ಸಂಶೋಧನೆ ಇವುಗಳಲ್ಲಿ ಅಭಿವೃದ್ಧಿ ಸಾಧಿಸಿತು. ಈ ಸರ್ಕಾರ ಮೂಲತಃ ಬಂಡವಾಳಶಾಹಿ-ಜಮೀನುದಾರಿ ಸ್ವಭಾವದ್ದಾದರೂ ಬರಗಾಲ ತಡೆಯಲು ಈ ಕ್ರಮಗಳನ್ನು ಕೈಗೊಂಡಿತು. ಆದ್ದರಿಂದಲೇ ನಾವು ಆಹಾರಧಾನ್ಯಗಳ ವಿಷಯದಲ್ಲಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಯಿತು.

ಹೊಸ ಆರ್ಥಿಕ ನೀತಿಯ ಕ್ರಮಗಳು ನಮ್ಮ ದೇಶವನ್ನು ಹಿಂದಿನ ವಸಾಹತುಶಾಹಿ ಪರಿಸ್ಥಿತಿಗೆ ಕೊಂಡೊಯ್ಯಲಿದೆ. ಉದಾಹರಣೆಗೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಆಂತರಿಕ ಬೆಲೆಗಿಂತ ಹೆಚ್ಚಾಗಿದೆ. ಕೇಂದ್ರ ಸರ್ಕಾರ ಅಕ್ಕಿಯನ್ನು ರಫ್ತುಮಾಡಲು ಯೋಚಿಸುತ್ತಿದೆ. ಈಗ ಸಾರ್ವಜನಿಕ ವಿತರಣಾ ಪದ್ಧತಿಗೆ ವಾಯುವ್ಯ ರಾಜ್ಯಗಳಿಂದ ಅಕ್ಕಿ ಸರಬರಾಜಾಗುತ್ತಿದೆ. ಈ ರಾಜ್ಯಗಳು ಅಕ್ಕಿಯನ್ನು ಬೆಳೆಯುತ್ತವೆ. ಆದರೆ ಬಳಸುವುದಿಲ್ಲ ಈ ಅಕ್ಕಿಯನ್ನು ರಫ್ತುಮಾಡಿದರೆ ದೇಶದ ಬಡ ಜನತೆ ಉಪವಾಸವಿರಬೇಕಾಗುತ್ತದೆ.

ಆಹಾರಧಾನ್ಯಗಳ ರಫ್ತಿನಿಂದ ವಿದೇಶೀ ವಿನಿಮಯ ಗಳಿಕೆ ಹೆಚ್ಚಾಗುತ್ತದೆ ಎಂಬ ಐ.ಎಂ.ಎಫ್. ಪರವಾದವೊಂದಿದೆ. ಆದರೆ ಇದು ನಿಜವಲ್ಲ. ಈಗ ಐ.ಎಂ.ಎಫ್. ಎಲ್ಲ ಮೂರನೇ ಜಗತ್ತಿನ ರಾಷ್ಟ್ರಗಳು ಆಹಾರ ರಫ್ತು ಮಾಡಬೇಕೆನ್ನುತ್ತದೆ. ಒತ್ತಡವನ್ನು ಹೇರುತ್ತಿದೆ. ಇದರ ಪರಿಣಾಮವಾಗಿ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ತೀವ್ರವಾಗಿ ಇಳಿಯುತ್ತದೆ. ಇದಲ್ಲದೆ ಐ.ಎಂ.ಎಫ್. ನೀತಿಗಳನ್ನೇ ಅನುಸರಿಸಿದರೆ ರೂಪಾಯಿಯ ಅಪಮೌಲ್ಯೀಕರಣವೂ ಹೆಚ್ಚಾಗಿ ರಫ್ತುಗಳಿಕೆ ಕಡಿಮೆಯಾಗುತ್ತವೆ.

ಕೃಷಿ ಉತ್ಪನ್ನಗಳ ಬೆಲೆ ಹೆಚ್ಚಿದಾಗ ಉತ್ಪಾದನೆಯೂ ಹೆಚ್ಚುತ್ತದೆ ಎಂಬ ವಾದವೊಂದಿದೆ. ಉತ್ಪನ್ನಗಳ ಬೆಲೆ ಹೆಚ್ಚಿದರೆ ಅದರಿಂದ ಆಕರ್ಷಿತಗೊಂಡು ರೈತ ಹೆಚ್ಚು ಉತ್ಪಾದಿಸುತ್ತಾನೆ ಎಂಬುದು ಅದರ ತಿರುಳು ಆದರೆ ಬೆಲೆಯೊಂದೇ ಈ ಹೆಚ್ಚಿನ ಉತ್ಪಾದನೆಗೆ ಕಾರಣವಲ್ಲ. ನಿಜ. ಬೆಲೆಯೂ ಒಂದು ಕಾರಣ. ಆದರೆ ಸಾರ್ವಜನಿಕ ಹಣ ಹೂಡಿಕೆ ಇಲ್ಲದಿದ್ದರೆ ಹಲವು ಅಂತರ್‍ರಚನೆಗಳೇ ಇರುವುದಿಲ್ಲ. ನೀರಾವರಿ, ರಸಗೊಬ್ಬರ, ಉತ್ತಮ ಬೀಜ ಇತ್ಯಾದಿಗಳೇ ಲಭ್ಯವಿಲ್ಲದಿದ್ದಲ್ಲಿ ಉತ್ಪಾದನೆ ಬರೀ ಬೆಲೆಯನ್ನು ನೋಡಿ ಹೆಚ್ಚಾಗುವುದಿಲ್ಲ.

ಕೃಷಿ ವ್ಯಾಪಾರ - ಸಾಮ್ರಾಜ್ಯಶಾಹಿ ತಂತ್ರ

ಕಾರ್ಖಾನೆಯಲ್ಲಿ ಉತ್ಪಾದಿಸುವ ವಸುಗಳನ್ನು ಯಾವ ಪ್ರದೇಶದಲ್ಲಾದರೂ ಉತ್ಪಾದಿಸಬಹುದು. ಆದರೆ ಕೃಷಿ ನಿರ್ದಿಷ್ಟ ಪ್ರದೇಶ, ಹವಾಮಾನ ಇತ್ಯಾದಿಗಳನ್ನು ಬೇಡುವಂತಹದ್ದು, ಎಲ್ಲ ಬೆಳೆಗಳನ್ನು ಎಲ್ಲ ಪ್ರದೇಶಗಳಲ್ಲಿ ಬೆಳೆಯುವುದು ಅಸಾಧ್ಯ. ಉಷ್ಣವಲಯದಲ್ಲಿ ಮಾತ್ರ ಬಹುತೇಕ ಬೆಳೆಗಳು ಬೆಳೆಯುತ್ತವೆ. ಮೂರನೇ ಜಗತ್ತಿನ ರಾಷ್ಟ್ರಗಳಿರುವುದು ಉಷ್ಣವಲಯದಲ್ಲಿ. ಐ.ಎಂ.ಎಫ್.ನ ಕಾರ್ಯಕ್ರಮ ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸುವುದು ಈ ದೃಷ್ಟಿಯಿಂದ. ಯಾಕೆಂದರೆ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಬೆಳೆ ಪದ್ಧತಿಯನ್ನೇ ಸಾಮ್ರಾಜ್ಯಶಾಹಿಗಳ ಅನುಕೂಲಕ್ಕೆ ತಕ್ಕಂತೆ ಏರುಪೇರು ಮಾಡುವುದೇ ಈ ಕಾರ್ಯಕ್ರಮದ ಉದ್ದೇಶ.

ಪಾಶ್ಚಿಮಾತ್ಯ ದೇಶಗಳ ಮಾರುಕಟ್ಟೆಗಳಲ್ಲಿ 12,000ಕ್ಕೂ ಹೆಚ್ಚು ತರಹದ ಆಹಾರ ಪದಾರ್ಥಗಳು ಮಾರಲ್ಪಡುತ್ತವೆ. ಇದರಲ್ಲಿ ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚು ಉಷ್ಣವಲಯ ಮತ್ತು ಅರೆ ಉಷ್ಣವಲಯದಿಂದ ಆಮದಾದವು. ಚಹಾ, ಕಾಫಿಯಿಂದ ಹಿಡಿದು ಸಕ್ಕರೆ, ಕೋಕೋ, ಖಾದ್ಯತೈಲ, ಹಣ್ಣು, ಸಾಂಬಾರ, ಜಿನಸು, ತರಕಾರಿ, ಚಾಕೋಲೇಟುಗಳು, ಹಾಗೂ ಇತರೆ ಸಾವಿರಾರು ಪದಾರ್ಥಗಳು ಉತ್ಪನ್ನವಾಗುವುದೇ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಇವುಗಳಿಲ್ಲದೆ ಪಾಶ್ಚಿಮಾತ್ಯರು ಬದುಕಬಲ್ಲರೆ?

ತಮ್ಮ ಜೀವನ ಮಟ್ಟವನ್ನು ಇನ್ನೂ ಉತ್ತಮಗೊಳಿಸಲು ಅವರಿಗೆ ಪ್ರಾಥಮಿಕ ಪದಾರ್ಥಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡಿಕೊಳ್ಳಬೇಕು. ಇದನ್ನು ಸಾಧಿಸಲು ನಮ್ಮ ಉತ್ಪಾದನೆಯನ್ನು ಅವರು ನಿಯಂತ್ರಿಸಬೇಕು. ಐ.ಎಂ.ಎಫ್. ಸಾಮ್ರಾಜ್ಯಶಾಹಿಗಳ ಈ ಆಸಕ್ತಿಯನ್ನು ಪೂರೈಸುವತ್ತ ಕೆಲಸ ಮಾಡುತ್ತದೆ. ಮೂರನೇ ಜಗತ್ತಿನ ಜನರಿಗೆ ಆಹಾರ ರಕ್ಷಣೆ ಇರುವುದು ಸಾಮ್ರಾಜ್ಯಶಾಹಿಗಳಿಗೆ ಬೇಕಾಗಿಲ್ಲ.

ಆಫ್ರಿಕಾದ ಉದಾಹರಣೆ:

ಇನ್ನೊಂದು ವಾದವಿದೆ. ವಾಣಿಜ್ಯ ಬೆಳೆಗಳನ್ನು ಬೆಳೆದು ಅವನ್ನು ರಫ್ತು ಮಾಡಿ ಬಂದ ಹಣದಿದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬಹುದು ಎಂಬುದೇ ಆ ವಾದ. ಆಫ್ರಿಕಾದಲ್ಲಿ ಇಂತಹ ಪ್ರಯೋಗ ನಡೆಯಿತು. ಆಂತರಿಕವಾಗಿ ಆಹಾರಧಾನ್ಯ ಬೆಳೆವುಯುದನ್ನು ಬಿಟ್ಟ ಮೇಲೆ ಆಮದು ಮಾಡಿಕೊಳ್ಳಲು ಆದೇಶಗಳಲ್ಲಿ ವಿದೇಶೀ ವಿನಿಮಯವಿರಲಿಲ್ಲ. ಇದು ಜನ ಉಪವಾಸ ಬೀಳುವಂತೆ ಮಾಡಿತು. ಇಂತಹ ಪರಿಸ್ಥಿತಿಯಲ್ಲಿ ಸಿಕ್ಕ ದೇಶಗಳು ಮತ್ತೆ ಈ ಪಾಶ್ಚಾತ್ಯ ರಾಷ್ಟ್ರಗಳ ಮುಂದೆ ಆಹಾರ ನೆರವಿಗಾಗಿ ಕೈಯೊಡ್ಡಬೇಕಾಯಿತು. ಆಫ್ರಿಕಾದ ದೇಶಗಳ ಬೆಳೆ ಪದ್ಧತಿಯನ್ನೇ ನಾಶ ಮಾಡಿದ ಸಾಮ್ರಾಜ್ಯಶಾಹಿಗಳು ನೆರವು ನೀಡುವ ನೆಪದಲ್ಲಿ ಇನ್ನೂ ಹೆಚ್ಚು ರಫ್ತು ಆಧಾರಿತ ಕೃಷಿ ಮಾಡಲು ಸಲಹೆ ನೀಡಿದವು.

ಭಾರತ ಅಂತಹ ವಿಷವೃತ್ತದೊಳಗೆ ಬೀಳುವ ಅಪಾಯ ಈಗ ಇದೆ!

ಇತಿಹಾಸ ಪುಟಗಳಿಂದ

ರಜನಿ ಪಾಮೇ ದತ್



ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ

ಕಾಂ. ಇ.ಎಂ.ಎಸ್. ೬

1934ರ ಮೇ ತಿಂಗಳಲ್ಲಿ ನಡೆದ ಪಾಟ್ನಾದ ತೀರ್ಮಾನವನ್ನನುಸರಿಸಿ ಸೋಷಲಿಸ್ಟ್ ಪಾರ್ಟಿಯ ಪೂರ್ವಭಾವಿ ಸಭೆ ಹಾಗೂ ಅಕ್ಟೋಬರ್‌ನಲ್ಲಿ ಬಾಂಬೆಯಲ್ಲಿ ನಡೆದ ಒಂದನೇ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯ ಸಮ್ಮೇಳನದ ಪ್ರತಿನಿಧಿಯಾಗಿ ಭಾಗವಹಿಸಿದ್ದೆ.

ಬಹುಶಃ ಪಾಟ್ನಾದಲ್ಲೋ ಅಥವಾ ಬಾಂಬೆಯಲ್ಲೋ, ನನಗೆ ಸರಿಯಾಗಿ ನೆನಪಿಲ್ಲ, ಒಂದು ಕಿರುಹೊತ್ತಿಗೆಯನ್ನು ಎಲ್ಲರಿಗೂ ಹಂಚಲಾಯಿತು. ಅದರ ಹಣೆಪಟ್ಟಿ ಈ ರೀತಿಯಾಗಿತ್ತು. "ಕಾಂಗ್ರೆಸ್ ಮತ್ತು ಸೋಷಲಿಸಂ- ಎರಡೂ ಪರಸ್ಪರ ವೈರುಧ್ಯಗಳು".

ಕಾಂಗ್ರೆಸ್ ಒಂದು ಬೂರ್ಜ್ವಾ ಪಕ್ಷವಾಗಿದ್ದು, ಸಮಾಜವಾದದ ದಾರಿಯ ಕಡೆ ಅದನ್ನು ಕೊಂಡೊಯ್ಯುವುದು ಕೇವಲ ವ್ಯಾಮೋಹ ಮಾತ್ರವಾಗುತ್ತದೆ ಎಂದು ಅದರಲ್ಲಿತ್ತು. ಆ ಕಿರುಹೊತ್ತಿಗೆಯ ಕರ್ತೃ ಆರ್.ಪಿ.ಡಿ ಎಂದೇ ಹೆಸರಾಗಿದ್ದ ರಜನಿ ಪಾಮೇದತ್ ಆಗಿದ್ದರು. ದತ್‌ರವರ ತಂದೆ ಬೆಂಗಾಳಿಯಾಗಿದ್ದರು. ಇವರು ಹುಟ್ಟು ಬಾಲ್ಯ ಬೆಳವಣಿಗೆಯುಲ್ಲವೂ ಇಂಗ್ಲೆಂಡ್‌ನಲ್ಲಾದ್ದರಿಂದ ಜೀವನವೆಲ್ಲಾ ಇಂಗ್ಲೀಷ್‌ಮಯವಾಗಿತ್ತು. ಇವರು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಪ್ರಾರಂಭಿಕ ಮುಂಚೂಣಿ ನಾಯಕರುಗಳಲ್ಲಿ ಒಬ್ಬರಾಗಿದ್ದರು.

ಇವರು ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ ಎಕ್ಸಿಕ್ಯೂಟೀವ್ ಕಮಿಟಿ (ಕಾರ್ಯಕಾರಿ ಸಮಿತಿ) ಸದಸ್ಯರಾಗಿದ್ದರು. 'ಲೇಬರ್ ಮಂತ್ಲಿ' ಎಂಬ ಮಾಸಿಕ ಪತ್ರಿಕೆಯ ಸಂಪಾದಕರಾಗಿದ್ದರು. ಈ ಪತ್ರಿಕೆಯಲ್ಲಿ ಇವರು ಬರೆಯುತ್ತಿದ್ದ ಮಾಸಿಕ ಟಿಪ್ಪಣಿ (ಮಂತ್ಲಿ ನೋಟ್ಸ್) ಗಳು ಅಂದಿನ ಭಾರತೀಯ ಕಮ್ಯುನಿಸ್ಟರ ರಾಜಕೀಯ ಮತ್ತು ಸೈದ್ಧಾಂತಿಕ ಬೆಳವಣಿಗೆಗೆ ಸಹಾಯ ಮಾಡುತ್ತಿದ್ದವು. ಇಂತಹ ಲೇಖನಗಳ ಸರಮಾಲೆಯಲ್ಲೇ "ಕಾಂಗ್ರೆಸ್ ಮತ್ತು ಸಮಾಜವಾದ- ಪರಸ್ಪರ ವೈರುಧ್ಯಗಳು" ಎಂಬ ಲೇಖನ ಬಂದದ್ದು.

ಇದಾದ ಕೆಲ ತಿಂಗಳುಗಳ ನಂತರ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ರಾಜಕೀಯ ಸ್ವಭಾವದಲ್ಲಿ ಬದಲಾವಣೆಯಾಯ್ತು.

ಇದು ಕಾಂಗ್ರೆಸ್ ಪಕ್ಷವನ್ನು ಸಮಾಜವಾದಿ ಧೋರಣೆಗೆ ಬದ್ಧವಾಗಿಸುವುದರ ಬದಲಿಗೆ ಕಾಂಗ್ರೆಸ್ ಪಕ್ಷವನ್ನೂ ಮೂಲತಃ ಅದೊಂದು ಸಾಮ್ರಾಜ್ಯಶಾಹಿ ವಿರೋಧಿ ಸಂಘಟನೆ ಎಂದು ಪರಿಗಣಿಸಿತ್ತು. ಇದಕ್ಕೆ ಸಮಾನವಾಗಿ ಕಮ್ಯುನಿಸ್ಟರ ಧೋರಣೆಯಲ್ಲಿ ಬದಲಾವಣೆಗಳು ಬಂದವು. ಕಾಂಗ್ರೆಸ್ ನೇತೃತ್ವದಲ್ಲಿದ್ದ ರಾಷ್ಟ್ರೀಯ ಚಳುವಳಿಯ ಕುರಿತು ಕಮ್ಯುನಿಸ್ಟರ ನಿಲುವಿನ ಬಗ್ಗೆ 1935 ರಲ್ಲಿ ಸೇರಿದ ಕಮ್ಯುನಿಸ್ಟ್ ಅಂತರಾಷ್ಟ್ರೀಯದ 7ನೇ ಸಮ್ಮೇಳನದಲ್ಲಿ ಈ ಬದಲಾವಣೆ ಮಾಡಲಾಯ್ತು. ಸಮಾಜವಾದಿಗಳು ಕಮ್ಯುನಿಸ್ಟರು ಮತ್ತು ಸಾಮ್ರಾಜ್ಯಶಾಹಿ ವಿರೋಧಿಗಳು ಸೇರಿದಂತೆ ಕಾಂಗ್ರೆಸ್ ಪಕ್ಷವನ್ನು ಒಂದು ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತಾ ವೇದಿಕೆಯಾಗಿ ಮಾರ್ಪಡಿಸಬೇಕೆಂಬ ನಿಲುವನ್ನೂ ತಾಳಲು ಕಮ್ಯುನಿಸ್ಟ್ ಅಂತರಾಷ್ಟ್ರೀಯ ಮತ್ತು ಭಾರತದ ಕಮ್ಯುನಿಸ್ಟರು ಸೇರಿ ನಿರ್ಧರಿಸಿದರು.

ಆರ್.ಪಿ. ದತ್ ಮತ್ತು ಬೆಲ್ ಬ್ರೆಡ್ಲಿ ಸೇರಿ ಭಾರತದ ಕಮ್ಯುನಿಸ್ಟರಿಗೆ ಇಂತಹ ಮಾರ್ಗದರ್ಶನದ ದಾರಿಯನ್ನು ರೂಪಿಸದರು. ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ನಿರ್ದೇಶವನ್ನುಸರಿಸಿ ಬ್ರೆಡ್ಲಿಯವರು ಭಾರತಕ್ಕೆ ಬಂದು ಭಾರತದಲ್ಲಿ ಕಾರ್ಮಿಕವರ್ಗದ ಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿ ಸಾಕಷ್ಟು ಶ್ರಮಿಸಿದರು. ಬೆಲ್ ಬ್ರೆಡ್ಲಿಯವರು ಬ್ರಿಟಿಷ್ ಕಮ್ಯುನಿಸ್ಟರಾಗಿದ್ದು ಮುಝಫರ್ ಅಹ್ಮದ್, ಡಾಂಗೆ ಸೇರಿದಂತೆ ಇವರ ಮೇಲೆ ಹೂಡಲಾಗಿದ್ದ ಮೀರತ್ ಪಿತೂರಿ ಕೇಸಿನಲ್ಲಿ ಬ್ರೆಡ್ಲಿಯವರೂ ಸಹ ಆಪಾದಿತರಾಗಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೆ ಇವರು ತಮ್ಮ ರಾಷ್ಟ್ರಕ್ಕೆ ಹೋದರು. ಈ ರೀತಿ ಅಲ್ಲಿಗೆ ಹೋದ ಬ್ರೆಡ್ಲಿ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಮುಖಂಡರಾಗಿ ಕೆಲಸ ಮಾಡುತ್ತಾ ಬಂದರು. ದತ್ ಮತ್ತು ಬ್ರೆಡ್ಲಿ ರೂಪಿಸಿ ಕೊಟ್ಟ ದಾರಿಯು ಭಾರತದ ಕಮ್ಯುನಿಸ್ಟ್ ಪಕ್ಷ ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಬೆಳೆಯಲು ಸಹಾಯ ಮಾಡಿತು.

ಇದಕ್ಕೂ ಮುಂಚೆ ಭಾರತದ ಕಮ್ಯುನಿಸ್ಟರಿಗೆ ಆರ್.ಪಿ. ದತ್‌ರವರು ಸಾಕಷ್ಟು ಪರಿಚಿತರಾಗಿದ್ದರು. ಇವರು ಬರೆದ ಮೇರು ಗ್ರಂಥವಾದ "ಇಂದಿನ ಭಾರತ" (India Today) ವು ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ಬರೆದಿದ್ದುದಾಗಿತ್ತು. ಭಾರತದ ಕಮ್ಯುನಿಸ್ಟರಿಗೆ ಸಂಘಟನಾತ್ಮಕವಾಗಿ ಮತ್ತು ಸೈದ್ಧಾಂತಿಕವಾಗಿ ಬೆಳೆಯಲು ಹೆಚ್ಚಿನ ಸಹಾಯ ಮಾಡಿದ ಈ ಗ್ರಂಥವು ಲೇಖನಗಳ ರೂಪದಲ್ಲಿ Labour Monthly ಯಲ್ಲಿ ಪ್ರಕಟಗೊಂಡಿತ್ತು.

ಇದಲ್ಲದೆ ವಿದ್ಯಾಭ್ಯಾಸದ ಕಾರಣಕ್ಕಾಗಿ ಇಂಗ್ಲೆಂಡ್‌ಗೆ ಹೋಗಿದ್ದ ಭಾರತದ ವಿದ್ಯಾರ್ಥಿಗಳನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಕಡೆ ಸೆಳೆಯಲು ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷವು ಇವರನ್ನು ನೇಮಿಸಿತು. ಆದ್ದರಿಂದ ಅಂದಿನ ಪೀಳಿಗೆಯ ಭಾರತೀಯ ಕಮ್ಯುನಿಸ್ಟರಿಗೆ ಆರ್.ಪಿ.ಡಿಯವರು ಗುರು ಮತ್ತು ಮಾರ್ಗದರ್ಶಕರಾಗಿದ್ದರು.

ಆದರೆ ಕೌಟುಂಬಿಕ ಸಂಬಂಧವನ್ನು ಭಾರತದ ಜೊತೆ ಹೊಂದಿದ್ದರೂ ಭಾರತವನ್ನು ಕಣ್ಣಾರೆ ಕಾಣದವರಾಗಿದ್ದರು ಆರ್.ಪಿ.ಡಿ. ಆರ್.ಪಿ.ಡಿ.ಯವರು ಬ್ರಿಟನ್ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕಮ್ಯುನಿಸ್ಟ್ ನಾಯಕರಾಗಿದ್ದರೂ ಭಾರತದ ಜೊತೆ ಸಂಬಂಧ ಬೆಳೆಸಲು ಕಾರಣವಾಗಿದು ಅವರ ಕೌಟುಂಬಿಕ ಹಿನ್ನೆಲೆಯೇ.

1964 ರಲ್ಲಿ ಮೊಟ್ಟಮೊದಲಬಾರಿಗೆ ಇವರು ಭಾರತಕ್ಕೆ ಭೇಟಿ ನೀಡಿದರು. ಇದು ಅವರ ಕೊನೇ ಸಂದರ್ಶನವೂ ಆಗಿತ್ತು. ಆಗ ತಮ್ಮ ತಂದೆಯವರು ಕಲ್ಕತ್ತದ ಮನೆಗೆ ಭೇಟಿ ಕೊಟ್ಟರು. ಭಾರತದ ಹಲವಾರು ಕಡೆ ಪ್ರವಾಸಮಾಡಿದರೂ ಮುಖ್ಯವಾಗಿ ತಮ್ಮ ವಾಸ್ತವ್ಯವನ್ನು ಕಳೆದದ್ದು ಮುಂದ್ಯೆಯಲ್ಲಿ. ಆ ಕಾಲದಲ್ಲಿ ಇವರ ಜೊತೆ ಸಂಪರ್ಕ ಬೆಳೆಸಲು ನನಗೆ ಸಾಧ್ಯವಾಯಿತು.

ಪಕ್ಷದ ಬಹಳ ಮುಖ್ಯವಾದ ಘಟ್ಟದಲ್ಲೇ ಆರ್.ಪಿ.ಡಿಯವರು ಭಾರತಕ್ಕೆ ಭೇಟಿ ಕೊಟ್ಟದ್ದು ಮುಂದ್ಯೆನ ಪಕ್ಷದ ಕೇಂದ್ರ ಕಛೇರಿಯಲ್ಲಿ ಪಕ್ಷದ ಪಿ.ಬಿ. ಮತ್ತು ಕೇಂದ್ರ ಸಮಿತಿ ಸದಸ್ಯರೊಡನೆ ಮಾತುಕತೆ ನಡೆಸಿದರು. 'ಕ್ವಿಟ್ ಇಂಡಿಯಾ' ಹೋರಾಟದ ಕಾಲದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲುಂಟಾದ ಬಿರುಕಿನ ಸಂದರ್ಭದಲ್ಲಿ ಮತ್ತು ಯುದ್ಧಾನಂತರದಲ್ಲಿ ಭಾರತದಲ್ಲಿ ಬೆಳೆದು ಬಂದ ಕ್ರಾಂತಿಕಾರಿ ಹೋರಾಟಗಳಿಗೆ ಪಕ್ಷ ನೇತೃತ್ವ ಕೊಡಲು ತಯಾರಾಗುವ ಕಾಲಘಟ್ಟವಾಗಿತ್ತು ಆಗ. ಕ್ವಿಟ್ ಇಂಡಿಯಾ ಹೋರಾಟ ಮತ್ತು ಪ್ರತ್ಯೇಕ ಪಾಕಿಸ್ತಾನದ ಪ್ರಶ್ನೆಗಳಲ್ಲಿ ಪಕ್ಷ ತೆಗೆದುಕೊಂಡ ನಿಲುವುಗಳ ಸರಿ ತಪ್ಪುಗಳನ್ನು ವಿಮರ್ಶಿಸಿ ಸರಿಯಾದ ಮಾರ್ಗದಲ್ಲಿ ನಡೆಯುವಂತ ಕಾಲಘಟ್ಟವಾಗಿತ್ತು ಆಗ. ಇಂತಹ ನಿಲುವಿನ ಆಧಾರದಲ್ಲಿ ಚಳುವಳಿಯನ್ನು ಕೊಂಡೊಯ್ಯಲು ಪಕ್ಷದ ನಾಯಕತ್ವಕ್ಕೆ ಆರ್.ಪಿ.ಡಿಯವರ ಜೊತೆಗಿನ ಚರ್ಚೆ ಬಹಳ ಸಹಾಯ ಮಾಡಿತು.

ಇದಾದನಂತರ 1948 ರಲ್ಲಿ ಕಲ್ಕತ್ತದಲ್ಲಿ ನಡೆದ ಪಕ್ಷದ ಎರಡನೇ ಕಾಂಗ್ರೆಸ್‌ನ ಸ್ವವಿಮರ್ಶೆಯಲ್ಲಿ ಆರ್.ಪಿ.ಡಿಯವರ ಜತೆಗಿನ ಚರ್ಚೆಯು ಪಕ್ಷವನ್ನು ಬಲಪಂಥೀಯ ವಾದದಿಂದ ರಕ್ಷಿಸಿತು. ಆದರೆ ಎಡಪಂಥೀಯ ವಾದವು ಪಕ್ಷವನ್ನು ಹಿಡಿಯಿತು. ಇಂತಹ ಪರಿಸ್ಥಿತಿಯಿಂದ ಪಕ್ಷವನ್ನು ರಕ್ಷಿಸಲು ಸಹಾಯಮಾಡಿದ್ದು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಸಂಘಟನೆಯ ಪತ್ರಿಕೆಯಾಗಿದ್ದ ಕೋಮಿಲ್ ಫಾಮ್ (Comil Fom). 1950 ರ ಜನವರಿಯಲ್ಲಿ ಪತ್ರಿಕೆಯಲ್ಲಿ ಪ್ರಕಟವಾದ ಸಂಪಾದಕೀಯವನ್ನು ರಚಿಸುವಲ್ಲಿ ಆರ್.ಪಿ.ಡಿಯವರೇ ಪ್ರಧಾನ ಪಾತ್ರ ವಹಿಸಿದದರು.

ಆರ್.ಪಿ.ಡಿಯವರು ಮತ್ತು ಭಾರತ ಕಮ್ಯುನಿಸ್ಟರ ಸಂಬಂಧದ ಪ್ರಶ್ನೆಯಲ್ಲಿ ನನ್ನ ಮಟ್ಟಿಗೆ ಹೇಳುವುದಾದರೆ ನನ್ನ ಮತ್ತು ಅವರ ವ್ಯಕ್ತಿಪರ ಸಂಬಂಧವು ಸ್ಪಷ್ಟವಾಗಿ ರೂಪಗೊಂಡದ್ದು 1960 ರ ಸೆಪ್ಟೆಂಬರ್‌ನಲ್ಲಿ ಜರ್ಮನ್ ಪ್ರಜಾಪ್ರಭುತ್ವ ಗಣರಾಜ್ಯದ (ಜಿ.ಡಿ.ಆರ್.) ಮೊದಲ ಅಧ್ಯಕ್ಷರಾದ ಮತ್ತು ಅ.ರಾ ಕಮ್ಯುನಿಸ್ಟ್ ಚಳುವಳಿಯ ಮುಖಂಡರಾದ ವಿಲಿಯಂ ಪಿಕ್‌ರವರು ಇದೇ ಸಂದರ್ಭದಲ್ಲಿ ನಿಧನ ಹೊಂದಿದ್ದರು. ಇವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಭಾರತದ ಕಮ್ಯುನಿಸ್ಟ್ ಪಕ್ಷವು ನನ್ನನ್ನು ಕಳುಹಿಸಿತು. ಬ್ರಿಟಿಷ್ ಪಕ್ಷದ ಪ್ರತಿನಿಧಿಯಾಗಿ ಆರ್.ಪಿ.ಡಿಯವರು ಬಂದದ್ದು ನನಗೆ ತಿಳಿಯಿತು. ಅವರನ್ನು ಕಾಣಬೇಕೆಂಬ ಮನದಾಸೆಯನ್ನು ಅಲ್ಲಿದ್ದ ಕಾಮ್ರೆಡ್ಸ್‌ಗಳಲ್ಲಿ ವ್ಯಕ್ತಪಡಿಸಿದೆ. ಈ ರೀತಿ ನಾನು ಹೇಳುವ ಮೊದಲೇ ಆರ್.ಪಿ.ಡಿ.ಯವರು ನನ್ನನ್ನು ಕಾಣಬೇಕೆಂದು ಆಶಿಸಿದ್ದರು.

ಈ ಸಂದರ್ಭದಲ್ಲಿ ಮೊಮ್ಮಗನೊಬ್ಬನ ಬಳಿ ಅಜ್ಜ ಮಾತನಾಡುವ ಪ್ರೀತಿ ಮತ್ತು ಇಬ್ಬರು ಕಮ್ಯುನಿಸ್ಟರ ನಡುವಿನ ಭ್ರಾತೃತ್ವದ ಭಾವನಾಂತರಾಳವನ್ನೂ ಅಲ್ಲಿ ಕಾಣಲು ನನಗೆ ಸಾಧ್ಯವಾಯಿತು. ಈ ಸಂದರ್ಭವು ನನ್ನನ್ನು ಭಾವಪರವಶನನ್ನಾಗಿ ಮಾಡಿತು.

ಮುಂದಿನ ಕಾಲಘಟ್ಟದಲ್ಲಿ ಅನೇಕ ಅಂತರಾಷ್ಟ್ರೀಯ ಕಮ್ಯುನಿಸ್ಟ್ ನಾಯಕರು ನನಗೆ ಆತ್ಮೀಯರಾದರೂ ಆರ್.ಪಿ.ಡಿಯವರ ರೀತಿಯಲ್ಲಿ ನನ್ನ ಮನದಾಳದಲ್ಲಿ ನಿಂತವರು ಬೇರಾರೂ ಇಲ್ಲವೆಂದರೆ ತಪ್ಪಾಗಲಾರದು. ಏಕೆಂದರೆ, ಬ್ರಿಟಿಷ್ ಪ್ರಜೆಯಾಗಿದ್ದರೂ, ಮೂಲತಃ ಭಾರತೀಯ ಬೇರನ್ನು ಹೊಂದಿದ್ದ ಇವರ ರೀತಿಯಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷದ ಪ್ರಾರಂಭಿಕ ಕಾಲದಲ್ಲಿ ಅದನ್ನು ಕಟ್ಟಿ ಪೋಷಿಸಿದ ವಿದೇಶಿಯರಾರೂ ಇಲ್ಲವಾದ್ದರಿಂದ.

ಸಂಗ್ರಹ - ಭಾಷಾನುವಾದ
ಇ.ಕೆ.ಎನ್. ರಾಜನ್, ಪ್ರಕಾಶ್.ಕೆ.

ಅದ್ವಾನಿಯವರೇ ಸೂಟ್‌ಕೇಸ್ ರಾಜಕೀಯ ಬೇಡ

ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಇತ್ತೀಚೆಗೆ ಹುಯಿಲೆಬ್ಬಿಸುತ್ತಾ ನಮ್ಮನ್ನು ಅಧಿಕಾರಕ್ಕೆ ತಂದರೆ ಭ್ರಷ್ಟಾಚಾರ ಮುಕ್ತ, ಲಂಚ ಮುಕ್ತ ರಾಜ್ಯಭಾರ ಮಾಡುವುದಾಗಿ ಆಶ್ವಾಸನೆಯನ್ನು ಎಲ್ಲೆಡೆ ಬಿಜೆಪಿ ನಾಯಕರು ಘೋಷಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಆದರೆ ಅದೇ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೇಟ್ ನೀಡುವಲ್ಲಿ ಮಾಡಿದ ಭ್ರಷ್ಟಾಚಾರದ ದಿಲ್ಲಿಯಲ್ಲಿ ನಡೆದಿದೆ. ಕಾಂಗ್ರೆಸ್‌ನವರಿಗಿಂತ ಭ್ರಷ್ಟಾಚಾರದಲ್ಲಿ ನಾವೇನು ಕಡಿಮೆಯಲ್ಲ ಎಂದು ತೋರಿಸುತ್ತದೆ ಈ ಘಟನೆ.

ದಿಲ್ಲಿ ವಿಧಾನಸಭೆಗೆ ಸ್ಪರ್ಧಿಸಲು ಟಿಕೇಟ್ ನೀಡಲು ಹಣವನ್ನು ಲಂಚವಾಗಿ ನೀಡಿ ಟಿಕೇಟ್ ಪಡೆದಿರುವವರ ಸಂಖ್ಯೆ ಗಣನೀಯವಾಗಿದೆ ಎಂದು 'ದಿ ಪಯೋನೀರ್' ಪತ್ರಿಕೆ ವರದಿ ಮಾಡಿದೆ. ದಿಲ್ಲಿಯ ಬದ್ಲಿ ಮಂಡಲದ ಬಿಜೆಪಿ ಅಧ್ಯಕ್ಷ ರಾಜೇಂದರ್ ಯಾದವ್ ಬಿಜೆಪಿ ಉನ್ನತ ನಾಯಕರಿಗೆ ಲಂಚ ನೀಡಿ ಜೈ ಭಗವಾನ್ ಗೋಯಲ್ ಎಂಬುವರು ಟಿಕೇಟ್ ಪಡೆದಿದ್ದಾರೆ ಎಂದು ಆಪಾದಿಸಿದ್ದಾರೆ. ಹೀಗೆ ಟಿಕೇಟ್ ನೀಡುವಿಕೆಯಲ್ಲಿ ಗೋಲ್‌ಮಾಲ್ ನಡೆದಿದೆಯೆಂದು ಅವರದೇ ಪಕ್ಷದ ಕಾರ್ಯಕರ್ತರು ಆಪಾದಿಸುತ್ತಿದ್ದಾರೆ. ಹೀಗಿದೆ ಸ್ವಚ್ಛ ದಕ್ಷ ಪಕ್ಷದ ಒಳವ್ಯವಹಾರ. ದಿಲ್ಲಿಯ ಬಿಜೆಪಿಯ ಉನ್ನತ ನಾಯಕರೊಬ್ಬರು ರೊಚ್ಚಿಗೆದ್ದ ಪಕ್ಷದ ಕಾರ್ಯಕರ್ತರಿಂದ ಹೊಡೆತ ತಿನ್ನುವಷ್ಟರ ಮಟ್ಟಿಗೆ ಬಿಜೆಪಿಯ ಭ್ರಷ್ಟಾಚಾರ ಪರಕಾಷ್ಠೆ ಮುಟ್ಟಿದೆ. ಹೀಗೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಲಂಚ ಕೊಟ್ಟು ಟಿಕೇಟ್ ಪಡೆದವರ ಪಟ್ಟಿ ದೇಶವು ತ್ತಲೇ ಇದೆಯಂತೆ.

ಜನಪ್ರತಿನಿಧಿಗಳ ಆಯ್ಕೆಯ ವಿಷಯದಲ್ಲೂ ಬಿಜೆಪಿ ಕಾಂಗ್ರೆಸ್‌ಗಿಂತ ಒಂದ್ಹೆಜ್ಜೆ ಮುಂದೆ ಇದೆ ಎನ್ನುವುದು ನಮಗೆ ಹೊಸತೇನೂ ಅಲ್ಲದ ಸುದ್ದಿಯಾಗಿದೆ. ಆದರೆ ಬಿಜೆಪಿಗೆ ಒಂದು ಅವಕಾಶ ಕೊಟ್ಟು ನೋಡೋಣ ಎನ್ನುವವರು ಜಾತೀಯ ಮತೀಯ ಭಾವನೆಗಳ ಕೆರಳಿಸುವ, ಭ್ರಷ್ಟಾಚಾರಿಗಳ ಈ ಘಟನೆಯಿಂದ ಪಾಠ ಕಲಿಯುತ್ತಾರೆಯೇ?



ಅಧಿಕಾರದ ಬೆಲೆ: ಬಿಜೆಪಿಯ ದಿಲ್ಲಿ ಕಛೇರಿಯಲ್ಲಿ ವಿಧಾನಸಭೆ ಟಿಕೇಟ್ ಪಡೆಯಲು ಹಣದ ಚೀಲದೊಂದಿಗೆ ಕೈಯೆತ್ತಿರುವ ಒಂದು ದೃಶ್ಯ

- ಕೃಪೆ : ದಿ ಪಯೋನೀರ್

ಪಶ್ಚಿಮಬಂಗಾಲದ ಸಿಪಿಐ(ಎಂ) ರಾಜ್ಯ ಸಮಿತಿಯಿಂದ ಸ್ತುತ್ಯಾರ್ಹ ಶಿಸ್ತು ಕ್ರಮ

ಕೆಲವು ತಿಂಗಳ ಹಿಂದೆ ಕಲ್ಕತ್ತ ನಗರದ ಮಧ್ಯಭಾಗವಾದ ಚೌಬಜಾರಿನಲ್ಲಿ ಬಾಂಬ್ ಸ್ಫೋಟಗೊಂಡಿದ್ದು ಈ ಚೌಬಜಾರ ಬಾಂಬ್ ಸ್ಫೋಟದಲ್ಲಿ ಪ್ರಧಾನ ಆರೋಪಿಯಾದ ಸಮಾಜ ದ್ರೋಹಿ ರಶೀದ್ ಖಾನ್ ಅವನೊಡನೆ ಸಂಬಂಧ ಇಟ್ಟುಕೊಂಡಿದ್ದ ಸಿಪಿಐ(ಎಂ) ಪಕ್ಷದ ಕೆಲವು ಸದಸ್ಯರ ಮೇಲೆ ಶಿಸ್ತು ಭಂಗ ಕ್ರಮಕೈಗೊಳ್ಳಲು ಪಶ್ಚಿಮಬಂಗಾಲದ ರಾಜ್ಯ ಸಮಿತಿ ನಿರ್ಣಯಿಸಿದೆ. ಅಕ್ಟೋಬರ್ 9 -10 ರಂದು ನಡೆದ ರಾಜ್ಯ ಸಮಿತಿ ಸಭೆ ಅಬ್ದುಲ್ ಹಸನ್‌ನನ್ನು ಮತ್ತು ವಕೀಲಿ ವೃತ್ತಿಯಲ್ಲಿರುವ ರಾಜಕುಮಾರ್ ಕೋನಾರ ಅವರನ್ನು ಪಕ್ಷದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ರಶೀದ್ ಖಾನ್‌ನಿಂದ ಸಹಾಯ ಪಡೆಯುತ್ತಿದ್ದ ಇನ್ನೂ ಕೆಲವು ಪಕ್ಷದ ಸದಸ್ಯರನ್ನು ಆರು ತಿಂಗಳ ಕಾಲ ಪಕ್ಷದ ಸದಸ್ಯತ್ವದಿಂದ ಅಮಾನತುಗೊಳಿಸಲಾಯಿತೆಂದು ರಾಜ್ಯ ಸಮಿತಿ ಕಾರ್ಯದರ್ಶಿ ಶೈಲೇನ್ ದಾಸ್ ಗುಪ್ತಾ ಹೇಳಿದ್ದಾರೆ. ಒಬ್ಬ ಸಂಗಾತಿಯನ್ನು ಆರು ತಿಂಗಳು ತನ್ನ ಹುದ್ದೆಯಿಂದ ಕಡಿಮೆಮಾಡಲಾಗಿದೆ. ಆದರೆ ಇವರೆಲ್ಲರೂ ತಮ್ಮ ಸಾಮೂಹಿಕ ಸಂಘಟನೆಗಳಲ್ಲಿನ ಚುನಾಯಿತ ಸ್ಥಾನಗಳಲ್ಲಿ ಮುಂದುವರಿಯುತ್ತಾರೆ.

ತಾನು ಮತ್ತು ಇನ್ನೊಬ್ಬ ಸೆಕ್ರೆಟಾರಿಯೇಟ್ ಸದಸ್ಯ ನಿರೇನ್ ಘೋಷ್ ಆರೋಪಿಗಳ ಕುರಿತು ಪೂರ್ಣ ವಿಚಾರಣೆ ನಡೆಸಿದ ನಂತರ ಈ ನಿರ್ಣಯ ಕೈಗೊಳ್ಳಲಾಯಿತೆಂದು ದಾಸ್ ಗುಪ್ತಾ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಕೆಲವು ಪಾರ್ಟಿ ಸದಸ್ಯರು ರಶೀದ್ ಖಾನ್‌ನಿಂದ ಆರ್ಥಿಕ ಹಾಗೂ ಮತ್ತಿತರ ಸಹಾಯ ಪಡೆದಿರುವುದು ಕಂಡು ಬಂದಿತೆಂದು ಹೇಳಿದ್ದಾರೆ. ರಶೀದನ ಚಟುವಟಿಕೆಗಳ ಕುರಿತು ತಮಗೆ ಮಾಹಿತಿ ಇರಲಿಲ್ಲವೆಂದು ಕೆಲವು ಸದಸ್ಯರು ನೆವ ಹೇಳುತ್ತಿರುವುದನ್ನು ಪಕ್ಷ ನಂಬುವುದಿಲ್ಲ. ಸಮಾಜ ದ್ರೋಹಿ ಚಟುವಟಿಕೆಗಳಲ್ಲಿ ತೊಡಗಿರುವ ರಶೀದ್ ಖಾನ್‌ನಿಂದ ಸಹಾಯ ಪಡೆಯುವುದು ಪಕ್ಷದ ಮತ್ತು ಜನತೆಯ ಹಿತಕ್ಕೆ ಧಕ್ಕೆ ತರುವಂಥಾದ್ದಾಗಿದೆ. ಇನ್ನೂ ಹೆಚ್ಚಿನ ಆರೋಪಗಳ ಕುರಿತು ವಿಚಾರಣೆ ನಡೆಸಲಾಗುತ್ತಿದೆ.

ರಶೀದ್ ಖಾನ್‌ನಿಂದ ಬೇರೆ ರಾಜಕೀಯ ಪಕ್ಷಗಳೂ, ಕೆಲವು ಪೋಲೀಸ್ ಅಧಿಕಾರಿಗಳೂ ಸಹಾಯ ಪಡೆಯುತ್ತಿರುವ ಸಂಗತಿ ಪಕ್ಷದ ಗಮನಕ್ಕೆ ಬಂದಿದೆ. ತಪ್ಪು ಮಾಡುತ್ತಿರುವ ಪೋಲೀಸ್ ಅಧಿಕಾರಿಗಳ ವಿರುದ್ಧ ಬಂದಿರುವ ಆರೋಪಗಳ ಕುರಿತು ವಿಚಾರಣೆ ನಡೆಸಿ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಮಂತ್ರಿ ಜ್ಯೋತಿ ಬಸು ಅವರನ್ನು ಕೇಳಿಕೊಳ್ಳಲಾಗಿದೆ.

ಈ ವಿಷಯದ ಕುರಿತು ಬಂಡವಾಳಶಾಹಿ ಪತ್ರಿಕೆಗಳು ಪಾರ್ಟಿಯ ವಿರುದ್ಧ ಹೀನಾಯ ರೀತಿಯಲ್ಲಿ ಅಪಪ್ರಚಾರ ಪ್ರಾರಂಭಿಸಿದ್ದಾರೆ. ಮೂರು ಜಿಲ್ಲೆಗಳ ಕಾರ್ಯದರ್ಶಿಗಳಾದ ಕಲ್ಕತ್ತಾದ ಲಕ್ಷ್ಮೀ ಸೇನ್, ಬರ್ದ್ವಾನಿನ ನಿರುಪಮ್ ಸೇನ್, ದಕ್ಷಿಣ 24 ಪರಗಣಾಗಳ ಸಮೀರ್ ಪುತೊಮಂಡೋ ಮೊದಲಾದವರ ಮೇಲೆ ಸುಳ್ಳು ಪ್ರಚಾರ ನಡೆಸಲಾಗುತ್ತಿದೆ. ಬೇರೆ ಬೇರೆ ವಿಭಾಗದ ಪಕ್ಷದ ಘಟಕಗಳ ಮೇಲೆ ಮುಖ್ಯವಾಗಿ ಜನವಾದಿ ಮಹಿಳಾ ಸಂಘಟನೆಯ ಮೇಲೆ ತೀವ್ರ ಸುಳ್ಳಿನ ಕಂತೆ ಹೆಣೆಯಲಾಗಿದೆ. ಜನತೆಯ ಮತ್ತು ಪಕ್ಷದ ಹಿತಕ್ಕೆ ಅಪಾಯವನ್ನುಂಟುಮಾಡುವ ಯಾವುದೇ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ರಾಜ್ಯ ಸಮಿತಿ ಸ್ಪಷ್ಟಪಡಿಸಿದೆ. ಅಂಥ ಉಗ್ರ ಕ್ರಮವನ್ನು ಹಿಂದೆಯೇ ತೆಗೆದುಕೊಂಡಿದ್ದೆವು, ಇನ್ನು ಮುಂದೆಯೂ ತೆಗೆದುಕೊಳ್ಳಲಾಗುವುದು.

ಬುದ್ಧದೇವ ಭಟ್ಟಾಚಾರ್ಯ ಅವರು ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟಿರುವುದನ್ನು ರಾಜ್ಯ ಸಮಿತಿ ಚರ್ಚಿಸಿತು. ರಾಜ್ಯ ಸಮಿತಿಯಲ್ಲಿ ಚರ್ಚೆ ಮಾಡದೆ ರಾಜೀನಾಮೆ ಕೊಟ್ಟಿರುವುದು ಸರಿಯಲ್ಲವೆಂದು ಅಭಿಪ್ರಾಯ ಪಟ್ಟಿದೆ. ಭಟ್ಟಾಚಾರ್ಯ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಿದ್ದಾರೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ ಅವರು ಹಾಜರಿದ್ದು ಅಂತರಾಷ್ಟ್ರೀಯ ಪರಿಸ್ಥಿತಿ, ಇತ್ತೀಚೆಗಿನ ರಶ್ಯದಲ್ಲಿನ ಘಟನೆಗಳು, ಪ್ಯಾಲೆಸ್ಟೀನ್ ಒಪ್ಪಂದಗಳನ್ನು ಹಾಗೆಯೇ ಆರ್ಥಿಕ ಧೋರಣೆ, ಮತೀಯ ಶಕ್ತಿಗಳ ವಿರುದ್ಧ ಹೋರಾಟದ ವಿವರಗಳನ್ನು ನೀಡಿದರು. ಈ ಹೋರಾಟದಲ್ಲಿ ಇನ್ನೂ ಹೆಚ್ಚು ಜನ ಸೇರಿಕೊಳ್ಳುವಂತೆ ಮಾಡುವುದೇ ತುರ್ತಿನ ಕರ್ತವ್ಯವೆಂದು ಹೇಳಿದರು. ಮುಂದಿನ ತಿಂಗಳುಗಳಲ್ಲಿ ಪಕ್ಷದ ಸದಸ್ಯರಿಗೆ ರಾಜಕೀಯ ಶಿಕ್ಷಣ ಕೊಡುವ ಪಕ್ಷದ ಸಾಹಿತ್ಯ ಮಾರಾಟ ಹೆಚ್ಚಿಸುವ ನಿರ್ಣಯಗಳನ್ನು ರಾಜ್ಯ ಸಮಿತಿ ಕೈಕೊಂಡಿತು.

ಐ.ಎನ್.ಎಸ್

ರಷ್ಯಾದ ಪ್ರಜಾಪ್ರಭುತ್ವ ರಕ್ಷಣೆಗಾಗಿ ಯೆಲ್ಟ್‌ಸಿನ್ ಪ್ರತಿಕೃತಿ ದಹನ

ಬೆಂಗಳೂರು : ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಸಮಿತಿಯ ರಾಜ್ಯ ಸಮಿತಿಯ ಕರೆಯ ಮೇರೆಗೆ ರಷ್ಯಾದ ಸರ್ವಾಧಿಕಾರಿ ಯೆಲ್ಟ್‌ಸಿನ್‌ನ ಹಿಟ್ಲರ್ ಪ್ರವೃತ್ತಿಯನ್ನು ಖಂಡಿಸಿ ಮೆರವಣಿಗೆ ನಡೆಸಿ, ಆತನ ಪ್ರತಿಕೃತಿಯನ್ನು ದಹಿಸಿದರು. ದಿನಾಂಕ 14-10-93ರಂದು ನಡೆದ ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಆರ್.ಶ್ರೀನಿವಾಸ್, ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ಸಿಐಟಿಯು ಮುಖಂಡ ಎಸ್. ಸೂರ್ಯನಾರಾಯಣರಾವ್‌ರವರ ನೇತೃತ್ವದಲ್ಲಿ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಹೊರಟ ಮೆರವಣಿಗೆಯು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸಮಾವೇಶಗೊಂಡಿತು. ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆರ್.ಶ್ರೀನಿವಾಸ್ ಸ್ವಾಗತಿಸುತ್ತಾ ರಷ್ಯಾದ ಇಂದಿನ ದುಸ್ಥಿತಿಗೆ ಯೆಲ್ಟ್‌ಸಿನ್ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮಣಿಯುತ್ತಿರುವುದೇ ಕಾರಣ ಎಂದರು. ನಂತರ ಮಾತನಾಡಿದ ಎಸ್ ಸೂರ್ಯನಾರಾಯಣರಾವ್‌ರವರು ರಷ್ಯಾದಲ್ಲಿ ನಡೆಯುತ್ತಿರುವ ಹೋರಾಟ, ಸಾಮ್ರಾಜ್ಯಶಾಹಿಗಳ ಮೋಸ, ವಂಚನೆ, ಸಮಯಸಾಧಕನತನವನ್ನು ವಿವರಿಸಿದರು. ಮಾನವ ಹಕ್ಕುಗಳ ಬಗ್ಗೆ ದೊಡ್ಡ ಹೊಡೆಯುತ್ತಿರುವ ಅಮೇರಿಕಾ ಮತ್ತಿತರ ಸಾಮ್ರಾಜ್ಯಶಾಹಿ ದೇಶಗಳು ರಷ್ಯಾದ ಪಾರ್ಲಿಮೆಂಟಿನಲ್ಲಿದ್ದ ಜನಪ್ರತಿನಿಧಿಗಳನ್ನು ಹೊರ ಹಾಕಲು ಟ್ಯಾಂಕ್‌ಗಳನ್ನು ಬಳಸಿ ಸುಮಾರು 500 ಜನರ ಸಾವಿಗೆ ಕಾರಣವಾದ ಘಟನೆಯನ್ನು ಖಂಡಿಸಿಲ್ಲದಿರುವುದೇ ಈ ಸಾಮ್ರಾಜ್ಯಶಾಹಿ ದೇಶಗಳ ಮಾನವ ಹಕ್ಕುಗಳ ಬಗೆಗಿನ ಅವರ ನೀಚ ವರ್ತನೆ ಅರ್ಥವಾಗುತ್ತದೆ. ವಿಶ್ವಬ್ಯಾಂಕ್, ಐಎಂಎಫ್‌ಗಳನ್ನುಪಯೋಗಿಸಿ ಬೇರೆ ದೇಶಗಳ ಸ್ವಾಯತ್ತತೆಗೆ ಕೊಡಲಿ ಪೆಟ್ಟು ಕೊಡುತ್ತಿರುವ ಸಾಮ್ರಾಜ್ಯಶಾಹಿಗಳ ಕುತಂತ್ರ ಬಯಲಿಗೆ ಬರುತ್ತಿದೆ ಎಂದರು. ಈ ಹಿನ್ನೆಲೆಯಲ್ಲಿ ಭಾರತವೂ ಕೂಡ ಯೆಲ್ಟ್‌ಸಿನ್‌ನ ಈ ಸರ್ವಾಧಿಕಾರವನ್ನು, ಹಿಟ್ಲರ್ ಪ್ರವೃತ್ತಿಯನ್ನು ಒಕ್ಕೊರಲಿನಿಂದ ಖಂಡಿಸಿ ರಷ್ಯಾದ ಜನತೆಗೆ ಬೆಂಬಲ ಸೂಚಿಸಬೇಕಾಗಿದೆ ಎಂದರು.

ನಂತರ ಯೆಲ್ಟ್‌ಸಿನ್‌ರ ಪ್ರತಿಕೃತಿಯನ್ನು ದಹಿಸಿದರು.



ಸೀಮೆಎಣ್ಣೆ ಮಾರಾಟ ಅಧಿಕಾರಿಗಳ ವಂಚನೆ ಪ್ರತಿಭಟನೆ

ಸಿಂಧನೂರು ತಾಲೂಕಿನ ನ್ಯಾಯಬೆಲೆ ಅಂಗಡಿಗಳು ಹಾಗೂ ತಳ್ಳು ಬಂಡಿಗಳ ಮೂಲಕ ವಿತರಿಸಲಾಗುವ ಸೀಮೆ ಎಣ್ಣೆಯನ್ನು ನಿಗದಿತ ರೂ. 2.91 ಕ್ಕೆ ಮಾರದೆ ಎಂಟರಿಂದ 10 ರೂಗಳವರೆಗೆ ವಸೂಲಿ ಮಾಡಿ ಮಾರಾಟ ಮಾಡಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಅವ್ಯವಹಾರದಲ್ಲಿ ಶಾಮೀಲಾಗಿದ್ದಾರೆ.

ಜೀವನಾವಶ್ಯಕವಾದ ಸೀಮೆಎಣ್ಣೆಯ ಮಾರಾಟದಲ್ಲಿನ ಈ ಅವ್ಯವಹಾರವನ್ನು ಪ್ರತಿಭಟಿಸಿ ಸೆಪ್ಟೆಂಬರ್ 15 ರಂದು ಸಿಂಧನೂರಿನ ಜನವಾದಿ ಮಹಿಳಾ ಸಂಘಟನೆ ಹಾಗೂ ಪ್ರಜಾಸತ್ತಾತ್ಮಕ ಯುವ ಫೆಡರೇಷನ್ (ಎಸ್.ಎಫ್.ಐ) ಘಟಕಗಳ ನೇತೃತ್ವದಲ್ಲಿ ತಾಲೂಕು ಕಛೇರಿಗೆ ಮುತ್ತಿಗೆ ಹಾಕಲಾಯಿತು.

ಸುಮಾರು 300 ಜನರು ಪಿಕೆಟಿಂಗ್‌ನಲ್ಲಿ ಭಾಗವಹಿಸಿದರು. ಡಿಪ್ಯುಟಿ ತಹಶಿಲ್ದಾರರು ಬಂದು ಚಳುವಳಿ ನಿರತರೊಡನೆ ಮಾತನಾಡಿ ನೀಡಿದ ಭರವಸೆ ಮೇರೆಗೆ ಪಿಕೆಟಿಂಗ್ ಹಿಂತೆಗೆದುಕೊಳ್ಳಲಾಯಿತು.

ತದನಂತರ, ಮರುದಿನ ತಹಶಿಲ್ದಾರರು ಉಭಯ ಸಂಘಟನೆಗಳ ಮುಖಂಡರನ್ನು ಕರೆಸಿ ಮಾತುಕತೆ ನಡೆಸಿದರು.

ಬಸ್ ಸಿಬ್ಬಂದಿಯಿಂದ ಹಲ್ಲೆಗೆ ಖಂಡನೆ

ಭಟ್ಕಳ: ಇತ್ತೀಚೆಗೆ ಇಲ್ಲಿಂದ ನಾಗವಳ್ಳಿಗೆ ತೆರಳುವ ಬಸ್ಸಿನಲ್ಲಿ ತೆರಳುತ್ತಿದ್ದ ಕೆಲವು ವಿದ್ಯಾರ್ಥಿಗಳಿಗೆ ಟಿಕೆಟ್ ಕೊಡದಿರುವುದನ್ನು ಪ್ರಶ್ನಿಸಿದಾಗ ಸಂಬಂಧ ಪಟ್ಟ ಕಂಡಕ್ಟರ್ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಒಂದು ಪ್ರಕರಣ ನಡೆದಿದೆ. ಇನ್ನೊಂದು ಪ್ರಕರಣದಲ್ಲಿ ಹಂಡವಳ್ಳಿಯಲ್ಲಿ ಬಸ್ಸಿನ ನಿಲುಗಡೆ ಕೇಳಿದಾಗ ಕಂಡಕ್ಟರ್ ಗೂಂಡಾಗಳನ್ನು ಕರೆಸಿ ಶಾಲಾ ವಿದ್ಯಾರ್ಥಿಗಳನ್ನು ಹೊಡೆಸಿರುತ್ತಾನೆ.

ಸಾರಿಗೆ ಸಂಸ್ಥೆ ಸಿಬ್ಬಂದಿಗಳ ಈ ವರ್ತನೆಯನ್ನು ಎಸ್.ಎಫ್.ಐ. ಖಂಡಿಸಿದ್ದು ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ಭೂಕಂಪ ಸಂತ್ರಸ್ಥರಿಗೆ ನೆರವು

ರಾಮದುರ್ಗ : ಭೂಕಂಪದಿಂದ ನೊಂದವರಿಗೆ ನೆರವಾಗಲು ಸ್ಥಳೀಯ ಸಿಪಿಐ(ಎಂ) ಘಟಕ ಮುಂದಾಗಿ ಸ್ಥಳೀಯ ಗಣ್ಯರ ಸಮಿತಿಯನ್ನು ರಚಿಸಿ 4.10.1993 ರಂದು ಪಾದಯಾತ್ರೆಯನ್ನು ನಡೆಸಲಾಯಿತು.

ಪಕ್ಷದ ಎಲ್ಲಾ ಕಾರ್ಯಕರ್ತರು ಪಾಲ್ಗೊಂಡಿದ್ದ ಈ ಪಾದಯಾತ್ರೆಯಲ್ಲಿ ರೂ. 14,300 ರೂಗಳನ್ನು ಸಂಗ್ರಹಿಸಲಾಯಿತು. ಇದರಲ್ಲಿ 10,000 ರೂಗಳನ್ನು ಮಹಾರಾಷ್ಟ್ರ ಸರಕಾರಕ್ಕೂ 4,300 ರೂಗಳನ್ನು ಕರ್ನಾಟಕ ಸರಕಾರಕ್ಕೂ ಕಳುಹಿಸಿ ಕೊಡಲಾಯಿತು.

ಪಾದಯಾತ್ರೆಯಲ್ಲಿ ಪಕ್ಷದ ಪರವಾಗಿ ಕಾಂ. ವಿ.ಪಿ. ಕುಲಕರ್ಣಿ, ಗೈಬು ಜೈನೆಖಾನ, ನಾಗೇಂದ್ರ ಬಂಡೀವಡ್ಡರ, ನಾಗೇಂದ್ರ ಶಿಂಧೆ, ಜಹಾಂಗೀರ ಜಾಗೀರದಾರ, ಬಾಬು ಬಜಂತ್ರಿ, ನಜೀರ ಸರಮುಲ್ಲಾ, ರಫೀಕ್ ಬೇಗ್, ಎ.ಆರ್. ಪಠಾಣ ಮುಂತಾದವರು ಭಾಗವಹಿಸಿದ್ದರು.

ದುರಂತದಲ್ಲಿ ನೊಂದವರಿಗೆ ಪರಿಹಾರ ನಿಧಿ ಸಮಿತಿಯನ್ನು ರಚಿಸಲಾಗಿತ್ತು. ಇದರಲ್ಲಿ ಎಲ್ಲಾ ಜನ ವಿಭಾಗಗಳು ತುಂಬು ಮನದಿಂದ ಸಹಕರಿಸಿದ್ದನ್ನು ಭೂಕಂಪ ಸಂತ್ರಸ್ತರ ಪರಿಹಾರ ನಿಧಿ ಸಮಿತಿ ಅಭಿನಂದಿಸಿದೆ. ಈ ನಿಧಿ ಸಂಗ್ರಹದಲ್ಲಿ ಅನೇಕ ಜನರು ಮಾನವೀಯತೆಯನ್ನು ಮೆರೆದದ್ದು ಒಂದು ವಿಶೇಷ ಅನುಭವ ಹಾಗೂ ಎಲ್ಲರಿಗೂ ಆದರ್ಶಪ್ರಾಯವಾಗಿದೆ. ಕುಮಾರ ಅನೂಪ ದಾಮೋದರ ಹಾಗೂ ಕುಮಾರ ಬೀನೋಯ್ ದಾಮೋದರ ತಮಗೆ ದೊರೆತ ಪಾರಿತೋಷಕ ಹಣವಾದ ರೂ. 700 ಹಾಗೂ 200 ರೂಗಳನ್ನು ಈ ನಿಧಿಗೆ ಅರ್ಪಿಸಿ ವಿದ್ಯಾರ್ಥಿ ವೃಂದಕ್ಕೆ ಆದರ್ಶವಾಗಿದ್ದರೆ, ಪೆಪ್ಪರ್‌ಮೆಂಟ್ ಮಾರುವ ಮಹಿಳೆ ತನ್ನ ದೈನಂದಿನ ಗಳಿಕೆಯಲ್ಲಿ 101 ರೂಗಳನ್ನು ನೀಡಿ ಪಾದಯಾತ್ರಿಗಳಿಗೆ ಹೃದಯಸ್ಪರ್ಶಿ ಅನುಭವವನ್ನು ನೀಡಿದ್ದಾರೆ.

ವಿಜಾಪುರ: ಭೂಕಂಪದಿಂದ ನೊಂದವರಿಗೆ, ಪ್ರಾಣ ಕಳೆಕೊಂಡವರಿಗೆ ಡಿ.ವೈ.ಎಫ್.ಐನ ವಿಜಾಪುರ ಜಿಲ್ಲಾ ಸಮಿತಿ, ಸಂತಾಪ ಸೂಚಿಸಿ ಹಾನಿಗೊಳಗಾದವರಿಗೆ ನೆರವು ನೀಡಲು ನಿಧಿ ಸಂಗ್ರಹ ಮಾಡಿದರು. 1,600 ರೂಗಳನ್ನು ಸಾರ್ವಜನಿಕರು ಡಿ.ವೈ.ಎಫ್.ಐ ಸಂಗಾತಿಗಳಿಗೆ ನೀಡಿದರು, ಸರಕಾರದ ವತಿಯಿಂದ ಜಿಲ್ಲಾಧಿಕಾರಿಗಳು ಪಾದಯಾತ್ರೆ ಕೈಗೊಂಡಾಗ ಡಿ.ವೈ.ಎಫ್.ಐ ತಾನು ಕೂಡಿಸಿದ 1,600 ರೂಗಳನ್ನು ಅರ್ಪಿಸಿತು. ಪರಿಹಾರ ಧನಕ್ಕೆ ಕಾಣಿಕೆ ನೀಡಿದ ಸಾರ್ವಜನಿಕರಿಗೆ ಡಿ.ವೈ.ಎಫ್.ಐ ತನ್ನ ಅಭಿನಂದನೆಯನ್ನು ಈ ಮೂಲಕ ಅರ್ಪಿಸುತ್ತದೆ.

ಕ್ಯಾಪಿಟೇಷನ್ ಪಿಡುಗಿನ ಮೇಲೆ ಒಂದು ಕ್ಷ-ಕಿರ

ವೃತ್ತಿ ಶಿಕ್ಷಣ: ಜನಸೇವೆ ಎಂಬ ಮುಖವಾಡ ದಡಿ

ಕ್ಯಾಪಿಟೇಷನ್ ಫೀ ಪಿಡುಗು ಇತ್ತೀಚೆಗೆ ಬಹಳ ಸುದ್ದಿಯಲ್ಲಿದೆ ಈ ಪದ್ಧತಿಯ ವಿರುದ್ಧ ಸುಪ್ರೀ
ಬಂಡವಾಳಗಾರರಿಗೆ ದೊಡ್ಡ ಹೊಡೆತ ನೀಡಿತು.

ಆದರೆ ಬಂಡವಾಳಿಗರು ಸುಮ್ಮನೇ ಕುಳಿತಾರೆಯೇ? ತಮ್ಮ ಲಾಭಕ್ಕೆ ಸಂಚಕಾರ ತರುವ ಈ ತೀಪಿ
ಸೇರಿಕೊಂಡು ವಿದ್ಯಾರ್ಥಿಗಳಿಗೆ ಪ್ರವೇಶವನ್ನೇ ನಿರಾಕರಿಸುವ ಹಂತಕ್ಕೆ ಹೋದರು.

ಸುಪ್ರೀಂ ಕೋರ್ಟಿನ ಐದು ನ್ಯಾಯಾಧೀಶರ ಪೆಂಚೊಂದು ಈಗ ತಾತ್ಕಾಲಿಕ ತೀರ್ಪೊಂದನ್ನು ನೀಡಿ
ತೀರ್ಪು ಸ್ವಲ್ಪ ಮಟ್ಟಿಗೆ ಖಾಸಗಿ ಆಡಳಿತ ಮಂಡಳಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಶಿಕ್ಷಣ ಶುಲ್ಕವ
ಸೀಟು ನೀಡಲು ಆಡಳಿತ ಮಂಡಳಿಗಳು ಪೂರ್ಣ ಸ್ವತಂತ್ರ. ಇದಲ್ಲದೆ ಸರ್ಕಾರ ಭರಿಸಲಾರದೆ ಇರುವ
ನೀಡಬಹುದು.

ಸುಪ್ರೀ ಕೋರ್ಟು ಸರ್ಕಾರಿ ಸೀಟುಗಳಿಗೆ ಹೆಚ್ಚಿನ ಶುಲ್ಕ ವಿಧಿಸದೇ ಇರುವುದರಿಂದ ಪೇಮೆಂಟ್ ಸಿ
ಗುತ್ತದೆ ಎಂದಿದೆ. ಆದರೆ ವೃತ್ತಿ ಶಿಕ್ಷಣ ಒಂದು ವ್ಯಾಪಾರವಾಗಬಾರದು. ಖಾಸಗಿ ಬಂಡವಾಳಿಗರು
ಅಲ್ಲವೆ?

ಈ ಸಂದರ್ಭದಲ್ಲಿ ಕ್ಯಾಪಿಟೇಷನ್ ಫೀ ಬೆಳೆದು ಬಂದ ಬಗ್ಗೆ ಪ್ರಗತಿಪರ ವಿದ್ಯಾರ್ಥಿ ಸಂಘಟನೆ ಎಸ
ಎಫ್.ಐ ರಾಜ್ಯಾಧ್ಯಕ್ಷರಾದ ಕಾಂ. ಜಿ.ಸಿ. ಬಯ್ಯಾರೆಡ್ಡಿಯವರ ಲೇಖನವನ್ನು ಇಲ್ಲಿ ನೀಡುತ್ತಿದ್ದೇವೆ.

ವೈದ್ಯಕೀಯ. ಇಂಜನಿಯರಿಂಗ್ ಮತ್ತಿತರೆ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ತೀರ್ಪಿನ ಜಾರಿಯ ಹಿನ್ನೆಲೆಯಲ್ಲಿ ರಾಜ್ಯದ ಹಾಗೂ ರಾಷ್ಟ್ರದ ವೃತ್ತಿ ಶಿಕ್ಷಣ ಕ್ಷೇತ್ರದಲ್ಲಿ ಗಂಭೀರವಾದ ಬಿಕ್ಕಟ್ಟು ನಿರ್ಮಾಣವಾಗಿ, ಲಕ್ಷಾಂತರ ವಿದ್ಯಾರ್ಥಿ ಪೋಷಕರ ಸ್ಥಿತಿ "ತ್ರಿಶಂಕು" ಸ್ಥಿತಿಯಾಗಿದೆ. ಈಗಾಗಲೇ ಒಂದೂವರೆ ತಿಂಗಳ ಶೈಕ್ಷಣಿಕ ವರ್ಷ ತಡವಾಗಿದ್ದರೂ, ಸರ್ಕಾರದ ಸಂಪೂರ್ಣ ಅಸಮರ್ಥತೆ ಹಾಗೂ ಶಿಕ್ಷಣ ಸಂಸ್ಥೆಯ ಮಾಲೀಕರ ಮುಖ್ಯವಾಗಿ ಲೋಕಕಲ್ಯಾಣದ ಸೋಗು ಹಾಕಿದ ಮಠಾಧಿಪತಿಗಳ ಅಹಂಕಾರ, ದರ್ಪದಿಂದ ಪ್ರವೇಶಗಳನ್ನು ನಿರಾಕರಿಸುತ್ತಿರುವ ಕಾರಣ ಆಯ್ಕೆಯಾದ ರಾಜ್ಯದ ಸುಮಾರು 25,000 ವಿದ್ಯಾರ್ಥಿಗಳ ಸ್ಥಿತಿ ಆತಂಕಕಾರಿಯಾಗಿದೆ. ಮತ್ತು ಈ ಸ್ಥಿತಿಗೆ ಸುಪ್ರೀಂ ಕೋರ್ಟ್ ಕಾರಣವಾಯಿತೆನ್ನುವ ಪರಿಸ್ಥಿತಿ ಉಂಟಾಗಿದೆ.

ಇಂತಹ ಸನ್ನಿವೇಶವನ್ನು ನಿರ್ಮಾಣ ಮಾಡಿರುವ ಖಾಸಗಿ ಶಿಕ್ಷಣದ ಮಾಲೀಕರು, ಮಠಾಧಿಪತಿಗಳು, ಮತ್ತು ಇವರ ಬೆಂಬಲಿಗ ಭ್ರಷ್ಟ ಜಾತಿವಾದಿ, ಶಿಕ್ಷಣ ವಿರೋಧಿ ರಾಜಕಾರಣಿಗಳು, ಸರ್ಕಾರವನ್ನು ಅಸಮರ್ಥಗೊಳಿಸಿ, ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಸಮಸ್ಯೆಯನ್ನು ಸೃಷ್ಟಿ ಮಾಡಿರುವುದು ಮಾತ್ರವಲ್ಲದೆ, ರಾಜ್ಯದ ಇಡೀ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಹಾಗೂ ಶಿಕ್ಷಣ ಪ್ರೇಮಿಗಳಿಗೆ ಸವಾಲನ್ನು ಹಾಕಿದ್ದರೆ ಈ ಸಂಘರ್ಷದಲ್ಲಿ ಗೆಲವು ಯಾರಿಗೆ ಎನ್ನುವುದು ಇತ್ಯರ್ಥವಾಗಬೇಕಿದೆ.

ವೃತ್ತಿ ಶಿಕ್ಷಣದಲ್ಲಿ ಕ್ಯಾಪಿಟೇಶನ್‌ನ್ನು ರದ್ದು ಮಾಡಿ ವ್ಯಾಪಾರವನ್ನು ಕೊನೆಗಾಣಿಸಬೇಕೆಂಬ ಮಹಾನ್ ಆಶಯದೊಂದಿಗೆ ಬಂದ ಸುಪ್ರೀಂ ಕೋರ್ಟಿನ ತೀರ್ಪು, ವಿದ್ಯಾರ್ಥಿಗಳ ಹಾಗೂ ಪೋಷಕರ ಪಾಲಿಗೆ ಈ ರೀತಿಯ ಸಮಸ್ಯೆಯಾಗಿ ಹೇಗೆ ಉದ್ಭವಾಯಿತು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ರಾಜ್ಯದ ವೃತ್ತಿ ಶಿಕ್ಷಣದ ಸ್ಥಿತಿ ಗತಿಗಳ ಬಗ್ಗೆ ಕಣ್ಣು ಹಾಯಿಸುವುದು ಅಗತ್ಯವಾಗುತ್ತದೆ.

ವೃತ್ತಿ ಶಿಕ್ಷಣದ ಸ್ಥಿತಿ ಗತಿಗಳು

ರಾಜ್ಯದಲ್ಲಿ ಶಿಕ್ಷಣ ಮುಖ್ಯವಾಗಿ ವೃತ್ತಿಪರ ಶಿಕ್ಷಣ ಜಾತಿಯ, ಮತೀಯ ಹಾಗೂ ಬಂಡವಾಳಗಾರರ ಕಪಿಮುಷ್ಠಿಗೆ ಸಿಕ್ಕಿ ಮಾರಾಟದ ಮಾಲಾಗಿದೆ. ನಿನ್ನೆ ಮೊನ್ನೆಯತನಕ ಕಾಂಗ್ರೆ ರಾಜ್ಯ ಖಜಾಂಚಿಯಾಗಿದ್ದ ದಾವಣಗೆರೆಯ ಶಾಮನೂರ ಶಿವಶಂಕರಪ್ಪ ನಡೆಸುವ ಬಾಪೂಜೀ ವೈದ್ಯಕೀಯ ಕಾಲೇಜ್, ಜನತಾದಳ ಹಿಂದುಳಿದ ವರ್ಗಗಳ ನೇತಾರ (?) ಆರ್. ಎಲ್. ಜಾಲಪ್ಪ, ಹಿಂದುಳಿದ ಜಿಲ್ಲೆ ಹಾಗೂ ಜನರನ್ನು ಉದ್ಧಾರ ಮಾಡಲು ಹಿಂದುಳಿದ ವರ್ಗಗಳ ಕ್ರಾಂತಿ ಪುರುಷ ದೇವರಾಜ ಅರಸುರವರ ಹೆಸರಿನಲ್ಲಿ ನಡೆಸುತ್ತಿರುವ ವೈದ್ಯಕೀಯ ಕಾಲೇಜ್, ಗೌಡರ ಬೆಂಗಳೂರಿನ ಕೆಂಪೇಗೌಡ ವೈದ್ಯಕೀಯ ಕಾಲೇಜ್, ಆದಿ ಚುಂಚನ ಗಿರಿ ಮಠದ ವೈದ್ಯಕೀಯ ಕಾಲೇಜ್, ಅಂಬೇಡ್ಕರ್ ಹೆಸರಿನಲ್ಲಿ ಬಿಜೆಪಿ ದಲಿತ ದುರೀಣ ಶಿವಲಿಂಗಯ್ಯ ಅಧ್ಯಕ್ಷರಾಗಿರುವ ನಡೆಸುತ್ತಿರುವ ವೈದ್ಯಕೀಯ ಕಾಲೇಜ್, ಇಸ್ಲಾಮಿಯ, ಸೆಂಟ್ ಜಾನ್ಸ್, ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜನತೆಯ ಶ್ರಮದ ಫಲವಾಗಿರುವ ವಿರೀಂದ್ರಪಾಟೀಲ್‌ರ ಅಳಿಯ ಕಾಂಗ್ರೆ ಸಂಸದ್ ಸದಸ್ಯ ಡಾ. ಬಿ.ಜಿ. ಜವಳಿ ಅಂಡ್ ಕಂಪನಿ ನಡೆಸುವ ವೈದ್ಯಕೀಯ, ಇಂಜನಿಯರಿಂಗ್ ಕಾಲೇಜ್‌ಗಳು ಸಚಿವ ಭೀಮಣ್ಣ ಖಂಡ್ರೆ, ಕಾಂಗ್ರೆ ಸಂಸದ್ ಸದಸ್ಯ ಪ್ರಭಾಕರ ಕೋರೆ, ಇತ್ಯಾದಿ ಕಾಂಗ್ರೆಸ್, ಬಿಜೆಪಿ ಜನತಾದಳಗಳು, ಮಠಾಧಿಪತಿಗಳು ನಡೆಸುವ ಅಸಂಖ್ಯಾತ ಇಂಜನಿಯರಿಂಗ್, ವೈದ್ಯಕೀಯ ಮತ್ತಿತರೆ ಎಲ್ಲ ವೃತ್ತಿಪರ ಶಿಕ್ಷಣ ಸಂಸ್ಥೆಗಳು, ರೈತರನ್ನು, ಗ್ರಾಮೀಣ ಜನತೆಯನ್ನು, ದಲಿತರನ್ನು ತಮ್ಮ ಜನಾಂಗಗಳನ್ನು ಹಿಂದುಳಿದ ಪ್ರದೇಶಗಳನ್ನು ಮೇಲೆ ಎತ್ತಿ, ಉದ್ಧಾರ ಮಾಡುವ ಕಪಟ ಘೋಷಣೆಗಳನ್ನು ನೀಡಿಯೇ ಆಯಾ ಭಾಗದ ಮುಗ್ಧ ಜನರ ನೆರವುಗಳನ್ನು ಪಡೆದು ಆರಂಭವಾದ ಸಂಸ್ಥೆಗಳಾಗಿವೆ.

ಆದರೆ ವಾಸ್ತವವಾಗಿ 'ಸೇವೆ' 'ಉದ್ಧಾರ' 'ವಿದ್ಯಾದಾನ' ಈ ಎಲ್ಲ ಮುಖವಾಡಗಳನ್ನು ಗಾಳಿಗೆ ತೂರಿ ವೈದ್ಯಕೀಯ ಸೀಟಿಗೆ 3-10 ಲಕ್ಷ, ಇಂಜನಿಯರಿಂಗ್‌ಗೆ 40 ಸಾವಿರದಿಂದ 3 ಲಕ್ಷ ಇತ್ಯಾದಿ ಬೆಲೆಗಳಲ್ಲಿ ಹೊರ ರಾಜ್ಯದವರಿಗೆ, ಹೊರ ದೇಶದವರಿಗೆ ಹಾಗೂ ರಾಜ್ಯದ ಭೂಮಾಲೀಕ ಬಂಡವಾಳಗಾರರ ಮಕ್ಕಳಿಗೆ ವಿವಿಧ ಪದವಿಗಳನ್ನು ಮಾರಾಟ ನಡೆಸುತ್ತಾ, ಕೋಟ್ಯಂತರ ರೂಪಾಯಿಗಳನ್ನು ಲೂಟಿ ಮಾಡುತ್ತಾ,

ವೃತ್ತಿ ಪರ ಶಿಕ್ಷಣ ಕ್ಷೇತ್ರವನ್ನು 'ಅಂತರರಾಷ್ಟ್ರೀಯ ಕಪ್ಪು ಮಾರುಕಟ್ಟೆಯನ್ನಾಗಿ ಮಾರ್ಪಡಿಸಿದ್ದರೆ ಈ ಲೂಟಿಯ ಪೈಪೋಟಿಯಲ್ಲಿ ವಕೀಲ ರಶೀದ್‌ನಂತಹವರ ಕೊಲೆಗಳು, ಬೀದರ್ ಹಿಂದು-ಸಿಖ್ಖ ಗಲಭೆಗಳಂತಹ ಕೋಮು ಗಲಭೆಗಳನ್ನು ನಡೆಸಲ್ಪು ಸಹ ಹಿಂಜರಿಯದ ಈ ದುಷ್ಟರು, ಕಡಿಮೆ ಅವಧಿಯಲ್ಲಿ ಸರ್ಕಾರದ ಬೆಂಬಲದೊಂದಿಗೆ ಬಲಿಷ್ಠವಾಗಿ ಬೆಳೆದರು.

ಶಿಕ್ಷಣ ವ್ಯಾಪಾರಿಗಳ ಹಿಡಿತದಲ್ಲಿ ವೃತ್ತಿ ಶಿಕ್ಷಣ

ರಾಜ್ಯದ ಒಟ್ಟು 19 ವೈದ್ಯಕೀಯ, 50 ಇಂಜನಿಯರಿಂಗ್ 29 ದಂತ ಕಾಲೇಜ್‌ಗಳಲ್ಲಿ 15 ವೈದ್ಯಕೀಯ, 46 ಇಂಜನಿಯರಿಗ್ 29 ದಂತ ಕಾಲೇಜ್‌ಗಳನ್ನು ನಡೆಸುತ್ತಾ, ವರ್ಷಕ್ಕೆ ಸುಮಾರು 200-500 ಕೋಟಿ ರೂಪಾಯಿಗಳ ವಹಿವಾಟು ನಡೆಸುತ್ತಿರುವ, ಇವರು ತಮ್ಮ ತಮ್ಮ ಜಾತಿ, ಧರ್ಮ ಪ್ರದೇಶಗಳಲ್ಲಿ ತಮ್ಮದೇ ಆದ ವ್ಯಾಪಕ ಪ್ರಭಾವವನ್ನು ಹಾಗೂ ಸಂಪತ್ತನ್ನು ಗಳಿಸಿರುವ ಈ ರಾಜಕಾರಣಿಗಳ ಮಠಾಧಿಪತಿಗಳ ಹಾಗೂ ಬಂಡವಾಳಗಾರರ ಬೆಂಬಲ ಬಯಸುವ ಕಾಂಗ್ರೆ ಮತ್ತಿತರೆ ಆಳುವ ಪಕ್ಷಗಳ, ಸರ್ಕಾರಗಳು, ಈ ಶಕ್ತಿಗಳಿಗೆ ವ್ಯಾಪಕ ಬೆಂಬಲ, ಮಾತ್ರವಲ್ಲ ಪ್ರತಿವರ್ಷ ಹೊಸ ಹೊಸ ಕಾಲೇಜ್‌ಗಳನ್ನು ಆರಂಭಿಸಲು ಅನುಮತಿ ನೀಡುತ್ತಾ ಬಂದವು. ಈ ಕ್ರಿಯೆ ದಿವಂಗತ ಅರಸುರವರಿಂದ ಆರಂಭವಾಗಿ ಹೆಗಡೆನಂತರ ಬಂಗಾರಪ್ಪನವರ ಅವಧಿಗೆ ಮುಗಿಲು ಮುಟ್ಟಿತು. (ರೈತ ನಾಯಕ, ಕಾರ್ಮಿಕ ನಾಯಕ ಇತ್ಯಾದಿ ಬಿರುದಗಳನ್ನು ಘೋಷಿಸಿಕೊಳ್ಳುತ್ತಾ ಹೊರಟಿರುವ ಮಾನ್ಯ ಬಿ.ಎಸ್. ಎಡಿಯೂರಪ್ಪ ಎಂಬ ಬಿಜೆಪಿ ಮುಖಂಡರಿಗೆ ಈ 'ಸರಸ್ವತಿ ಹರಾಜಿನ' ಬಗ್ಗೆ ಗೊತ್ತಿಲ್ಲವೋ ಗೊತ್ತಿದ್ದರೂ 'ಲಕ್ಷ್ಮಿ' ಮೇಲೆ ಇರುವ ಪೂರ್ವಭಾವನೆಯಿಂದಲೋ ಈ ಬಗ್ಗೆ ಏನೇ ಆಚರಣೆ ಮಾಡುತ್ತಾ ಬಂದಿದ್ದ ಇವರ ಮರಿಗಳಾದ ಎ.ಬಿ.ವಿ.ಪಿ. ಒಂದು ರೀತಿಯ ದೊಂಬರಾಟ ಆಡುತ್ತಿದ್ದಾರೆ) ಹೀಗೆ ಎಲ್ಲ ಭ್ರಷ್ಟ ಶಕ್ತಿಗಳ ಬೆಂಬಲ ಸಹಕಾರದೊಂದಿಗೆ ಪೆಡಂಭೂತವಾಗಿ ಬೆಳೆದು ನಿಂತು, ಕೋಟಿಗಟ್ಟಲೆ ಲೂಟಿ ಮಾಡುತ್ತ ಹಣ, ಅಧಿಕಾರದ ಮದದಿಂದ ರಾಜ್ಯದ ನಾಲ್ಕುವರೆ ಕೋಟಿ ಜನತೆಗೆ ಸವಾಲಾಗಿ ನಿಂತಿದ್ದರು.

ಶಿಕ್ಷಣ ಖಾಸಗೀಕರಣ ಹಾಗೂ ವ್ಯಾಪಾರೀಕರಣದ ವಿರುದ್ಧ ಬೆಳೆದು ಬಂದ ಹೋರಾಟಗಳು

ಇಂತಹ ಸನ್ನಿವೇಶದಲ್ಲಿ ಡೊನೇಷನ್, ಕ್ಯಾಪಿಟೇಷನ್‌ಗಳ ವಿರುದ್ಧ ಹಲವಾರು ಜನಪರ ಹೋರಾಟಗಳು ಬೆಳೆದು ಬಂದವು. ರಾಜ್ಯದ ಮಟ್ಟಿಗೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) 1980 ರ ಆರಂಭದಿಂದಲೂ ಮುಂಚೂಣಿಯಲ್ಲಿ ಇದ್ದು ಪ್ರಚಾರ ಪ್ರಕ್ಷೋಭೆಗಳನ್ನು ಹೋರಾಟಗಳನ್ನು ನಡೆಸಿತು. 1986 ಜನವರಿಯಲ್ಲಿ ಸಂಘಟಿಸಲ್ಪಟ್ಟ ಹತ್ತು ಲಕ್ಷ ವಿದ್ಯಾರ್ಥಿಗಳ ಪೋಷಕರ ಸಹಿ ಸಂಗ್ರಹ 6,000 ವಿದ್ಯಾರ್ಥಿಗಳ ವಿಧಾನ ಸೌಧ ಚಲೋ ಆಂದೋಲನ ಆರಂಭದ ಪ್ರಮುಖ ಹೋರಾಟವಾಗಿದೆ. ಆ ನಂತರ ಪ್ರತಿ ವರ್ಷ ಎಸ್.ಎಫ್.ಐ ರ್‍ಯಾಲಿ, ಪ್ರದರ್ಶನ ಇತ್ಯಾದಿ ರೀತಿಯ ಹೋರಾಟಗಳನ್ನು ನಡೆಸುತ್ತಾ ಬಂದಿವೆ. ಇವರ ಜೊತೆ ಇನ್ನೂ ಹಲವು ಸಂಘಟನೆಗಳ ಹೋರಾಟಗಳನ್ನು ನಡೆಸುತ್ತಾ ಬಂದವು. ಈ ವಿಶಾಲ ಹೋರಾಟ, ಪ್ರಚಾರ, ಪ್ರಕ್ಷೋಭೆಗೆ ರಾಜ್ಯದಲ್ಲಿ ರಾಷ್ಟ್ರದಲ್ಲಿ ನಡೆದ ಫಲವಾಗಿಯೇ 1993 ಆರಂಭದಲ್ಲಿ ವೃತ್ತಿ ಶಿಕ್ಷಣದಲ್ಲಿ ಕ್ಯಾಪಿಟೇಷನ್‌ನ್ನು ಕೊನೆಗಾಣಿಸುವ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ಒಂದು ತೀರ್ಪನ್ನು ನೀಡಿತು.

ಸುಪ್ರೀಂ ಕೋರ್ಟ್ ತೀರ್ಪು ಏನು ಹೇಳುತ್ತದೆ?

ಶಿಕ್ಷಣದ ಜನತೆಯ ಮೂಲಭೂತ ಹಕ್ಕು, ಕಾರಣ ಶಿಕ್ಷಣ ಕ್ಷೇತ್ರದಲ್ಲಿ, ವ್ಯಾಪಾರಕ್ಕೆ ಅವಕಾಶ ಸಲ್ಲದು, ವೃತ್ತಿಪರ ಶಿಕ್ಷಣದಲ್ಲಿ ಕ್ಯಾಪಿಟೇಷನ್‌ಗೆ ಅವಕಾಶ ನೀಡಬಾರದೆಂದು, ಇದನ್ನು ಜಾರಿ ಗೊಳಿಸಲು ವಿದ್ಯಾರ್ಥಿಗಳನ್ನು ಪ್ರತಿಭೆಯ ಆಧಾರದಲ್ಲಿ ಆಯ್ಕೆ ಮಾಡುವ, ಶುಲ್ಕಗಳನ್ನು ನಿಗದಿ ಮಾಡುವ ಅಧಿಕಾರ ಸರ್ಕಾರ ವಹಿಸಿಕೊಳ್ಳಬೇಕೆಂದು ಹೇಳಿತು.

ಈಗಾಗಲೇ ಇರುವ ಖಾಸಗೀ ಕಾಲೇಜ್‌ಗಳನ್ನು ನಡೆಸಿ ಕೊಂಡು ಹೋಗುವ ವೆಚ್ಚವನ್ನು ಶೇ 50 ರಷ್ಟು ಹೆಚ್ಚುವರಿ ಶುಲ್ಕದ "ಪೇಮೇಂಟ್ ಸೀಟು"ಗಳೆಂದು ಹಾಗೂ ಸರಕಾರಿ ಶುಲ್ಕಗಳೊಂದಿಗೆ ಶೇ. 50 "ಖರ್ಚು ಸೀಟು"ಗಳೆಂದು ನಿರ್ಣಯಿಸಿ ಇದನ್ನು ಎಲ್ಲ ರಾಜ್ಯ ಸರ್ಕಾರಗಳು ಜಾರಿ ಮಾಡಬೇಕೆಂದು ತಿಳಿಸಿತು.

ಈ ತೀರ್ಪು "ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕು" ಎನ್ನುವ ಅಂಶವನ್ನು ಐತಿಹಾಸಿಕವೆಂದು ಬಾವಿಸಿದ ಎಸ್.ಎಫ್.ಐ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಾರ ಸಲ್ಲದೆಂಬ ಅಂಶವನ್ನು ಎತ್ತಿ ಹಿಡಿದು ನ್ಯಾಯಯುತ ಶುಲ್ಕಗಳೊಂದಿಗೆ ಈ ತೀರ್ಪನ್ನು ರಾಜ್ಯ ಸರ್ಕಾರ ಜಾರಿ ಮಾಡಬೇಕೆಂದು ಒತ್ತಾಯಿಸಿತು.

ರಾಜ್ಯ ಸರ್ಕಾರವು ಸಹ ಪ್ರವೇಶ ಪರೀಕ್ಷೆ ನಡೆಸುವ, ಶುಲ್ಕ ನಿಗದಿ ಮಾಡಲು ಸಮಿತಿ ರಚನೆ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲು ಆರಂಭ ಮಾಡಿತು.

ಪಕ್ಷ ಭೇದ ಮರೆತು ಒಂದಾದ ಆಳುವ ವರ್ಗ

ಆದರೆ ಖಾಸಗೀ ಮಾಲೀಕರು, ಮಠಾಧಿಪತಿಗಳು ಪಟ್ಟಭದ್ರ ಹಿತಾಸಕ್ತಿಗಾ
ಈ ತೀರ್ಪು ಸಂಪೂರ್ಣ ತಿರಸ್ಕರಿಸ
ಕೆಂದು, ಒಂದು ವೇಳೆ ತೀರ್ಪು ಜಾ
ಯಾದರೆ ಗ್ರಾಮೀಣ ವಿದ್ಯಾರ್ಥಿಗ
ಅನ್ಯಾಯವಾಗುವುದೆಂದು ತಮಗೆ
ದಾನ" "ಸೇವೆ' ' ಮಾಡಲು ಅವಕಾಶ
ರುವುದಿಲ್ಲವೆಂದು, ಮುಂತಾದ ಕಳ್ಳ
ಗಳನ್ನೊಡ್ಡಿ ಈ ತೀರ್ಪನ್ನು ಧಿಕ್ಕರಿಸ
ಶುರು ಮಾಡಿದರು. ಇವರ ಜೊತ
ಇವರ ನಿಷ್ಠ ರಾಜಕಾರಣಿಗಳು ಇವ
ತಾಳಕ್ಕೆ ತಕ್ಕಂತೆ ಕುಣಿಯಲು ಆರಂಭ ಮಾ
ದರು. ಬಿಜೆಪಿ ಧುರೀಣ ಎಲ್.ಜಿ. ಹಾ
ನೂರ್, ನ್ಯಾಯಾಲಯ ಈ ವಿಷಯದ
ಲಂಗುಲಗಾಮಿಲ್ಲದ ಕುದುರೆಯಂತೆ ವ
ಸುತ್ತಿದೆ ಎಂದರೆ, ಈ ತೀರ್ಪನ್ನು ಧಿಕ
ಸಲು ಅಗತ್ಯ ಬಿದ್ದರೆ ಸಂವಿಧಾನಕ್ಕೂ ತಿ
ಪಡಿ ತರಬೇಕೆಂದರು. ಸಂಸತ್ ಸದಸ್ಯ ಡಾ
ಬಿ.ಜಿ. ಜವಳಿ, ಇವರೆಲ್ಲಗಿಂತ ಒಂದು ಹೆ
ಮುಂದೆ ಹೋಗಿ ಶ್ರೀ ದೇವೇಗೌಡರು ಬ
ರೈತನಿಗೆ ಅನ್ಯಾಯ ಮಾಡುವ ಈ ತೀರ್ಪ
ಧಿಕ್ಕರಿಸಲು ನಾವು ಸ್ವಾಮಿಜಿಗಳ
ಬೀದಿಗಿಳಿದು ಹೋರಾಟ ನಡೆಸಬೇಕೆಂ
ಕರೆ ನೀಡಿದರು. ಹುಟ್ಟು ಹೋರಾ
ಗಾರ(!) ಬಿ.ಎಸ್. ಎಡಿಯೂರಪ್ಪ ಮ
ವನ್ನು ವಹಿಸಿದರು. ಕೊನೆಗೆ ಸ್ವಾಮಿಜ
ಗಳ, "ಲಕ್ಷ್ಮೀಪುತ್ರ" ಕೃಪೆಯನ್ನು ತಾವು ಬ
ರಂಗವಾಗಿಯೇ ಗಳಿಸಬೇಕೆನ್ನುವ ಉದ್ದ
ಶದಿಂದ ಏನೋ ಮೊನ್ನೆ ಮೊನ್ನೆ ಬಿಜೆ
ರಾಜ್ಯದ ಪ್ರಧಾನ ಕಾರ್ಯದರ್ಶಿಯೊಬ್ಬ
ಸ್ವಾಮಿಗಳು ಕೇಳುವುದರಲ್ಲಿ ನ್ಯಾಯವಿ
ಯೆಂದು ಅವರು ತಮ್ಮ ಪಾಲಿನ ಕೋಟಿ
ಳನ್ನು ಲೂಟಿ ಮಾಡಲು ಅವಕಾಶ ಆ
ವಂತೆ ತೀರ್ಪಿಗೆ ತಿದ್ದುಪಡಿ ತರಬೇಕೆಂದ
ಘೋಷಿಸಿದರು.

ಇಷ್ಟು ದೊಡ್ಡ ಬೆಂಬಲವನ್ನು ಪಡೆ
ಮಾಲೀಕರು, ಅಭದ್ರತೆಯ ಸ್ಥಿತಿಯಲ್ಲಿರು

ಶಿಕ್ಷಣ ವ್ಯಾ

ಶಿಕ್ಷಣದ ವ್ಯಾಪಾರೀಕರಣದ ವಿರು
ದೇಶಾದ್ಯಂತ ಹೋರಾಟ ನಡೆಸುವ
ಯವನ್ನು ಎಸ್.ಎಫ್.ಐ. ಕೈ ಗೊಂಡಿ
ಈ ವ್ಯಾಪಾರೀಕರಣದ ಅಪಾಯ ವಿದ್ಯಾ
ಸಮುದಾಯದ ಮೇಲೆ ಯಾವ ರಿ
ಕೆಟ್ಟ ಪರಿಣಾಮ ಬೀರುತ್ತದೆಂಬುದನ್ನು
ಸಲು ಸಮಾವೇಶಗಳನ್ನೂ, ಸಭೆ ಮೆ
ವಣಿಗೆಗಳನ್ನು ಅಕ್ಟೋಬರ್ -ನವೆಂಬ
ತಿಂಗಳುಗಳಲ್ಲಿ ನಡೆಸಬೇಕೆಂದು ನಿರ್ಣ
ಸಿದೆ. ಶಿಕ್ಷಣ ತಜ್ಞರು, ಬುದ್ಧಿಜೀ
ಗಳನ್ನೊಳಗೊಂಡ ವಿದ್ಯಾರ್ಥಿಗಳ ವ

- ಕಾಂ. ಜಿ.ಸಿ. ಬಯ್ಯಾರೆಡ್ಡಿ

ರ್ಯ ತೀರ್ಪು ನೀಡಿ ಶಿಕ್ಷಣ ಪ್ರಜೆಗಳ ಹಕ್ಕು ಎಂದು ಹೇಳಿದ್ದು ಕ್ಯಾಪಿಟೇಷನ್

ರುದ್ಧವೇ ಸಮರ ಸಾರಿದರು. ಎಲ್ಲ ವೃತ್ತಿ ಕಾಲೇಜುಗಳ ಆಡಳಿತ ಮಂಡಳಿಗಳು

ದ್ಯಾರ್ಥಿಗಳ ಒಂದು ಅಮೂಲ್ಯ ವರ್ಷ ಹಾಳಾಗಬಾರದೆಂದು ನೀಡಿರುವ ಈ ಹಳ ಹೆಚ್ಚಿಸಲಾಗಿದೆ. ವಿದೇಶೀಯರಿಗೆ ಅನಿವಾಸೀ ಭಾರತೀಯರಿಗೆ ಶೇ. 15 ಗಳಿಗೂ ಸಹ ಆಡಳಿತ ಮಂಡಳಿಗಳು ಪ್ರವೇಶ ಪರೀಕ್ಷೆ ನಡೆಸದೇ ಪ್ರವೇಶ

ಳಿಂದ ಕಾಲೇಜುಗಳ ಖರ್ಚಿನ ಪೂರ್ಣ ಮೊತ್ತವನ್ನು ವಸೂಲು ಮಾಡಬೇಕಾ ಬಂಡವಾಳದ ಬೆಲೆಯನ್ನು ವಸೂಲು ಮಾಡುವುದಕ್ಕೆ ಅವಕಾಶ ಇರಬಾರದು

ಐ ಈ ಪಿಡುಗಿನ ವಿರುದ್ಧ ಹೋರಾಡಿದ್ದು ಇವೆಲ್ಲವುಗಳನ್ನು ವಿವರಿಸುವ ಎಸ್.

ಶ್ರೀ ವೀರಪ್ಪಮೊಯಿಲಿ ಸರ್ಕಾರದ ಮೇಲೆ ಒತ್ತಡ ತಂದು, ತನ್ನ ಭಂಟರ ಮೂಲಕ ಭಿನ್ನಮತವನ್ನು ಇನ್ನಷ್ಟು ಹೆಚ್ಚು ಮಾಡಿಸಿ ಸೌಲಭ್ಯಗಳನ್ನು ಪಡೆಯಲು ಶುರು ಮಾಡಿದರು. ಈ ಮಧ್ಯೆ ಸರ್ಕಾರ ನಿಗದಿ ಮಾಡಿದ ಶುಲ್ಕ...ನ್ನು 4-5 ಪಟ್ಟು ಹೆಚ್ಚಿಸಬೇಕೆಂದು ಹಾಗೂ ಸೀಟುಗಳಲ್ಲಿ ಶೇ. 50 ರಷ್ಟು ಪ್ರವೇಶದ ಅವಕಾಶವನ್ನು ತಮಗೆ ನೀಡಬೇಕೆಂದು ಒತ್ತಾಯಿಸಿ ಎಲ್ಲ ರೀತಿಯ ಒತ್ತಡಗಳನ್ನು ಹಾಕಿದ್ದಲ್ಲದೆ, ಇದು ತೀರ್ಮಾನವಾಗುವತನಕ ಆಯ್ಕೆಯಾದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವುದಿಲ್ಲವೆಂದು ಘೋಷಣೆಯನ್ನು ಮಾಡಿಯೇ ಬಿಟ್ಟರು.

ಮತ್ತೆ ಮುಂದುವರಿದ ಹೋರಾಟ

ಇಂತಹ ಕಠಿಣ ಪರಿಸ್ಥಿತಿಯಲ್ಲಿ ರಾಜ್ಯದ ಪ್ರಮುಖ ಪ್ರಗತಿ ಪರ ವಿದ್ಯಾರ್ಥಿಗಳ ಸಂಘಟನೆಗಳಾದ ಎಸ್.ಎಫ್.ಐ-ಡಿ.ಎಸ್.ಎಫ್. ಹಾಗೂ ಎ.ಐ.ಎಸ್.ಎಫ್. ಮತ್ತಿತರೆ ಶಕ್ತಿಗಳೊಂದಿಗೆ ಸೇರಿ ಆಗಸ್ಟ್ 5 ರಂದು ಸುಮಾರು 10,000 ವಿದ್ಯಾರ್ಥಿಗಳ ರಾಜ್ಯ ಮಟ್ಟದ ರ್‍ಯಾಲಿ ಪ್ರದರ್ಶನ ನಡೆಸಿ ಶಿಕ್ಷಣ ಸಚಿವರಿಗೆ ಮನವಿಯನ್ನು ಅರ್ಪಿಸಿ, ಸರ್ಕಾರ ಯಾವುದೇ ಕಾರಣ ನಿಗದಿಗೊಳಿಸಿರುವ ಶುಲ್ಕಗಳನ್ನು ಹೆಚ್ಚು ಮಾಡಬಾರದೆಂದು ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನಂತೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಬೇಕೆಂದು ಒತ್ತಾಯಿಸಿತು. ಇದನ್ನು ಒಪ್ಪಿದ ಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡುವುದು ಬಿಟ್ಟರೆ, ಸಮಸ್ಯೆಯ ಗಂಭೀರತೆಯನ್ನು ಸರಿಯಾಗಿ ಅರಿತು ಅಗತ್ಯವಾದ ಕ್ರಮ ಹಾಗೂ ಜನರ ಬೆಂಬಲವನ್ನುಗಳಿಸುವುದರಲ್ಲಿ ವಿಫಲವಾದರು. ಇದರ ಪರಿಣಾಮವಾಗಿ ಮೊದಲೇ ಭಿನ್ನಮತದಿಂದ ನರಳುತ್ತ ಅತಂತ್ರ ಸ್ಥಿತಿಯಲ್ಲಿರುವ ಸರ್ಕಾರ ಮಠಾಧೀಶರ, ಮಾಲೀಕರ ಒತ್ತಡಕ್ಕೆ ಮಣಿದು ತಾನೇ ನಿಗದಿಗೊಳಿಸಿದ್ದ ಶುಲ್ಕಗಳನ್ನು ಅತ್ಯಂತ ದುಬಾರಿಯಾಗಿ ಏರಿಸಿ ಒಂದು ರೀತಿಯಲ್ಲಿ ಕ್ಯಾಪಿಟೇಶನನ್ನು ಕಾನೂನು ಬದ್ಧಗೊಳಿಸಿದಂತೆ ಮಾಡಿದೆ. ಇದರಿಂದ ಸರ್ಕಾರದ ಈ ಸೋಲನ್ನು ಕಂಡು ಮಾಲೀಕರು ತಮ್ಮ ನಿಲುವನ್ನು ಇನ್ನಷ್ಟು ಬಿಗಿಮಾಡಿ ತಮ್ಮ ಬೇಡಿಕೆಗಳು ಸಂಪೂರ್ಣವಾಗಿ ಈಡೇರುವ ತನಕ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸಿ, ವಾಪಸು ಕಳುಹಿಸುತ್ತಿದ್ದಾರೆ.

ಇದರಿಂದ ಸಾವಿರಾರು ವಿದ್ಯಾರ್ಥಿಗಳು ಪೋಷಕರು ದಿಕ್ಕು ಕಾಣದೆ ಕಂಗಾಲಾಗಿದ್ದಾರೆ.

ಇಂತಹ ಸ್ಥಿತಿಯಲ್ಲಿ, ಎಸ್.ಎಫ್.ಐ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳು ಕಾರ್ಮಿಕ-ಮಹಿಳಾ ಸಂಘಟನೆಗಳೊಂದಿಗೆ ಸೇರಿ ಅಕ್ಟೋಬರ್ 5 ರಂದು ರಾಜ್‌ಭವನ್ ಎದುರು ಸಾಮೂಹಿಕ ಧರಣಿಯನ್ನು ಸಂಘಟಿಸಿ, ಸರ್ಕಾರ ಏರಿಸಿರುವ ದುಬಾರಿ ಶುಲ್ಕಗಳನ್ನು ಇಳಿಸಬೇಕೆಂದು, ಪ್ರವೇಶ ನಿರಾಕರಿಸುತ್ತಿರುವ ಖಾಸಗಿ ಕಾಲೇಜ್‌ಗಳನ್ನು ಸರ್ಕಾರವೇ ವಹಿಸಿಕೊಂಡು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸಿ ಈ ಬಗ್ಗೆ ರಾಜ್ಯಪಾಲರಿಗೆ ಮನವಿಯನ್ನು ಅರ್ಪಿಸಿತು.

ಬಹುಶಃ ರಾಜ್ಯದ ಇವತ್ತಿನ ಈ ಬಿಕ್ಕಟ್ಟು ನ್ಯಾಯ ಸಮ್ಮತವಾಗಿ ಪರಿಹರಿಸಲು ಮೇಲಿನ ಮಾರ್ಗ ಏಕೈಕ ಮಾರ್ಗವೆಂದು ನಾವು ಭಾವಿಸುತ್ತವೆ. ಈ ದಿಸೆಯಲ್ಲಿ ರೈತ-ಕಾರ್ಮಿಕ ಮತ್ತಿತರೆ ವಿಶಾಲ ಜನತೆಯೊಂದಿಗೆ ನಡೆಯುವ ವಿದ್ಯಾರ್ಥಿ ಹೋರಾಟದಿಂದಾಗಿ ಮಾತ್ರವೇ ಮೇಲಿನ ಪರಿಹಾರವನ್ನು ಕಂಡುಕೊಳ್ಳಬಹುದು. ಇಂದು ಇವರ ಆಧಾರದಲ್ಲಿ ಮಠಾಧಿಪತಿಗಳು, ಭ್ರಷ್ಟರಾಜಕಾರಣಿಗಳ ಸವಾಲನ್ನು ನಾವು ಎದುರಿಸಬೇಕಾಗಿದೆ.

...ೀಕರಣದ ವಿರುದ್ಧ ಹೋರಾಟ

...ಾಪ್ ಒದನ್ನು ನಡೆಸಲು ನಿರ್ಧರಿಸಿದೆ ...ಂದು ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಸುಜನ್ ಚಕ್ರವರ್ತಿಯವರು ಕಲ್ಕತ್ತದಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಪ್ರಕಟಿಸಿದರು. ಶಿಕ್ಷಣ ಸಂಸ್ಥೆಗಳನ್ನು ವ್ಯಾಪಾರೀಕರಣಗೊಳಿಸಬೇಕೆಂಬ ವಿಚಾರ ದೇಶಾದ್ಯಂತ ಹೆಚ್ಚಾಗಿ ...ಳಿದು ಬರುತ್ತಲಿದೆ. ಹಲವು ರಾಜ್ಯಗಳು ...ಆಗಲೇ ಅದನ್ನ ಸಾಧಿಸಿವೆ. ಈ ರಾಜ್ಯ...ಗಳಲ್ಲಿ ಕಾಲೇಜುಗಳಿಗೆ ಪ್ರವೇಶ ಕ್ಯಾಪಿಟೇ...ಷನ್ ಫೀ ಮತ್ತು ಪೇಮೆಂಟ್ ಸೀಟುಗ...ಳನ್ನೇ ಅವಲಂಬಿಸಿದೆ. ಮಹಾರಾಷ್ಟ್ರದಲ್ಲಿ ... ಸಂಭವಿಸಿದ ಭೂಕಂಪ ಪರಿಹಾರಕ್ಕೆ ಎಸ್.ಎಫ್.ಐ. ವತಿಯಿಂದ ಡಾಕ್ಟರು ವಿದ್ಯಾರ್ಥಿಗಳು ಮತ್ತು ಔಷಧಿಗಳನ್ನು ಕಳುಹಿಸಲಾಗುವುದು. ಮನೆಗಳನ್ನು ಕಟ್ಟುವ ಕೆಲಸವನ್ನು ಮೇಲ್ವಿಚಾರಣೆ ಮಾಡಲಿಕ್ಕೆ 100 ರಿಂದ 150 ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನು ಕಳುಹಿಸಿ ಕೊಡಲಾಗುವುದೆಂದು ಚಕ್ರವರ್ತಿಯವರು ಹೇಳಿದರು.

ಐ.ಎನ್.ಎಸ್

ದೊಡ್ಡ ಬಂಡವಾಳಿಗರಿಗೆ ಹಸಿರು ಚಾನೆಲ್

ಇದೊಂದು ಬಹುಮಾನ. ಕೇಂದ್ರ ಸರ್ಕಾರ ದೊಡ್ಡ ಬಂಡವಾಳಿಗರಿಗೆ ನೀಡಲು ಮುಂದೆ ಬಂದಿದೆ. ಸುಮಾರು 1,300 ವರ್ತಕರಿಗೆ ಈ ಚಾನೆಲ್‌ಲನ್ನು ಸರ್ಕಾರ ನೀಡಲಿದೆ. ಈ ಹಸಿರು ಚಾನೆಲ್ ಅನುಕೂಲ ಪಡೆದವರಿಗೆ ಸುಂಕ ನಿರ್ಬಂಧಗಳ ತೊಂದರೆ ಇರುವುದಿಲ್ಲ. ಅರ್ಥಾತ್ ಇದು ಪೂರ್ಣ ರಫ್ತು ವ್ಯವಹಾರ ಮಾಡುವ ಬಂಡವಾಳಿಗರಿಗೆ ಸರ್ಕಾರ ನೀಡುವ ಬಹುಮಾನ.



ಉದಾರೀಕರಣದಿಂದ ರಫ್ತು ಹೆಚ್ಚಿದೆ ಎನ್ನುತ್ತದೆ ಸರ್ಕಾರ ಅಲ್ಲವೆ? ಉದಾರೀಕರಣದ ಕ್ರಮಗಳು ರಫ್ತನ್ನು ಆಗಲೇ ಹೆಚ್ಚಿಸಿದ್ದರೆ ಈ ವಿಶೇಷ ಸವಲತ್ತುಗಳೇಕೆ? ಈ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಕೇಂದ್ರ ಸರ್ಕಾರವೇನೂ ಹೇಳುತ್ತಲೇ ಇದೆ. ಸರ್ಕಾರದ ಆರ್ಥಿಕ ಕಸರತ್ತುಗಳಿಂದಾಗಿ ರಫ್ತು ಅಲ್ಪ ಸ್ವಲ್ಪ ಹೆಚ್ಚಾಗಿಯೂ ಇದೆ. ಆದರೆ ನಿರೀಕ್ಷಿತ ಪ್ರಮಾಣದಲ್ಲಲ್ಲ. ಅವಶ್ಯವಿರುವ ಪ್ರಮಾಣದಲ್ಲೂ ಅಲ್ಲ ಅದಕ್ಕೇ ಈ ಸರ್ಕಾರ ಹೇಗಾದರೂ ಮಾಡಿ ರಫ್ತನ್ನು ಹೆಚ್ಚಿಸಿ ತನ್ನ ಮುಖವುಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ.

ಕುದುರೆಮುಖ ಉಕ್ಕು ತಂದ ಲಾಭ

ಸಾರ್ವಜನಿಕ ವಲಯದ ಉದ್ದಿಮೆಗಳು ಲಾಭ ತರುವ ಸುದ್ದಿಗಳೇ ಈಗೀಗ ವಿರಳವಾಗಿದೆ. ಇದಕ್ಕೆ ಎರಡು ಕಾರಣಗಳು. ಒಂದು ಈ ಉದ್ದಿಮೆಗಳ ಮಾಲೀಕನಾದ ಸರ್ಕಾರ ರಾಜಕೀಯ ಲಾಭಕ್ಕಾಗಿ ಯದ್ವ ತದ್ವಾ ನಿರ್ವಹಣೆ ಮಾಡಿ ಅವುಗಳ ಲಾಭದಾಯಕತನವನ್ನೇ ತಿರುಚಿ ಹೊರಗಿನಿಂದ ಅವು ಆರ್ಥಿಕ ಹಾನಿ ಅನುಭವಿಸುವಂತೆ ಮಾಡಿ ತಮ್ಮ ರಾಜಕೀಯಕ್ಕೆ ಲಾಭವಾಗುವಂತೆ ಮಾಡಿಕೊಂಡಿರುವುದು. ಎರಡನೆಯದು ನರಸಿಹರಾಯರ ಸರ್ಕಾರ ಬಂದನಂತರ ತನ್ನ ಉದಾರೀಕರಣದ ಸಮರ್ಥನೆಗಾಗಿ ಈ ಉದ್ದಿಮೆಗಳ ಮೇಲೆ ಅನಗತ್ಯ ನಿರ್ಬಂಧನೆಗಳನ್ನು ಹೇರಿ ಅವು ಲಾಭದಾಯಕವಲ್ಲ ಎಂಬ ಭಾವನೆಯನ್ನು ಸಾರ್ವಜನಿಕರಲ್ಲಿ ತುರುಕಲು ಪ್ರಯತ್ನ ಮಾಡುತ್ತಿರುವುದು.

ನರಸಿಂಹರಾವ್ ಸರಕಾರದ 28ನೇ ತಿಂಗಳಲ್ಲಿ

ಈ ಹಿನ್ನೆಲೆಯಲ್ಲೇ ಯಾವುದೇ ಒಂದು ಸಾರ್ವಜನಿಕ ಉದ್ದಿಮೆ ಲಾಭ ಮಾಡಿದೆ ಎಂದರೆ ಅದು ಒಳ್ಳೆಯ ಸುದ್ದಿಯಾಗುವುದು. ಈಗ ಕುದುರೆ ಮುಖ ಉಕ್ಕು ಕಂಪನಿ ಲಾಭ ಮಾಡಿದ ಸುದ್ದಿಯಿದೆ. ಈ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಕೇಂದ್ರ ಸರ್ಕಾರಕ್ಕೆ ಈ ಲಾಭವನ್ನು ನೀಡಿದರು. ಹಿಂದೆ ಹಾನಿ ತೋರುತ್ತಿದ್ದ ಈ ಕಂಪನಿ ಆ ಹಾನಿಯೆಲ್ಲವನ್ನು ತೊಡೆದು ಹಾಕಿ 100.15 ಕೋಟಿ ರೂಪಾಯಿಗಳ ಲಾಭ ತೋರಿದೆ.

ಮರಳುಗಾಡಿನಲ್ಲಿ 'ಓಯಸಿಸ್' ಕಂಡಂತೆ ಅಲ್ಲವೆ?

ಐ.ಐ.ಎಸ್.ಕಂ. (ಇಸ್ಕೋ): ಸರ್ಕಾರದ ಕುತಂತ್ರ

ಸರ್ಕಾರಿ ಸ್ವಾಮ್ಯದ ಭಾರತೀಯ ಉಕ್ಕು ಮತ್ತು ಕಬ್ಬಿಣ ಕಂಪನಿ (ಇಸ್ಕೋ) ಬಗೆಗೆ ಸರ್ಕಾರ ಒಳಗೇ ಕುಯುಕ್ತಿ ಹೂಡುತ್ತಿರುವುದು ಈಗ ಗುಟ್ಟೇನಲ್ಲ. ಈ ಕಂಪನಿಯನ್ನು ಖಾಸಗಿ ವಲಯದ ಮುಕುಂದ ಲಿಮಿಟೆಡ್‌ಗೆ ಮಾರಲು ಸರ್ಕಾರ ಬಯಸಿತ್ತು. ಇದನ್ನು ತಿಳಿದ ಟ್ರೇಡ್ ಯೂನಿಯನ್‌ಗಳು-ಇಂಟಕ್ ಸಹ ಸೇರಿ ತೀವ್ರವಾಗಿ ಪ್ರತಿಭಟನೆ ವ್ಯಕ್ತಪಡಿಸಿದವು.

ಅನಂತರ ಈ ನಿರ್ಧಾರವನ್ನು ಮಂತ್ರಿಮಂಡಳ ಮುಂದೂಡಿದೆ ಎಂದು ಹೇಳಿಕೆ ನೀಡಲಾಯಿತು. ಆದರೆ ತನ್ನ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಸಾವಿರಾರು ಜನ ಕಾರ್ಮಿಕರಿಗೆ ಅನ್ನಕ್ಕೆ ದಿಕ್ಕಾಗಿರುವ ಈ ಕಂಪನಿಯನ್ನು ಸರ್ಕಾರ ಏನು ಮಾಡುತ್ತದೋ ಗೊತ್ತಿಲ್ಲ. ತನ್ನ ಲಾಭಕ್ಕಾಗಿ ಅದು ರಾಜಕೀಯ ಮಾಡುತ್ತಿರುವುದಂತೂ ಸ್ಪಷ್ಟ.

ಫಿಕ್ಕಿಯ ಪೇಚು

ಹಿಂದೆಲ್ಲ ಉದಾರೀಕರಣವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದ ದೊಡ್ಡ ಬಂಡವಾಳಿಗರ ವೇದಿಕೆ ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ (FICCI- ಫಿಕ್ಕಿ) ಈಗ ತನ್ನ ಪ್ಲೇಟನ್ನೇ ತಿರುಗಿಸಿದೆ.

ಅನಿವಾಸಿ ಭಾರತೀಯರು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಕೆಂಪು ರತ್ನಗಂಬಳಿಯ ಸ್ವಾಗತ ನೀಡುವುದು ನ್ಯಾಯವಲ್ಲ ಎಂದು ಫಿಕ್ಕಿ ಹೇಳುತ್ತಿದೆ. ಭಾರತ ಈ ಅನಿವಾಸಿ ಭಾರತೀಯರು ಮತ್ತು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ಧಿಸಲಾರದು ಎಂಬುದು ಫಿಕ್ಕಿಗೆ ಜ್ಞಾನೋದಯವಾಗಿದೆ. ಇಲ್ಲಿ ಸರಿಯಾದ ಅಂತರ್ರಚನೆ ಇಲ್ಲ. ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ಕಡಿಮೆ ಪ್ರಮಾಣದಲ್ಲಿ ಇವೆ. ಸುಂಕ ಮತ್ತು ಕರ ಪ್ರಮಾಣ ಭಾರತೀಯರಿಗೆ ಅನಾನುಕೂಲಕರವಾಗಿದೆ. ಈ ಎಲ್ಲ ಕಾರಣಗಳಿಂದ ಅವರೊಡನೆ ನಾವು ಸಮಾನ ಸ್ಪರ್ಧೆ ಮಾಡಲಾರೆವು ಎಂದಿದೆ ಅದು.

ಫಿಕ್ಕಿ ಹೇಳುತ್ತಿರುವುದು ನಿಜ. ಆದರೆ ಫಿಕ್ಕಿ ಇಲ್ಲಿಯವರೆಗೆ ಸುಮ್ಮನೆ ಕುಳಿತುಕೊಂಡಿದ್ದು ಏಕೆ. ಏಕೆಂದರೆ ಎಲ್ಲಿಯವರೆಗೆ ತನಗೆ ಲಾಭವಿದೆಯೋ ಅಲ್ಲಿಯವರೆಗೆ ಅದು ಸುಮ್ಮನಿತ್ತು. ಈಗ ಅದರ ಲಾಭಕ್ಕೂ ಸಂಚಕಾರ ಬಂದಾಗ ಅದು ಬಾಯಿಬಿಟ್ಟಿದೆ.

ಇನ್ನೂ ಯಾರ್ಯಾರೂ ಯಾವ್ಯಾವ ಸಮಯದಲ್ಲಿ ಉದಾರೀಕರಣದ ಹಾನಿಗಳನ್ನು ಅರಿಯುತ್ತಾರೋ ಯಾರು ಬಲ್ಲರು?

ಭೂಪಾಲ ಅನಿಲ ದುರಂತದಂತಹ ಇನ್ನೊಂದು ದುರಂತಕ್ಕೆ ನಾಂದಿ?

ಪೂರ್ವ ಭಾರತದಲ್ಲಿ ಹಿಂದೂಸ್ಥಾನ್ ಫರ್ಟಿಲೈಸರ್ ಕಾರ್ಪೋರೇಷನ್ ಲಿಮಿಟೆಡ್ (ಹೆಚ್.ಎಫ್.ಸಿ.ಎಲ್.) ನ ಆರು ಘಟಕಗಳಿವೆ. ಈ ಆರು ಘಟಕಗಳಲ್ಲಿ ಐದು ಈಗ ಪೂರ್ಣ ನಿಂತು ಹೋಗಿವೆ. ಸರ್ಕಾರಿ ಸ್ವಾಮ್ಯದ ಈ ರಸಗೊಬ್ಬರ ಉತ್ಪಾದಿಸುವ ಘಟಕಗಳಲ್ಲಿ ಉತ್ಪಾದನೆ ನಿಂತಂದಿನಿಂದ ಅಮೋನಿಯಾ ಮತ್ತು ಗಂಧಕ ಆಮ್ಲ ಟ್ಯಾಂಕುಗಳಲ್ಲಿ ಹಾಗೇ ಉಳಿದಿವೆ. ಇಂತಹ ಅಪಾಯಕಾರಿ ರಸಾಯನಿಕಗಳು, ಇರುವುದರಿಂದ ಕೇಂದ್ರ ಉದ್ಯಮ ರಕ್ಷಣಾ ತುಕಡಿ ಕಾವಲಿರಬೇಕು. ಕೇಂದ್ರ ಸರ್ಕಾರ ಈ ರಕ್ಷಣಾ ವ್ಯವಸ್ಥೆಯನ್ನೇ ಹಿಂತೆಗೆದುಕೊಂಡಿದೆ. ಪಶ್ಚಿಮ ಬಂಗಾಳ ಸರ್ಕಾರದ ಒತ್ತಾಯದ ಮೇರೆಗೆ ಈಗ ಈ ತುಕಡಿಯನ್ನು ಮತ್ತೆ ಇಲ್ಲಿ ಇಟ್ಟಿದ್ದರೂ ಅದು ತಾತ್ಕಾಲಿಕ ಅಷ್ಟೇ.

ಸರ್ಕಾರ ಈ ಘಟಕಗಳು ಲಾಭದಾಯಕವಲ್ಲ ಎನ್ನುತ್ತಿದೆ. ಲಾಭದಾಯಕವಲ್ಲದಿದ್ದರೆ ಜನಕ್ಕೆ ಅಪಾಯವಾಗುವಂತಹ ಸ್ಥಿತಿಯಲ್ಲೇ ಅವುಗಳನ್ನು ಬಿಡಬಹುದೆ? ಸರ್ಕಾರ ತನ್ನ ಕ್ರಿಯೆಗಳ ಮೂಲಕ 'ಹೌದು' ಎನ್ನುತ್ತಿದೆ.

ಸಿಐಟಿಯು ಧುರೀಣರು 'ಇದು ಲಾಭದಾಯಕವಾಗಿ ನಡೆಯಬಲ್ಲದು ಆದರೆ ಸರ್ಕಾರ ಉದ್ದೇಶಪೂರ್ವಕವಾಗಿಯೇ ಈ ಉದ್ದಿಮೆಯನ್ನು ಲಾಭದಾಯಕವಲ್ಲವೆಂದು ತೋರುತ್ತಿದೆ' ಎಂದಿದ್ದಾರೆ. ಈ ಘಟಕಗಳ ಯಂತ್ರಗಳು 1970 ರ ಕಾಲದವು ಆದ್ದರಿಂದ ಇವುಗಳನ್ನು ಶೇ. 80 ರಷ್ಟು ಡೀರೇಟ್ ಮಾಡಿದರೆ ಹೆಚ್ಚಿನ ಸಹಾಯಧನಕ್ಕೆ ಇವು ಅರ್ಹವಾಗುತ್ತವೆ. ಹಾಗಾದಾಗ ಅವು ಲಾಭದಾಯಕವಾಗುತ್ತವೆ ಆದರೆ ಸರ್ಕಾರಕ್ಕೆ ಇದು ಬೇಕಾಗಿಲ್ಲ ಯೋಜನೇತರ ಬಾಬುಗಳಿಗೆ ಹೆಚ್ಚಿನ ಬಜೆಟ್ ಬೆಂಬಲ ಇಲ್ಲದೇ ಇರುವುದರಿಂದ ಆಡಳಿತ ಮಂಡಳಿ ಘಟಕಗಳನ್ನು ಮುಚ್ಚುತ್ತಿವೆ. ಇದು ಜನರ ರಕ್ಷಣೆಗೇ ಮುಳುವಾಗಿ ಪರಿಣಮಿಸಿದೆ.

ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸುತ್ತದೋ ಇಲ್ಲ ಜನ ಸತ್ತರೆ ಸಾಯಲಿ ಎಂಬ ನಿರ್ಧಾರ ತೆಗೆದುಕೊಳ್ಳುತ್ತದೊ ಕಾದು ನೋಡಬೇಕು.

ಆದರೆ ಅಪಾಯಕಾರಿ ರಸಾಯನಿಕಗಳು ಸರ್ಕಾರ ಕ್ರಮ ಕೈಗೊಳ್ಳುವವರೆಗೆ ಕಾಯುತ್ತವೆಯೆ?

ಹೇಗಿದೆ ಸರ್ಕಾರದ ಸಾರ್ವಜನಿಕ ಉದ್ಯಮಗಳನ್ನು ಹಿಂಗೆಳೆಯುವ ಘನಂದಾರಿ ಕಾರ್ಯ?





ಸಾರ್ವಜನಿಕವಾಗಿ ಖಂಡನೆ ಮಾಡಿದ ಪರಿಣಾಮ ವಾಗಿ ಏಳು ಯುವ ಕಾಂಗ್ರೆ ಮುಖಂಡರಿಗೆ ಮತ್ತು ಮೂವರು ಕಲ್ಕತ್ತಾ ಕಾರ್ಪೋರೇಷನ್ನಿನ ಸದಸ್ಯರಿಗೆ ವಿವರಣೆ ಕೇಳಿ ನೋಟೀಸ್ ಕೊಡಲಾಗಿತ್ತು. ಹೌರಾದ ಇಬ್ಬರು ಮುಖ್ಯ ಜಿಲ್ಲಾ ಮುಖಂಡರ ಕೊಲೆಯ ಓನ್ನೆಲೆಯಲ್ಲೇ ಇದು ನಡೆಯಿತು. ಕೊಲೆಗಡುಕರನ್ನು ಕೂಡಲೇ ಓಡಿಯಲಾಯಿತು. ಅವರೆಲ್ಲ ಮಮತಾ ಬ್ಯಾನರ್ಜಿಯವರ ನಿಕಟವರ್ತಿಗಳೆಂದು ಬಹಿರಂಗವಾಯಿತು. ತನ್ನ ಪ್ರಮುಖ ಶತ್ರುವಿನ ಮೇಲೆ ಆಕ್ರಮಣ ಮಾಡಲು ಇದು ಒಳ್ಳೆ ಸಂದರ್ಭವೆಂದು ತಿಳಿದು ಸಭೆಗೆ ಹಾಜರಾಗುವುದಿಲ್ಲ. "ಪಕ್ಷವನ್ನು ಶುದ್ಧೀಕರಿಸಲು ಕಾಂಗ್ರೆಯಲ್ಲಿ, ತನ್ನ ನಿಜವಾದ ಪ್ರಭಾವವನ್ನು ತೋರ್ಪಡಿಸಲು" ತಾನು "ಜನಸಂಪರ್ಕ ಜಾಥಾ" ಕೈಗೊಳ್ಳುವ ಬೆದರಿಕೆ ಹಾಕಿದ್ದಾಳೆ.

ಮಮತಾ ಬ್ಯಾನರ್ಜಿ ಪಕ್ಷತ್ಯಜಿಸಲು ಯಾರದೂ ಆತಂಕವಿಲ್ಲೆಂದು ಸೋಮೆನ್ ಮಿತ್ರ ಹೇಳಿದ್ದಾರೆ.

ಜ್ಯೋತಿ ಬಸು ಸರಕಾರದ ವಿರುದ್ಧ ವಿಷ ಕಾರುವ ಕಾಂಗ್ರೆ ಕೊಳೆತು ನಾರುತ್ತಿದೆ.

ಒಸಲು ರಾಜ್ಯ ಸಮಿತಿಯು ವಿಶೇಷ ವ್ಯವಸ್ಥೆಯ ಮಾಡಿತ್ತು.

ಕೇರಳ ರಾಜ್ಯದ ಗೆಜೆಟೆಡ್ ಆಫೀಸರ್ಸ್ ಅಸೋಸಿಯೇಷನ್ 5,000 ರೂಗಳನ್ನು ಭೂಕಂಪ ಹಾರ ನಿಧಿಗೆ ನೀಡಿದೆ. ಕೇರಳ ಎನ್.ಜಿ.ಓ ಸಂಘ ತನ್ನೆಲ್ಲಾ ಘಟಕಗಳಿಗೆ ನಿಧಿ ಸಂಗ್ರಹಿಸಲು ಕರೆ ನೀಡಿ ಅದರಂತೆ ಸಂಘದ ಸದಸ್ಯರಿಂದ 1,00,000 ರೂ ಗಳನ್ನು ಪರಿಹಾರ ನಿಧಿಗೆ ಅರ್ಪಿಸಿದ್ದಾರೆ. ಸಿಐಟಿಯು ರಾಜ್ಯ ಸಮಿತಿಯು ತನ್ನೆಲ್ಲಾ ಸದಸ್ಯರಿಂದ ಒಂದು ದಿ ವೇತನವನ್ನು ನೀಡಲು ಕರೆ ಕೊಟ್ಟಿದೆ.

ಮಮತಾ ಬ್ಯಾನರ್ಜಿ ರಾಜೀನಾಮೆ

ಪಶ್ಚಿಮ ಬಂಗಾಳ ಕಾಂಗ್ರೆಸ್ಸಿನಲ್ಲಿ ತೀವ್ರ ಬಿಕ್ಕಟ್ಟು

ಮಮತಾ ಬ್ಯಾನರ್ಜಿ ಮತ್ತು ಅವಳ ಐವರು ನಿಕಟವರ್ತಿಗಳು ಪಶ್ಚಿಮ ಬಂಗಾಲ ಕಾಂಗ್ರೆ ಸಮಿತಿಗೆ ರಾಜೀನಾಮೆ ಕೊಟ್ಟು ಕಾಂಗ್ರೆ ಒಳಗಿನ ಅಂತರಿಕ ಜಗಳವನ್ನು ಮತ್ತಷ್ಟು ತೀಕ್ಷ್ಣಗೊಳಿಸಿದ್ದಾರೆ. ಶಿಸ್ತಿನ ಕ್ರಮವಾಗಿ ಕಾಂಗ್ರೆಯ ಏಳು ಮುಖಂಡರನ್ನು ಪಕ್ಷದಿಂದ ಹೊರಗೆ ಹಾಕಿದಾಗ ಅದಕ್ಕೆ ಪ್ರತಿಯಾಗಿ ಈ ರಾಜೀನಾಮೆಗಳನ್ನು ಸಲ್ಲಿಸಲಾಯಿತು. ರಾಜ್ಯ ಸಮಿತಿಯ ಅಧ್ಯಕ್ಷ, ಸೋಮೆನ್ ಮಿತ್ರ ಅವರ ಕಾಯಿದೆಗೆ ವಿರುದ್ಧವಾದ ಕ್ರಮದ ಕುರಿತು ಅಧ್ಯಕ್ಷ ನರಸಿಂಹರಾವ್ ಅವರು ಈ ತಿಂಗಳ 30 ರೊಳಗಾಗಿ ಕ್ರಮ ತೆಗೆದುಕೊಳ್ಳದಿದ್ದರೆ ತಾನು ಬೇರೆ ಮಾರ್ಗ ಹಿಡಿಯುವುದಾಗಿ ಮಮತಾ ಬ್ಯಾನರ್ಜಿ ತಿಳಿಸಿದ್ದಾರೆ.

ಪ್ರಾಂತ ಕಮಿಟಿ ಅಧ್ಯಕ್ಷ ಪಕ್ಷವನ್ನು ಹಾಳು ಕೆಡವುತ್ತಾನೆಂದೂ, ಶತ್ರುಗಳ ಏಜೆಂಟನಾಗಿದ್ದಾನೆಂದೂ ಸೋಮೆನ್ ಮಿತ್ರ ಈ ಕ್ರಮ ಕೈಗೊಂಡು ಅವರನ್ನೆಲ್ಲ ಪಕ್ಷದಿಂದ ಹೊರಹಾಕಿದರು. ಹೌರಾದ ಯುವ ಕಾಂಗ್ರೆ ಅಧ್ಯಕ್ಷರೂ ಇದರಲ್ಲಿ ಸೇರಿದ್ದಾರೆ.

ಚೌರಂಗಿ ಅಸೆಂಬ್ಲಿ ಚುನಾವಣೆಯಲ್ಲಿಯ ಸೋಲಿನಿಂದಾಗಿ ಕಾಂಗ್ರೆ ಪಕ್ಷದೊಳಗಿನ ಆಂತರಿಕ ಜಗಳ ಇನ್ನೂ ತೀವ್ರಗೊಳ್ಳುವಂತಾಯಿತು. ಮಮತಾ ಬ್ಯಾನರ್ಜಿಯ ಸಲಹೆಯಂತೆ ಯುವ ಕಾಂಗ್ರೆ ಮುಖಂಡರು ಷೋಕಾಸ್ ನೋಟೀಸಿಗೆ ಉತ್ತರ ಕೊಡಲಿಲ್ಲ. ಅವರನ್ನೆಲ್ಲ ಪಕ್ಷದಿಂದ ತೆಗೆದು ಹಾಕಲಾಯಿತು.

ತನ್ನ ಮೇಲಾದ ಆಕ್ರಮಣದ ವಿರುದ್ಧ ಮಮತಾ ಬ್ಯಾನರ್ಜಿ ಸೆಟೆದು ನಿಂತಳು. ಪ್ರಾತ ಕಮಿಟಿಗೆ ರಾಜೀನಾಮೆ ಕೊಟ್ಟಳು. ಇನ್ನೂ ಹಲವು ಮುಖಂಡರು ಆಕೆಯನ್ನನು ಸರಿಸಿದರು. ಸೋಮೆನ್ ಮಿತ್ರನ ಮೇಲೆ ಕ್ರಮ ತೆಗೆದುಕೊಳ್ಳುವ ತನಕ, ಪಕ್ಷದಿಂದ ಅಮಾನತ್ ಗೊಳಿಸಿದ್ದನ್ನು ರದ್ದು ಮಾಡುವ ತನಕ ತಾನು ಪಕ್ಷದ

ಭೂಕಂಪ ಪರಿಹಾರ ನಿಧಿ:

ಕೇರಳದ ಸಂಗಾತಿಗಳ ಅಭೂತಪೂರ್ವ ನೆರವು

ಭಾರತದ ಇತಿಹಾಸದಲ್ಲೇ ಕಂಡು ಕೇಳರಿಯದಂತಹ ಭೂಕಂಪ ಮಹಾರಾಷ್ಟ್ರದ ಮರಾಠವಾಡ ಪ್ರದೇಶಗಳು ಹಾಗೂ ಕರ್ನಾಟಕದ ಕೆಲವಡೆಗಳಲ್ಲಿ ಸಂಭವಿಸಿ 30,000 ಕ್ಕಿಂತಲೂ ಹೆಚ್ಚು ಜನರನ್ನು ಬಲಿತೆಗೆದು ಸಹಸ್ರಾರು ಜನರನ್ನು ನಿರ್ವಸಿತರನ್ನಾಗಿ ಮಾಡಿದೆ. ಇದಕ್ಕಾಗಿ ಭಾರತದಾದ್ಯಂತ ನೆರವು ಸಂಗ್ರಹ ನಡೆಯುತ್ತಿದೆ.

ಕೇರಳ ಸಿಪಿಐ(ಎಂ)ನ ರಾಜ್ಯ ಸಮಿತಿಯು ಭೂಕಂಪ ಸಂತ್ರಸ್ತರಿಗೆ ನೆರವು ನೀಡಲು ನಿಧಿ ಸಂಗ್ರಹಿಸಲು ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿತ್ತು. ಈ ನಿಧಿ ಸಂಗ್ರಹಕ್ಕೆ ಕೇರಳದ ಜನತೆ ಅಭೂತ ಪೂರ್ವ ರೀತಿಯಲ್ಲಿ ನೆರವು ನೀಡಿದ್ದಾರೆ. ಈ ನೆರವು ನಿಧಿಯನ್ನು ಸಂಗ್ರ

ಡಿ.ವೈ.ಎಫ್.ಐನ ರಾಜ್ಯ ಸಮಿತಿ, ಪ್ರಜಾತಂತ್ರ ಮಹಿಳಾ ಸಂಘಟನೆ, ಕೇರಳ ಸ್ಕೂಲ್ ಟೀ ಅಸೋಸಿಯೇಷನ್‌ಗಳು ತನ್ನೆಲ್ಲಾ ಘಟಕಗಳಿಗೆ ತರವಾದ ಪರಿಹಾರ ನಿಧಿಯನ್ನು ಸಂಗ್ರಹಿಸಲು ತ ಶಕ್ತಿಯನ್ನು ವಿನಿಯೋಗಿಸಲು ಕರೆಯನ್ನು ಕೊ ಡಿ.ವೈ.ಎಫ್.ಐನ ಸದಸ್ಯರು ಮನೆ ಮನೆಗೆ ತೆರಳಿ ಧಿಗಳನ್ನು ಸಂಗ್ರಹಿಸಲು ಹಾಗೂ ರಕ್ತವನ್ನು ಸ ಸಲು ರಕ್ತ ಸಂಗ್ರಹದ ಕ್ಯಾಂಪ್‌ಗಳನ್ನು ನಡೆಯು ಹೀಗೆ ಪಕ್ಷದ ಎಲ್ಲಾ ಸಂಗಾತಿಗಳೂ ಭೂಕಂಪದಿಂದ ನೊಂದವರಿಗೆ ಸಹಾಯ ಹಸ್ತ ಚಾಚುತ್ತಿದ್ದಾರೆ. ಕೇರಳದ ಎಲ್ಲಾ ಪಂಚಾಯತ ತಮ್ಮ ಸಹಾಯಧನಗಳನ್ನು ಕಳುಹಿಸಲು ಆರ್ಥಿ ಎಂದು ಐ.ಎನ್.ಎನ್ ಸುದ್ದಿ ತಿಳಿಸಿದೆ.

ರೈತ ಸಂಘದ ಧರಣೆ : ಬೇಡಿಕೆಗಳ ಈಡೇರಿಕೆಗೆ ಭರವಸೆ

ಬೆಂಗಳೂರು: ಬೆಂಗಳೂರು ಉತ್ತರ ತಾಲೂಕು ಯಲಹಂಕ ಹೋಬಳಿ ಅಮೃತ ಹಳ್ಳಿ ಗ್ರಾಮಕ್ಕೆ ಸೇರಿದ್ದ ಸರ್ವೆ ನಂ. 95ರಲ್ಲಿ 11 ಎಕರೆ 17 ಗುಂಟೆ ಸರಕಾರಿ ಭೂಮಿಯನ್ನು ಕಬಳಿಸಲು ಆರ್. ಬಂಗಾರಪ್ಪ ಎಂಬುವವರು ಯತ್ನಿಸುತ್ತಿರುವುದನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯು ದಿನಾಕ 5.10.1993 ರಂದು ನಗರದ ಜಿಲ್ಲಾಧಿಕಾರಿಯ ಕಛೇರಿಯೆದುರು ಧರಣಿ ನಡೆಸಿತು.

ಸುಮಾರು 30 ವರ್ಷಗಳಿಂದ 30 ಕುಟುಂಬಗಳು ಮನೆ ಕಟ್ಟಿ ವಾಸ ಮಾಡುತ್ತಿದ್ದಾರೆ. ಆದರೆ ಅಲ್ಲೆ ಇರುವ ಆರ್. ಬಂಗಾರಪ್ಪ ಎಂಬುವನು ಈ ಭೂಮಿಯನ್ನು ಕಬಳಿಸಲು ಅನೇಕ ತಂತ್ರಗಳನ್ನು ಮಾಡುತ್ತಿದ್ದಾನೆ. ಇದನ್ನು ಅರಿತ ಅಮೃತಹಳ್ಳಿ ಕೆಂಪಾಪುರದ ಬಡಜನರು ಸಂಘಟಿತರಾಗಿ ಆರ್. ಬಂಗಾರಪ್ಪನವರು ಒಕ್ಕಲೆಬ್ಬಿಸುವುದನ್ನು ತಡೆಗಟ್ಟಬೇಕೆಂದು ಮನವಿಯನ್ನು ಅರ್ಪಿಸಿದರು ಮನವಿಯನ್ನು ಸ್ವೀಕರಿಸಿದ ಜಿಲ್ಲಾಧಿಕಾರಿಯವರ ತಕ್ಷಣವೇ ಆ ಭೂಮಿಯಲ್ಲಿ ವಾಸ ಮಾಡುವವರ ಪಟ್ಟಿ ಮಾಡಿಸಿ, ಆ ಭೂಮಿಗೆ ಮುಳ್ಳು ಬೇಲಿಯನ್ನು ಹಾಕಿಸಲು ಆದೇಶಿಸಿ, ನಿವೇಶನ ರಹಿತರನ್ನು ಗುರುತಿಸಿ ಹಕ್ಕು ಪತ್ರಗಳನ್ನು ನೀಡಿ ಆರ್. ಬಂಗಾರಪ್ಪನ ಮೇಲೆ ಸೂಕ್ತ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಧರಣಿಯ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ, ಕೃಷಿ ಕೂಲಿಕಾರರ ಸಂಘಟನೆಯ ಕಾರ್ಯದರ್ಶಿ ಪಿ. ಜಗನ್ನಾಥ್, ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆ ಹೋರಾಟ ಸಮಿತಿಯ ಸಂಚಾಲಕ ಹೂವಪ್ಪಗೌಡ ವಹಿಸಿದ್ದರು.

ಪದಾಧಿಕಾರಿಗಳ ಚುನಾವಣೆ

ಬೆಂಗಳೂರು: ಬೆಂಗಳೂರು ನಾರ್ತ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ಮಹಾಸಭೆಯು 3.10.1993 ರಂದು ಅಯ್ಯಪ್ಪ ಟೆಂಪಲ್ ಕಮ್ಯುನಿಟಿಹಾಲ್ ಜಾಲಿ ಹಳ್ಳಿ ವೆಸ್ಟ್‌ನಲ್ಲಿ ನಡೆಯಿತು. ಈ ಸಭೆಗೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ. ಜೆ.ಕೆ. ನಾಯರ್, ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಹಾಜರಿದ್ದು ಮಾರ್ಗದರ್ಶನ ನೀಡಿದರು. ನಂತರ 93-94 ನೇ ಸಾಲಿಗೆ ಕೆಳಕಂಡ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಚುನಾಯಿಸಲಾಯಿತು.

ಕೆ.ಎಸ್. ಸುಬ್ರಹ್ಮಣ್ಯ ಅಧ್ಯಕ್ಷರು, ಎನ್.ನಾಗರಾಜ್ ಉಪಾಧ್ಯಕ್ಷರು, ಬಿ.ವಿ. ಕೃಷ್ಣಮೂರ್ತಿ- ಪ್ರಧಾನ ಕಾರ್ಯದರ್ಶಿ, ಮಾರ್ತಾಂಡಪ್ಪ ಸಂಘಟನಾ ಕಾರ್ಯದರ್ಶಿ, ಎಲ್. ಎಸ್. ಫಿಲೋಪ್, ಎಸ್. ಮೋಹನ್, ಎನ್.ಕೆ. ನಾರಾಯಣ ಸ್ವಾಮಿ, ಸುಧಾಕರ್, ತಿಮ್ಮರಾಜು ಕಾರ್ಯದರ್ಶಿಗಳಾಗಿ, ಗೋಪಿನಾಥ ಪೈ ಖಜಾಂಚಿಗಳಾಗಿ ಆಯ್ಕೆಗೊಂಡರು.

ಡಿ.ವೈ.ಎಫ್.ಐ ಘಟಕ ರಚನೆ

ಕೊಳ್ಳೆಗಾಲ ತಾಲೂಕು ಹನೂರು ಕ್ಷೇತ್ರದಲ್ಲಿ ಇತ್ತೀಚೆಗೆ ತಾಲೂಕು ಡಿ.ವೈ. ಎಫ್.ಐ ಸಂಚಾಲಕ ಶಿವಾಜಿನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹನೂರು ಡಿ.ವೈ. ಎಫ.ಐ ಘಟಕವನ್ನು ರಚಿಸಲಾಯಿತು.

ಸ್ಥಳೀಯ ಸಮಸ್ಯೆಗಳನ್ನು ತಕ್ಷಣವೇ ಈಡೇರಿಸಲು ಕ್ರಮಕೈಗೊಳ್ಳಲು ತಾಲೂಕು ತಹಸೀಲ್ದಾರರಿಗೆ ಮನವಿಯನ್ನು ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಹನೂರು ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಪಳನಿನಾಯ್ಡು, ಉಪಾಧ್ಯಕ್ಷರಾಗಿ ಎಂ.ಬಾಲು, ರಂಗಸ್ವಾಮಿ, ಕಾರ್ಯದರ್ಶಿಯಾಗಿ ಶಿವಣ್ಣ, ಉಪಕಾರ್ಯದರ್ಶಿಯಾಗಿ, ಎಂ. ರವಿ, ಬಿ. ಬಸವರಾಜು, ಖಜಾಂಚಿಯಾಗಿ ಶಂಕರ್ ಆಯ್ಕೆಯಾಗಿದ್ದಾರೆ.

ಪುರಸಭೆಯ ದೌರ್ಜನ್ಯ ಬಡಜನರು ಬೀದಿಪಾಲು

ಗಂಗಾವತಿ: ಸುಮಾರು 3 ವರ್ಷಗಳಿದ ಬಡಜನರಿಗೆ ಅವಶ್ಯವಾದ ನಿವೇಶನ ಕೊಡಿಸಲು ಇಲ್ಲಿನ ಡಿ.ವೈ.ಎಫ್.ಐ ತಾಲೂಕು ಸಮಿತಿ ಅವಿರತ ಹೋರಾಟ ನಡೆಸುತ್ತಲೇ ಬಂದಿದೆ. ಇಲ್ಲಿನ ಪುರಸಭೆಯ ಸದಸ್ಯರು ತಮಗೆ ಬೇಕಾದವರಿಗೆ ಮಾತ್ರ ಸರಕಾರೀ ಜಮೀನನ್ನು ನೀಡುವುದು ಪರಿಪಾಠ. ಬಡಜನರಿಗೆ ನಿವೇಶನ ಕೊಡಲು ಕೇಳಿದರೆ ಪುರಸಭೆ ಜಾಗ ಯಾವುದೂ ಇಲ್ಲವೆಂದು ಹೇಳಿ ತಮ್ಮ ತಮ್ಮ ಸಂಬಂಧೀಕರಿಗೆ ಆ ನಿವೇಶನಗಳನ್ನು ಕೊಡಿಸುತ್ತಿದ್ದಾರೆ. ಇದನ್ನು ಅರಿತ ಡಿ.ವೈ. ಎಫ್.ಐ ಸಂಘಟನೆ ನಗರದಲ್ಲಿ ಪುರಸಭೆಯ ಸ್ಥಳವನ್ನು ಯಾವ ಯಾವ ಶ್ರೀಮಂತರು, ಪುರಸಭೆ ಸದಸ್ಯರು ಒತ್ತುವರಿ ಮಾಡಿಕೊಂಡಿದ್ದಾರೆ ಎನ್ನುವುದನ್ನು ಹಾಗೂ ಖಾಲಿ ಇರುವ ಜಾಗಗಳನ್ನು ದಾಖಲೆಗಳ ಸಮೇತ ಹುಡುಕಿ, ಖಾಲಿ ಇರುವ ಜಾಗದಲ್ಲಿ ದಿನಾಂಕ 1.10.1993 ರಂದು ಹೆಚ್.ಆರ್.ಎಸ್. ಕಾಲೋನಿಯಲ್ಲಿರುವ ಸ್ಥಳದಲ್ಲಿ 50 ಕೂಲಿಕಾರರ ಕುಟುಂಬಗಳಿಗೆ ಗುಡಿಸಲು ಹಾಕಲು ಆದೇಶ ನೀಡಿತು. ಕೂಲಿಕಾರ ಕುಟುಂಬಗಳು ತಮ್ಮ ಸಾಮಾನುಗಳನ್ನು ಒತ್ತೆ ಇಟ್ಟು, ಮಾರಾಟ ಮಾಡಿ, ಸಾಲ ಮಾಡಿ ಹಣ ಸಂಗ್ರಹಿಸಿ ಗುಡಿಸಲುಗಳಿಗೆ ಬೇಕಾದ ಸಾಮಾನುಗಳನ್ನು ಸಂಗ್ರಹಿಸಿ ಗುಡಿಸಲುಗಳನ್ನು ಹಾಕಿಕೊಂಡದ್ದು ಪುರಸಭೆಯ ಆಡಳಿತಕ್ಕೆ ನುಂಗಲಾರದ ತತ್ತಾಗಿ ಪರಿಣಮಿಸಿತು. ಇದು ಪುರಸಭೆಗೆ ಪ್ರತಿಷ್ಠೆಯ ಪ್ರಶ್ನೆಯಾಯಿತು. ಸಂಘಟನೆಯನ್ನು ಮುರಿಯಲು ಇದೊಂದು ಅವಕಾಶ ಸಿಕ್ಕಂತಾಗಿ ದಿನಾಂಕ 5.10.1993 ರಂದು ಬೆಳಿಗ್ಗೆ ಡಿ.ವೈ.ಎಫ್.ಐ ಸದಸ್ಯರ ಮೇಲೆ ಹಲ್ಲೆ ಮಾಡಿ ಬಂಧಿಸಿದರು. ಮಹಿಳಾ ಪೋಲೀಸರಿಲ್ಲದೆನೇ ಮಹಿಳಾ ಸದಸ್ಯರನ್ನು ನೂಕಾಡಿ ಅವರ ಬಳೆಗಳನ್ನು ಒಡೆಯುವ ರೀತಿಯಲ್ಲಿ ತಮ್ಮ ಅಮಾನವೀಯತೆಯನ್ನು ಪ್ರದರ್ಶಿಸಿದರು. ಹಾಕಿಕೊಂಡಿದ್ದ ಗುಡಿಸಲುಗಳ ಒಳಗೆ ನುಗ್ಗಿ ಮಲಗಿ ನಿದ್ರಿಸುತ್ತಿದ್ದ ಹಸುಗೂಸುಗಳನ್ನು ಹೊರಹಾಕಿ ತಮ್ಮ ಅಮಾನವೀಯತೆಗೆ ಇನ್ನೊಂದು ಉದಾಹರಣೆ ನೀಡಿದರು. ಇಲ್ಲಿದರ ನೇತೃತ್ವವನ್ನು ಪೋಲೀಸ್ ಇನ್ಸ್‌ಪೆಕ್ಟರ್ ಎಂ.ಪಿ. ನಾಯ್ಕ ವಿಜಯ ಡಂಬಳ (ಪಿ.ಎಸ್.ಐ) ಹಾಗೂ ಪುರಸಭೆಯ ಮುಖ್ಯಾಧಿಕಾರಿ ಪರಮೇಶ್ವರಪ್ಪವಹಿಸಿ ಅಲ್ಲಿದ್ದ 50 ಗುಡಿಸಲುಗಳನ್ನು ಕಿತ್ತು ಲಾರಿಯಲ್ಲಿ ಹಾಕಿಕೊಂಡು ಹೋದರು.

ಈ ಕೃತ್ಯವನ್ನು ಯಾವೊಬ್ಬ ಪುರಸಭಾ ಸದಸ್ಯನೂ ಖಂಡಿಸದೇ ಇರುವುದನ್ನು ಡಿ. ವೈ.ಎಫ್.ಐ ಬಲವಾಗಿ ಪ್ರತಿಭಟಿಸುತ್ತದೆ. ಇಲ್ಲಿನ ಪುರಸಭಾ ಸದಸ್ಯರಾದ ಸಲಿನಾ ನಿತ್ಯಾನಂದ ಎಂಬುವವರು ತಮ್ಮ ಮನೆಯ ಮುಂದಿನ ಚರಂಡಿಯನ್ನು ಎತ್ತಿ ಹಾಕಿ ಸುಮಾರು 25 ಫ್ಲಾಟುಗಳ ಸ್ಥಳವನ್ನು ಅತಿಕ್ರಮಣ ಮಾಡಿದ್ದರ ಬಗ್ಗೆಯಾಗಲೀ, ಡಾ. ಪುಂಜಾ ಪುರಸಭೆಯ 3000 ಚ.ಮೀ. ಸ್ಥಳವನ್ನು ಒತ್ತುವರಿ ಮಾಡಿದ್ದರ ಬಗ್ಗೆಯಾಗಲೀ, ಪುರಸಭಾ ಸದಸ್ಯರು ತಮ್ಮ ಚೇಲಾಗಳಿಗೆ ಅನಧಿಕೃತವಾಗಿ ವಿತರಿಸಿದ ಬಗ್ಗೆಯಾಗಲೀ ಕ್ರಮ ಕೈಗೊಳ್ಳದ ಪುರಸಭೆಯ ಆಡಳಿತ ಬಡಜನರ ಗುಡಿಸಲುಗಳಿಗೆ ಕೈ ಹಾಕಿದ್ದನ್ನು ಡಿ.ವೈ.ಎಫ್.ಐ ಬಲವಾಗಿ ಖಂಡಿಸುತ್ತದೆ. ಈ ಕೃತ್ಯವನ್ನು ಪ್ರೋತ್ಸಾಹಿಸಿದ ಶಾಸಕ ಮಲ್ಲಿಕಾರ್ಜುನ್ ಹಾಗೂ ಸಚಿವ ಶ್ರೀ ರಂಗ ದೇವರಾಯಲುರವರು ತಕ್ಷಣವೇ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದೆ.

ಹಾನಿಗೊಳಗಾದ 50 ಕುಟುಂಬಗಳಿಗೆ ಪರಿಹಾರ, ಹಾಗೂ ನಿವೇಶನ ಕೊಡಲು, ಗೂಂಡಾ ಆಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಪಿ. ನಾಯ್ಕನನ್ನು ವಜಾಗೊಳಿಸಲು, ಪುರಸಭೆಯ ಆಡಳಿತವನ್ನು ವಿಸರ್ಜಿಸಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸಿದೆ. ಹಾಗೂ ಈ ಬೇಡಿಕೆಗಳು ಈಡೇರುವ ತನಕ ಉಗ್ರ ಹೋರಾಟ ನಡೆಸಲಾಗು ಡಿ.ವೈ.ಎಫ್.ಐ ಗಂಗಾವತಿ ತಾ ಪತ್ರಿಕಾ ಹೇಳಿಕೆ ತಿಳಿಸಿದೆ.

ಎಸ್.ಎಫ್.ಐ ಖಂಡನೆ : ಎಫ್.ಐ ಸದಸ್ಯರ ಬಂಧನ ಹಾ ವಾಗಿ ಬಡವರನ್ನು ಗುಡಿಸಲಿನಿಂದ ಹಾಕಿ ಅವರನ್ನು ಬೀದಿಪಾಲು ಮಾ ದನ್ನು ಎಸ್.ಎಫ್.ಐ ರಾಯಚೂರು ಸಮಿತಿ ತೀವ್ರವಾಗಿ ಖಂಡಿಸಿದೆ.

ಬಡವರಿಗೆ ಆದ ಈ ಸರಿಪಡಿಸದಿದ್ದರೆ ಜಿಲ್ಲಾದ್ಯಂತ ದಿನದ ಸಾಂಕೇತಿಕ (ಪ್ರತಿಭಟನೆ ವಣಿಗೆ ನಡೆಸಲಾಗುವುದೆಂದು ಜಿ ಚಂದ್ರಪ್ಪ ಹೊಸ್ಕೇರಾ ತಿಳಿಸಿದರು.

ಭೂಕಂಪ ದುರಂತದ ಮಡಿದವರಿಗೆ ಶ್ರದ್ಧಾಂಜ

ಶಹಾಪುರ(ಗುಲ್ಬರ್ಗಾ): ಸಿಪಿ ಶಹಾಪೂರ ಘಟಕವು ತುತು ಸೇರಿ ಭೂಕಂಪದಿಂದ ನಿಧನ ಹೆ ಸುಮಾರು 30,000 ಕ್ಕೂ ಹೆಚ್ಚು ತನ್ನ ಶ್ರದ್ಧಾಂಜಲಿ ಅರ್ಪಿಸಿತು. ಹಾ ಎಂ.ಎಸ್.ಕೆ. ಮಿಲ್‌ನ ಕಾರ್ಮಿಕ ಡರೂ ಹಾಗೂ ಸಿಪಿಐ(ಎಂ) ಜಿಲ್ಲಾ ಸದಸ್ಯರಾದ ಕಾ. ತಿಮ್ಮಣ್ಣ ದೊ ಯವರ ಅಕಾಲಿಕ ಮರಣಕ್ಕೆ ದು ಪಡಿಸಿ ಒಂದು ನಿಮಿಷದ ಮೌನ ಮೂಲಕ ಶ್ರದ್ಧಾಂಜಲಿ ಅರ್ಪಿಸ

ಈಗಾಗಲೇ ಪಾದಯಾತ್ರೆಯ ಧನಧಾನ್ಯ ಬಟ್ಟೆ, ಆಹಾರ, ಔಷ ಸಂಗ್ರಹಿಸುತ್ತಿರುವ ಸಿಪಿಐ(ಎಂ)ನ ಕರ್ತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ನೆರ ಬೇಕೆಂದು ಶಹಾಪುರ ಘಟಕದ ದರ್ಶಿ ಅಂಬ್ಲಪ್ಪ ದೇವಿನ ಕಟ್ಟೆ ಜನ ಮೂಲಕ ವಿನಂತಿ ಮಾಡಿದ್ದಾರೆ.

ಪಾಕಿಸ್ತಾನದಲ್ಲಿ ಬೆನಜಿರ್ ನಾಯಕತ್ವದ ಸರಕಾರ ಸಂಭವ

ಪಾಕಿಸ್ತಾನದಲ್ಲಿ ನಡೆದ ರಾಷ್ಟ್ರೀಯ ...ಸೆಂಬ್ಲಿ ಚುನಾವಣೆಗಳಲ್ಲಿ ಯಾವ ಪಕ್ಷಕ್ಕೂ ...ಹುಮತ ದೊರೆತಿಲ್ಲ. ಆದರೆ ಬೆನ...ರ್ ಭುಟ್ಟೋ ನಾಯಕತ್ವದ ಪಾಕಿ...ನ ಪೀಪಲ್ಸ್ ಪಾರ್ಟಿ (ಪಿಪಿಪಿ) ...ತಿ ದೊಡ್ಡ ಪಕ್ಷವಾಗಿ ಹೊಮ್ಮಿದೆ. ...ವಾಜ್ ಶರೀಫ್ ನಾಯಕತ್ವದ ಪಾಕಿಸ್ತಾ...ದ ಮುಸ್ಲೀಂ ಲೀಗ್ (ಪಿ.ಎಮ್.ಎಲ್) ...ರಡನೇ ದೊಡ್ಡ ಪಕ್ಷವಾಗಿ ಹೊಮ್ಮಿದೆ. ... ಎರಡು ಪಕ್ಷಗಳ ನಡುವೆ ಅಧಿಕಾರ...ಕ್ಕಾಗಿ ತೀವ್ರ ಹಣಾ ಹಣಿ ಇತ್ತು. ಎರಡು ಪಕ್ಷ...ಳೂ ಸಮ್ಮಿಶ್ರ ಸರಕಾರ ರಚಿಸಲು ಇತರ ...ಣ್ಣ ಪಕ್ಷಗಳು ಹಾಗೂ ಸ್ವತಂತ್ರ ಸದಸ್ಯ...ರೊಡನೆ ಮಾತುಕತೆ ಆರಂಭಿಸಿದ್ದು, ಅಧ್ಯ...ರಿಗೆ ತಮಗೆ ಬಹುಮತ ಸಾಧ್ಯವಿದೆಯಾ...ದರಿಂದ ಸರಕಾರ ರಚಿಸಲು ಆಹ್ವಾನ ನೀಡ...ಬೇಕೆಂದು ಒತ್ತಾಯಿಸಿವೆ. ಐದು ವರ್ಷ...ಗಳಲ್ಲಿ ನಡೆದ ಮೂರನೇ ಚುನಾವಣೆ...ಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದ್ದ...ರಿಂದ ಪಾಕಿಸ್ತಾನದ ರಾಜಕೀಯ ಅನಿಶ್ಚಿತತೆ ಮುಂದುವರೆಯುವ ಸಂಭವವಿದೆ.

217 ಸದಸ್ಯರ ರಾಷ್ಟ್ರೀಯ ಅಸೆಂಬ್ಲಿ...ಯಲ್ಲಿ ಭುಟ್ಟೋ ನಾಯಕತ್ವದ ಪಿ.ಪಿ.ಪಿ. ...6 ಸೀಟುಗಳಿಸಿದೆ. ನವಾಜ್ ಶರೀಫ್ ನಾಯಕತ್ವದ ಪಿ.ಎಂ.ಎಲ್‌ಗೆ 72 ಸೀಟು...ಗಳಿಸಿ... ಉಳಿದ ಸೀಟುಗಳು 13 ಜನ ...ಪಕ್ಷೇತರರಿಗೂ, ಇತರ ಚಿಕ್ಕ ಪಕ್ಷಗಳಿಗೂ ...ಲಭಿಸಿದ್ದೆ. ಈಗಾಗಲೇ ನೂರಒಂದು ಸದ...ಸ್ಯರ ಬೆಂಬಲ ತಮಗಿದೆ ಎಂದು ಭುಟ್ಟೋ ...ಹೇಳಿದ್ದಾರೆ. ಪಿ.ಎಂ.ಎಲ್. (ಜೆ.) ...ಪಖ್ತೂನ್‌ಖ್ವಾ ಕಾಮಿ ಪಾರ್ಟಿ ಇವು ಪಿಪಿ...ಪಿಯ ಜತೆ ಚುನಾವಣಾ ಹೊಂದಾಣಿಕೆ ಹೊಂದಿದ್ದು. ಪಿಪಿಪಿ ಜತೆ ಸಮ್ಮಿಶ್ರ ಸರಕಾ...ರಕ್ಕೆ ತಯಾರಿವೆ. ಹತ್ತು ಹಿಂದೂ ಹಾಗೂ ...ಕ್ರಿಶ್ಚಿಯನ್ ಅಲ್ಪಸಂಖ್ಯಾತರಿಗೆ ಮೀಸಲಿಟ್ಟ ಸೀಟುಗಳ ಫಲಿತಾಂಶ ಇನ್ನೂ ಬರಬೇ...ಕಷ್ಟೆ. ಇದರಲ್ಲಿ ಹೆಚ್ಚಿನವರು ಪಿಪಿಪಿಗೆ ಬೆಂಬಲ ಕೊಡಬಹುದು ಎನ್ನಲಾಗಿದೆ. ...ಫಲಿತಾಂಶದ ಅನಿಶ್ಚಿತತೆಯಿಂದಾಗಿ ಹಲ...ವಾರು ಸದಸ್ಯರು ಆಮಿಷಗಳಿಂದ ಪಕ್ಷಬದ...ಲಾಯಿಸಬಹುದು ಎಂದು ನಿರೀಕ್ಷೆಯಿಂದ ...ತಾತ್ಕಾ... ಸರ್ಕಾರ 4 ತಿಂಗಳವರೆಗೆ ಈ ...ಬಗ್ಗೆ ನಿಷೇಧ ಹೊರಿಸಿ ಆಜ್ಞೆ ಹೊರಡಿಸಿದೆ. ...ಪಕ್ಷ ಬದಲಾಯಿಸಿದರೆ ಸದಸ್ಯರು ತಮ್ಮ ...ಸೀಟುಗಳನ್ನು ಕಳೆದುಕೊಳ್ಳುತ್ತಾರೆ.

ಆ ಮೇಲೆ ನಡೆದ ರಾಜ್ಯಗಳ ಚುನಾ...ವಣೆಯಲ್ಲೂ ಸ್ಪಷ್ಟ ಫಲಿತಾಂಶ ಬಂದಿಲ್ಲ. ...ಸಿಂಧ್ ಪ್ರಾಂತ್ಯ ಬಿಟ್ಟರೆ ಬೇರೆ ಎಲ್ಲಾ ಪ್ರಾಂತ್ಯ...ಗಳಲ್ಲೂ ಒಂದು ಪಕ್ಷಕ್ಕೆ ನಿಚ್ಚಳ ಬಹುಮತ ಬಂದಿಲ್ಲ. ಸಿಂಧ್ ಪ್ರಾಂತ್ಯದಲ್ಲಿ ಪಿಪಿಪಿಗೆ ಸ್ಪಷ್ಟ ಬಹುಮತಬಂದಿದೆ. ರಾಜಕೀಯವಾಗಿ ಮುಖ್ಯ ಹಾಗೂ ದೊಡ್ಡ ರಾಜ್ಯವಾದ ಪಂಜಾಬ್‌ನಲ್ಲಿ ಪಿ.ಎಮ್.ಎಲ್. ದೊಡ್ಡ ಪಕ್ಷವಾಗಿ ಹೊಮ್ಮಿದೆ. ಆದರೆ ಸ್ಪಷ್ಟ ಬಹುಮತಗಳಿಸಿಲ್ಲ. ರಾಷ್ಟ್ರೀಯ ಅಸೆಂಬ್ಲಿ ಹಾಗೂ ರಾಜ್ಯದ ಚುನಾವಣೆಗಳೆರಡರಲ್ಲೂ ಮತದಾನದ ಶೇಕಡವಾರು ಬಹಳ ಕಡಿಮೆ ಇತ್ತು. ಶೇಕಡಾ ನಲವತ್ತರಿಂದ ನಲವತ್ತೈದರಷ್ಟು ಮಾತ್ರ ಮತದಾನವಾಗಿದೆ. ರಾಜಕೀಯ ಅನಿಶ್ಚಿತತೆಗೆ ಇದೂ ಒದು ಕಾರಣವಾಗಿಟ್ಟು. ಅಧ್ಯಕ್ಷ ಹಾಗೂ ಸೈನ್ಯದ ಪಾತ್ರ ಏನಿರುತ್ತದೆ ಎಂದು ನೋಡಬೇಕಾಗಿದೆ.

ದಕ್ಷಿಣ ಆಫ್ರಿಕಾ -ಕರಿಯರಿಗೆ ಸ್ವಯಂಮಾಡಳಿತದತ್ತ

ವರ್ಣಭೇದದ ತವರಾಗಿದ್ದ ದಕ್ಷಿಣ ಆಫ್ರಿಕಾದಲ್ಲಿ ಮೊದಲ ಬಾರಿಗೆ ಕರಿಯರಿಗೆ ಆಡಳಿತದಲ್ಲಿ ಪಾಲಿನ ಹಕ್ಕು ಲಭಿಸಿದೆ. ಇತ್ತೀಚೆಗೆ ಸರ್ಕಾರ ಒಪ್ಪಿ ಪಾರ್ಲಿಮೆಂಟಿನಲ್ಲಿ ಮಂಜೂರಾದ ಮಧ್ಯಂತರ ಕಾರ್ಯಕಾರಿ ಮಂಡಳಿ (Transitional Executive Council- TEC) ಯನ್ನು ರಚಿಸಲಾಗಿದೆ. ಈ ಮಂಡಳಿ ವರ್ಣಭೇದ-ರಹಿತ, ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾ ರಚಿಸುವ ಮಧ್ಯಂತರ ಅವಧಿಯಲ್ಲಿ ದೇಶದ ಆಡಳಿತ ನಿರ್ವಹಿಸುವುದು. ಪ್ರಸಕ್ತ ಸರಕಾರ ಮುಂದುವರೆಯುವುದು. ಆದರೆ ಟಿ.ಇ.ಸಿ. ಎಲ್ಲಾ ಪ್ರಮುಖ ಆಡಳಿತದ ವಿಚಾರದಲ್ಲಿ ನಿರ್ದೇಶನ ಕೊಡುವುದು. ಪೋಲೀಸ್ ಹಾಗೂ ಭದ್ರತಾ ಪಡೆಗಳಿಗೆ ನೇರ ದೈನಂದಿನ ನಿಯಂತ್ರಣ ಟಿ.ಇ.ಸಿ.ಗೆ ಬಂದಿದ್ದರೂ, ಅವುಗಳಿಗೆ ನಿರ್ದೇಶನ ಕೊಡುವುದು ಸರ್ಕಾರಕ್ಕೆ ತುರ್ತು ಪರಿಸ್ಥಿತಿ ಘೋಷಿಸುವ ಅಧಿಕಾರ ಇದ್ದರೂ, ಟಿ. ಇ.ಸಿ.ಯ ಶೇಕಡಾ 80 ಸದಸ್ಯರು ಇದಕ್ಕೆ ವಿರೋಧ ವ್ಯಕ್ತಪಡಿಸಿದರೆ, ಸರ್ಕಾರ ಅದಕ್ಕೆ ಬದ್ಧವಾಗಿರಬೇಕಾಗುತ್ತದೆ.

ಟಿ.ಇ.ಸಿ. ಸಂವಿಧಾನದ ಬಗ್ಗೆ ನಡೆಯುತ್ತಿರುವ ಮಾತುಕತೆಗಳಲ್ಲಿ ಭಾಗವಹಿಸುತ್ತಿರುವ ದಕ್ಷಿಣ ಆಫ್ರಿಕಾದ 20 ಪಕ್ಷಗಳಿಗೂ ಹಾಗೂ ಚಳುವಳಿಗಳಿಂದ ತಲಾ ಒಂದು ಸದಸ್ಯರನ್ನು ಹೊಂದಿರುತ್ತದೆ. ಇದರಲ್ಲಿ ಪ್ರಮುಖವಾದದ್ದು. ಆಳುವ ನ್ಯಾಶನಲ್ ಪಾರ್ಟಿ ಹಾಗೂ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್(ಎ.ಎನ್.ಸಿ.). ಬಿಳಿಯರ ಬಲಪಂಥೀಯ ಪಕ್ಷ ಕನ್ಸರ್ವೇಟಿವ್ ಪಾರ್ಟಿ ಹಾಗೂ ಕರಿಯರ ಇಂಕಾತಾ ಪಕ್ಷ ಟಿ.ಸಿ.ಸಿ. ಯನ್ನು ಬಹಿಷ್ಕರಿಸಿದೆ.

ಟಿ.ಇ.ಸಿ.ಯ ಮುಖ್ಯ ಕೆಲಸ 1994 ರ ಏಪ್ರಿಲ್ 27 ರ ಚುನಾವಣೆಯನ್ನು ನಿಷ್ಪಕ್ಷಪಾತ ರೀತಿಯಲ್ಲಿ ನಡೆಸುವುದು ಈ ಬಗ್ಗೆ ಈಗ ಖಚಿತವಾಗಿರುವುದರಿಂದ ಎ.ಎನ್.ಸಿ. ಹಿಂದೆ ದಕ್ಷಿಣ ಆಫ್ರಿಕಾದ ಮೇಲೆ ಹೊರಿಸಿದ್ದ ಆರ್ಥಿಕ, ರಾಜಕೀಯ ದಿಗ್ಬಂಧನ ಕೊನೆಗೊಳಿಸಬೇಕೆಂದು ಮನವಿ ಮಾಡಿದೆ. ಈ ಮನವಿ ಮೇರೆಗೆ ವಿಶ್ವಸಂಸ್ಥೆ ಮಹಾಸಭೆ ಎಲ್ಲಾ ದೇಶಗಳಿಗೂ ಆರ್ಥಿಕ, ರಾಜಕೀಯ ದಿಗ್ಬಂಧನ ವಿಧಿಸುವ ಶಾಸನಗಳನ್ನು ರದ್ದುಮಾಡಬೇಕೆಂದು ಕರೆ ನೀಡಿದೆ.

ಆದರೂ ಕರಿಯರ ಸ್ವಯಂ ಮಾಡಳಿತ ಹಾಗೂ ವರ್ಣಭೇದ ತೊಡೆದು ಹಾಕಿದ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾ ಸ್ಥಾಪಿಸುವಲ್ಲಿ ಇನ್ನೂ ಹಲವಾರು ತೊಡಕುಗಳೂ, ಆತಂಕಕಾರಿ ಸ್ಥಿತಿ ಇದೆ. ಮೊದಲನೆಯದಾಗಿ ಬಿಳಿಯ ಹಾಗೂ ಕರಿಯ ತೀವ್ರಗಾಮಿಗಳ ಭಾಗವಹಿಸುವಿಕೆಯಿಂದ ಕರಿಯರ ಕೊಲೆ ಅದರಲ್ಲೂ 1990 ರಲ್ಲಿ ನೆಲ್ಸನ್ ಮಂಡೇಲಾ ಬಿಡುಗಡೆಯಾದಂದಿನಿಂದ 10 ಸಾವಿರ ಜನ ಈ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ಇದರಲ್ಲಿ ಪೋಲೀಸ್, ಭದ್ರತಾ ಪಡೆಗಳ ಹಿಂಸಾಚಾರಕ್ಕೆ ಬಲಿಯಾದವರೇ ಹೆಚ್ಚು. ಇಂಕಾತಾ, ಬಿಳಿಯ ಫ್ಯಾಸಿಸ್ಟವಾದಿಗಳು ಸರ್ಕಾರಿ ಕುಮ್ಮಕ್ಕಿನಿಂದ ಎ.ಎನ್.ಸಿ. ಸದಸ್ಯರ ವ್ಯವಸ್ಥಿತ ನರಮೇಧ ನಡೆಸುತ್ತಿರುವುದು ಈಗ ಬಹಿರಂಗ ಗುಟ್ಟು, ಈ ಜುಲೈ ಆಗಸ್ಟ್ ಎರಡಡೇ ತಿಂಗಳಲ್ಲಿ 1150 ಕರಿಯರ ಕೊಲೆ ಆಗಿದೆ. ಇದರಲ್ಲಿ ಹೆಚ್ಚು ಪಾಲು ಎ.ಎನ್.ಸಿ. ಸದಸ್ಯರು. ಟಿ.ಇ.ಸಿ. ಮಂಜೂರಾದ ಮರುದಿನವೇ ಜೊಹಾನ್ಸ್‌ಬರ್ಗ್‌ನಲ್ಲಿ 30 ಜನರ ಕೊಲೆಯಾಯಿತು. ಇಂಕಾತಾ ಹಾಗೂ ಬಿಳಿಯ ತೀವ್ರಗಾಮಿಗಳನ್ನು ನಿಯಂತ್ರಣದಲ್ಲಿಡಲು ಟಿ.ಸಿ.ಸಿ.ಗೆ ಸಾಧ್ಯವಾಗದೆ ಹೋದರೆ ತೀವ್ರ ಆತಂಕಕಾರಿ ಸ್ಥಿತಿ ಉಂಟಾಗಬಹುದು.

ಹಲವಾರು ಬಿಳಿಯ ಕೈಗಾರಿಕೋದ್ಯಮಿಗಳು ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳು ವರ್ಣಭೇದ ತೊಡೆದು ಹಾಕುವ ಸಂದರ್ಭದಲ್ಲಿ ತಮ್ಮ ಹಿತಾಸಕ್ತಿಗೆ ಧಕ್ಕೆ ಬರಬಹುದೆಂಬ ನಿರೀಕ್ಷೆಯಿಂದ, ಈಗಾಗಲೇ ತಮ್ಮ ಬಂಡವಾಳವನ್ನು ದೇಶದಿಂದ ಹೊರಸಾಗಿಸುತ್ತಿದ್ದಾರೆ. ಆದ್ದರಿಂದ ಈಗಾಗಲೇ ಬಿಕ್ಕಟ್ಟಿನಲ್ಲಿರುವ ದಕ್ಷಿಣಾ ಆಫ್ರಿಕಾದ ಆರ್ಥಿಕ ಇನ್ನಷ್ಟು ಹದಗೆಡಬಹುದು. ಈ ಸಮಸ್ಯೆ ಬಗೆಹರಿಸಲು ಐ.ಎಂ. ಎಫ್.-ವಿಶ್ವಬ್ಯಾಂಕ್ ನೆರವು ಅಗತ್ಯವಾಗಬಹುದು. ಫಂಡ್-ಬ್ಯಾಂಕ್ ಹೊರಿಸುವ ನೀತಿಗಳನ್ನು ನಿಭಾಯಿಸುವುದು ಎ.ಎನ್.ಸಿ.ಗೆ ಇನ್ನೊಂದು ದೊಡ್ಡ ಸವಾಲಾಗಬಹುದು.

ಆದರೂ ಟಿ.ಇ.ಸಿ.ಯು ರಚನೆ ವರ್ಣಭೇಧ ತೊಡೆದು ಹಾಕುವತ್ತ ದೊಡ್ಡ ಚಾರಿತ್ರಿಕ ಹೆಜ್ಜೆ. ರಾಜಕೀಯ ಆರ್ಥಿಕ ತೊಡಕುಗಳಿದ್ದರೂ, ಇದಕ್ಕಿಂತಲೂ ಕಷ್ಟಕರ ಸ್ಥಿತಿಎದುರಿಸಿ ಬಲಶಾಲಿಯಾಗಿರುವ ಎ.ಎನ್.ಸಿ. ಇದನ್ನು ಸಮರ್ಥವಾಗಿ ನಿಭಾಯಿಸುವುದೆಂಬ ದೃಢ ವಿಶ್ವಾಸವೂ ಇದೆ.



ಚೀನಾದ ಅಣ್ವಸ್ತ್ರ ಪರೀಕ್ಷಣೆ

ಚೀನಾ ಇತ್ತೀಚೆಗೆ ಹೊಸ ಭೂಗತ ಅಣ್ವಸ್ತ್ರ ಪರೀಕ್ಷೆ ನಡೆಸಿತು. ಈ ಬಗ್ಗೆ ಅಮೇರಿಕಾದ ನಾಯಕತ್ವದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಅನಗತ್ಯ ಗದ್ದಲ ನಡೆಸುತ್ತಿವೆ. ಕಳೆದ ಒಂದು ವರ್ಷದಲ್ಲಿ ಜಾರಿಯಲ್ಲಿರುವ ಅಣ್ವಸ್ತ್ರ ಪರೀಕ್ಷಣೆ ನಿಷೇಧ ಇದರಿಂದ ಕೊನೆಗಂಡಾತಾಗಿದೆ ಎಂದು ಅವರ ಟೀಕೆ. ಆದರೆ ಈ ಅಣ್ವಸ್ತ್ರ ಪರೀಕ್ಷಣಾ ನಿಷೇಧ ಸ್ವಯಂಸ್ಫೂರ್ತವಾಗಿತ್ತು. ಇದನ್ನು ಚೀನಾ ಒಪ್ಪಿಯೂ ಇರಲಿಲ್ಲ, ತಿರಸ್ಕರಿಸಿಯೂ ಇರಲಿಲ್ಲ. ಇತರ ಅಣ್ವಸ್ತ್ರ ಹೊಂದಿರುವ ದೇಶಗಳಂತೆ, ಚೀನಾ ಅಣ್ವಸ್ತ್ರ ಪ್ರಸರಣ ಮುಖ್ಯ ವಿಚಾರವೆಂದು ಪರಿಗಣಿಸುವುದಿಲ್ಲ. 1996 ರ ಹೊತ್ತಿಗೆ ಅಣ್ವಸ್ತ್ರ ಪರೀಕ್ಷಣೆಗಳ ಮೇಲೆ ಪೂರ್ಣ ನಿರ್ಬಂಧ, ಹಾಗೂ ಅಣ್ವಸ್ತ್ರಗಳ ಮೊದಲ ಬಳಕೆ ತ್ಯಜಿಸುವ ಒಪ್ಪಂದದ ಬಗ್ಗೆ ಮಾತುಕತೆ ಹೆಚ್ಚು ಅರ್ಥಪೂರ್ಣ ಎಂದೂ ಚೀನಾ ಹೇಳಿದೆ. ಅಣ್ವಸ್ತ್ರ ಪ್ರಸರಣತಡೆಯುವುದಕ್ಕಿಂತಲೂ ಜಗತ್ತನ್ನು ಅಣ್ವಸ್ತ್ರ-ರಹಿತಗೊಳಿಸುವ ಗುರಿಯತ್ತ ಗಂಭೀರ ಪ್ರಯತ್ನಗಳು ಅವಶ್ಯ ಎಂಬುದು ಚೀನಾದ ನಿಲುವು.

ಇತ್ತೀಚೆಗೆ ಬಿಜೀಂಗ್‌ಗೆ ಒಲಿಂಪಿಕ್ಸ್ 2000 ನಿರಾಕರಿಸಿದ್ದು, ಕ್ಷಿಪಣಿ ಸಂಬಂಧಿತ ತಂತ್ರಜ್ಞಾನಗಳ ಮೇಲೆ ಅಮೇರಿಕನ್ ರಫ್ತು ನಿಷೇಧ, ಇರಾನ್‌ಗೆ ಕಾಲ್ಪನಿಕ ರಾಸಾಯನಿಕ ಅಸ್ತ್ರಗಳ ಚೀನಾದ ರಫ್ತಿನ ಬಗ್ಗೆ ಅಮೇರಿಕಾದ ಉದ್ಧಟತನದ ವಿರುದ್ಧ ಪ್ರತಿಭಟನೆಯಾಗಿ ಚೀನಾ ಉದ್ದೇಶಪೂರ್ವಕವಾಗಿಯೇ ಈ ಭೂಗತ ಪರೀಕ್ಷಣೆ ನಡೆಸಿದೆ ಎಂದು ಸಾಮ್ರಾಜ್ಯಶಾಹಿ ಸುದ್ದಿಮಾಧ್ಯಮಗಳ ವಿವರಣೆ.

ರಶ್ಯನ್ ಸಂವಿಧಾನ, ಕೋರ್ಟು ಹಾಗೂ ಸೋವಿಯೆತ್‌ಗಳ ವಜಾ

ಯೆಲ್ಟ್‌ಸಿನ್ ತನ್ನ ಸರ್ವಾಧಿಕಾರವನ್ನು ಇನ್ನಷ್ಟು ಬಲಪಡಿಸಲು, ರಶ್ಯದ ಇನ್ನಷ್ಟು ಪ್ರಜಾಸತ್ತಾತ್ಮಕ ಸಂಘಟನೆಗಳ ಮೇಲೆ ದಾಳಿ ಮುಂದುವರೆಸಿದ್ದಾರೆ. ಸಂವಿದಾನಾತ್ಮಕ ಕೋರ್ಟನ್ನು ಅವರು ವಜಾ ಮಾಡಿದ್ದಾರೆ. ಈ ಕೋರ್ಟು ಯೆಲ್ಟ್‌ಸಿನ್ನರ ಸೆಪ್ಟೆಂಬರ್ 21ರ ಆಜ್ಞೆಯನ್ನು ಸಂವಿಧಾನ-ಬಾಹಿರ, ಕಾನೂನು ಬಾಹಿರ ಎಂಬ ತೀರ್ಪನ್ನು 9-4 ಬಹುಮತದಿಂದ ನೀಡಿತ್ತು. ಪಾರ್ಲಿಮೆಂಟು ಹಾಗೂ ಅಧ್ಯಕ್ಷರ ಸಂಘರ್ಷದಲ್ಲಿ ಅಧ್ಯಕ್ಷರ ಕಾನೂನು ಬಾಹಿರ ಕಾರ್ಯಗಳನ್ನೆಲ್ಲಾ ರದ್ದುಗೊಳಿಸಿತ್ತು.

ಇದಲ್ಲದೆ 80 ಪ್ರಾಂತ್ಯಗಳ ಸೋವಿಯೆತ್‌ಗಳನ್ನು (ಸ್ಥಳೀಯ ಪಾರ್ಲಿಮೆಂಟು)ಗಳನ್ನು ಅವರು ವಜಾಮಾಡಿದ್ದಾರೆ. ಎಲ್ಲಾ ಹಂತಗಳಲ್ಲಿ ಸೋವಿಯೆತ್‌ಗಳ (ಚುನಾಯಿತ ಪಾರ್ಲಿಮೆಂಟು) ಸ್ಥಾಪನೆಯಿಂದಲೇ ಕ್ರಾಂತಿಗೆ ಹಾಗೂ ದೇಶದ ಹೆಸರಿನ ಭಾಗವಾಗಿತ್ತು. ಅದನ್ನು ಅಧ್ಯಕ್ಷೀಯ ಆಜ್ಞೆಯೊಂದು ಕೊನೆಗೊಳಿಸಿದೆ. ಅಧ್ಯಕ್ಷರು ನೇಮಿಸಿದ ಗವರ್ನರುಗಳು ಈ ಪ್ರಾಂತ್ಯಗಳಲ್ಲಿ ಸರ್ವಾಧಿಕಾರ ಹೊಂದಿರುತ್ತಾರೆ.

ಇದಲ್ಲದೆ ತನ್ನ ರಾಜಕೀಯ ವಿರೋಧಿಗಳ ದಮನ, ಹಿಂಸಾಚಾರ ಮುಂದುವರೆದಿದೆ. ಮಾಸ್ಕೋದಲ್ಲಿ ಒಂದು ವಾರದ ತುರ್ತು ಸ್ಥಿತಿಯನ್ನು ಇನ್ನೊಂದು ವಾರಕ್ಕೆ ಮುಂದುವರೆಸಲಾಗಿದೆ. ರಾತ್ರಿ ಕರ್ಫ್ಯೂ ಸಹ ಮುಂದುವರೆಯುತ್ತಿದೆ.

ಯೂರೋಪಿಯನ್ ಸಮುದಾಯದ ವಸತಿ ಸಮಸ್ಯೆ

ಯೂರೋಪಿಯನ್ ಸಮುದಾ...ಯಕ್ಕೆ ಸೇರಿದ ದೇಶಗಳಲ್ಲಿ 'ನಿರ್ವಸತಿ'ರ ...ಅಧಿಕೃತ ಸಂಖ್ಯೆ 25 ಲಕ್ಷಕ್ಕೂ ಅಧಿಕವಾ...ಗಿದೆಯೆಂದು ಹಲವಾರು ಯೂರೋಪಿ...ಯನ್ ವಸತಿ ಕ್ರಿಯಾ ಗುಂಪುಗಳು ಸಿದ್ಧ...ಪಡಿಸಿದ ವರದಿಯಲ್ಲಿ ತಿಳಿಸಿವೆ.

ನಿರ್ವಸತಿರ ಪ್ರಮಾಣದ ತೀವ್ರ...ತೆಯು ಬ್ರಿಟನ್, ಫ್ರಾನ್ಸ್ ಮತ್ತು ...ಜರ್ಮನಿ ದೇಶಗಳಲ್ಲಿ ಅಧಿಕವಾಗಿದೆ ...ಯೆಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ...'ಗಾರ್ಡಿಯನ್' ಪತ್ರಿಕೆಯಲ್ಲಿ ಪ್ರಕಟವಾದ ...ಸಮೀಕ್ಷೆಯೊಂದರ ವರದಿಯಲ್ಲಿ ಹೇಳಿ...ರುವಂತೆ ಕಳೆದ ಎರಡು ವರ್ಷಗಳ ಅವ...ಧಿಯಲ್ಲಿ ಯುರೋಪಿಯನ್ ಸಮುದಾ...ಯದಲ್ಲಿ ನಿರ್ವಸತಿರೆಂದು ದಾಖಲಾದ ...ಒಟ್ಟು ಪುರುಷರ, ಮಹಿಳೆಯರ ಹಾಗೂ ...ಮಕ್ಕಳ ಸಂಖ್ಯೆ 2,531,800 ರಷ್ಟಾಗಿದೆ. ಜರ್ಮನಿಯಲ್ಲಿ ಸಾವಿರಕ್ಕೆ 12.8 ರಷ್ಟು ನಿರ್ವಸತಿಗರಾದರೆ ಬ್ರಿಟನ್‌ನಲ್ಲಿ ಸಾವಿರಕ್ಕೆ 12.2 ರಷ್ಟು ಹಾಗೂ ಫ್ರಾನ್ಸ್‌ನಲ್ಲಿ ಸಾವಿರಕ್ಕೆ 11.1 ರಷ್ಟು ನಿರ್ವಸತಿಗರ ಸಂಖ್ಯೆಯಿದೆ. ಈ ಸಂಖ್ಯೆಗಳ ಸಮಸ್ಯೆಯ ನಿಜವಾದ ಆಯಾಮಗಳನ್ನು ನಿಚ್ಚಳವಾಗಿ ಕಡಿಮೆ ಅಂದಾಜು ಮಾಡಲಾದವುಗಳಾಗಿವೆ. ಏಕೆಂದರೆ ಈ ಸಮೀಕ್ಷೆಯು ನಿರ್ವಸತಿಗರಿಗೆಂದು ಅಧಿಕೃತ ಅಥವಾ ಸ್ವಯಂಸೇವಾ ಸಂಸ್ಥೆಗಳು ಒದಗಿಸಿದ ಸೌಲಭ್ಯಗಳನ್ನು ಬಳಸುತ್ತಿರುವ ಜನರನ್ನು ಮಾತ್ರ ಒಳಗೊಂಡಿದೆ ಎಂದು ವರದಿಯು ತಿಳಿಸಿದೆ.

"ನಿರ್ವಸತಿಗರ ಜೊತೆ ಕೆಲಸ ಮಾಡುತ್ತಿರುವ ರಾಷ್ಟ್ರೀಯ ಸಂಘಗಳ ಯೂರೋಪಿಯನ್ ಒಕ್ಕೂಟದ" ಅಧ್ಯಕ್ಷರಾದ ಬ್ರಿಯಾನ್ ಹಾರ್ವೆಯ ಪ್ರಕಾರ "ಯುರೋಪಿಯನ್ ನಿರ್ವಸತಿಯ ಸಮಸ್ಯೆಯು ನಾವೆಲ್ಲ ಇದುವರೆಗೂ ಯೋಚಿಸಿದ ಮಟ್ಟಕ್ಕಿಂತ ತುಂಬಾ ಮೇಲ್ಮಟ್ಟದಲ್ಲಿ ಓಡುತ್ತಿದೆ. ಬಹುತೇಕ ಯೂರೋಪಿಯನ್ ಸರ್ಕಾರಗಳ 80'ರ ದಶಕದ ಕಡಿಮೆ ಆದಾಯದವರಿಗೆ ಮತ್ತು ಒಂಟಿ ಮನುಷ್ಯರಿಗೆ ವಸತಿ, ಸಾಮಾಜಿಕ ವಸತಿ ಕಾರ್ಯಕ್ರಮಗಳಿಗೆ ಹಣವನ್ನು ಕಡಿತಗೊಳಿಸುವ ನಿರ್ಧಾರದ ಫಲ ಎಂಬುದನ್ನು ಅಂಕಿ-ಸಂಖ್ಯೆಗಳು ಪ್ರದರ್ಶಿಸುತ್ತವೆ."

ಸಮೀಕ್ಷೆಯ ಪ್ರಕಾರ ಒಟ್ಟು ನಿರ್ವಸತಿಗರ ಸಂಖ್ಯೆಯು ಶೇ. 70 ರಷ್ಟು 40ರ ವಯೋಮಿತಿಯ ಒಳಗಿರುವವರು ಎಂದಿರುವುದರಿಂದ ಯುವಜನರು ಈ ಸಮಸ್ಯೆಯ ಅತ್ಯಂತ ಕ್ರೂರದಾಳಕ್ಕೆ ಸಿಕ್ಕ ವಿಭಾಗವಾಗಿದ್ದಾರೆ. ಯುರೋಪ್‌ನಲ್ಲಿ ನೆಲಸಲು ಬಂದ ನಿರಾಶ್ರಿತರು ಮತ್ತು ವಲಸಿಗರು ನಿರ್ವಸತಿಗರ ಸಂಖ್ಯೆಯಲ್ಲಿ ದೊಡ್ಡ ಭಾಗವಾಗಿದ್ದಾರೆ.

ಯೂರೋಪ್‌ನ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ನಿರ್ವಸತಿ ಮತ್ತು ನಿರುದ್ಯೋಗದಲ್ಲಿ ನಿರಂತರವಾಗಿ ಆಗುತ್ತಿರುವ ಏರಿಕೆಯು, ಆ ದೇಶಗಳು ಅನುಸರಿಸುತ್ತಿರುವ ಉದಾರೀಕರಣದ ನೀತಿಗಳ ಭಾಗವಾಗಿ ಸಾಮಾಜಿಕ ಸೇವೆಗಳಿಗಾಗಿ ಇಟ್ಟಿದ್ದ ಆದ್ಯತೆಯಿಂದ ನಿರಂತರವಾಗಿ ಜಾರಿಕೊಳ್ಳುತ್ತಿರುವುದರ ನೇರ ಪರಿಣಾಮವಾಗಿದೆ. ಬಿಕ್ಕಟ್ಟು ಕೊನೆಗಾಣುವ ಯಾವುದೇ ಸೂಚನೆಗಳು ಕಾಣದಿರುವ ಕಾರಣದಿಂದ ನಿರ್ವಸತಿ ಸಮಸ್ಯೆಯು ಮುಂದಿನ ವರ್ಷಗಳಲ್ಲಿ ಮತ್ತಷ್ಟು ಹೆಚ್ಚುವ ಸಾಧ್ಯತೆಗಳಿವೆ.

ಹಿಟ್ಲರನ ಗತಿಯೇ ಯೆಲ್ಸಿನ್‌ಗೆ

-ಇ.ಎಂ.ಎಸ್.

ಕೊನೆಯಲ್ಲಿ ಯೆಲ್ಸಿನ್‌ಗೆ ಕಮ್ಯುನಿಸಮನ್ನು ಸುಟ್ಟು ಸರ್ವನಾಶ ಮಾಡುತ್ತೇನೆಂದು ಹೇಳುತ್ತಿದ್ದ ಹಿಟ್ಲರನ ಗತಿಯಾಗುತ್ತದೆಂದು ಇ.ಎಂ.ಎಸ್. ನಂಬೂದರಿಪ್ಪಾಡ್ ಹೇಳಿದ್ದಾರೆ. ಮಲ್ಲಪುರಂ ಜಿಲ್ಲೆಯ ಥಿರೋರಿನಲ್ಲಿ ದೊಡ್ಡ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಅವರು ಭಾಷಣ ಮಾಡುತ್ತಿದ್ದರು. ಯೆಲ್ಸಿನ್ ಮಾಸ್ಕೋದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದ್ದಾನೆ, ಪ್ರೆಸ್ ಪ್ರತಿಬಂಧ ಹೇರಿದ್ದಾನೆ, ವಿರೋಧ ಪಕ್ಷಗಳ ಮೇಲೆ ಪ್ರತಿಬಂಧ ಹೇರಿದ್ದಾನೆ, ಪಾರ್ಲಿಮೆಂಟ್ ಮತ್ತು ಕೋರ್ಟನ್ನು ಅವಹೇಳನಮಾಡಿದ್ದಾನೆ. ಅಮೇರಿಕಾದ ಅಧ್ಯಕ್ಷ ಮತ್ತು ಬ್ರಿಟನ್ನಿನ ಪ್ರಧಾನ ಮಂತ್ರಿ ಯೆಲ್ಸಿನ್‌ಗೆ ಬೆಂಬಲ ನೀಡಿದಾಗ ಗೋರ್ಬಚೇವ್ ಕೂಡ ಯೆಲ್ಸಿನ್‌ನನ್ನು ವಿರೋಧಿಸಿದರು ಎಂದು ಇ.ಎಂ.ಎಸ್. ಹೇಳಿದ್ದಾರೆ.

KRNM/BGS-405 MAG(2) PRB DECR 319-78/79

ನಿಷ್ಠಾವಂತ ಕಾರ್ಯಕರ್ತನಾಗಿದ್ದ ಕಾಂ. ತಿಮ್ಮಣ್ಣ



ಇತ್ತೀಚೆಗೆ ನಿಧನ ಹೊಂದಿದ ಕಾಂ. ತಿಮ್ಮಣ್ಣ ದೊಡ್ಡಮನಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿಯು ಸಾರ್ವಜನಿಕ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು. ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದ ಕಾಂ. ತಿಮ್ಮಣ್ಣ ದೊಡ್ಡಮನಿಯವರಿಗೆ ಈ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರೂ ತಮ್ಮ ಸಂಘಟನೆಯ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದರು. ಎಂ.ಎಸ್.ಕೆ. ಮಿಲ್ ಸಂಘವನ್ನು ಬಲಿಷ್ಠಗೊಳಿಸಬೇಕೆಂಬ ಅವರ ಆಸೆಯನ್ನು ಪೂರ್ಣಗೊಳಿಸುವುದೇ ಅವರಿಗೆ ನಾವು ನೀಡುವ ಶ್ರದ್ಧಾಂಜಲಿ ಎಂದು ಕಾರ್ಮಿಕ ಮುಖಂಡ ಎ.ಬಿ. ದಾಸ್ ಹೇಳಿದರು.

ತಿಮ್ಮಣ್ಣನವರ ಅವಿರತ ದುಡಿಮೆ ಪಕ್ಷಕ್ಕೆ ಬಹಳಷ್ಟು ಲಾಭವಾಗಿದೆ. ಆದರೆ ಅವರ ಕುಟುಂಬ ಈಗ ಗಂಭೀರವಾದ ಬಿಕ್ಕಟ್ಟಿನಲ್ಲಿರುವುದರಿಂದ ನಾವು ಸಹಾಯ ಹಸ್ತ ನೀಡಬೇಕೆಂದು ಎಸ್.ಎಫ್.ಐ ಈಶ್ವರಚಂದ್ರ ಮನವಿ ಮಾಡಿದರು.

ಇಂಟಕ್‌ನ ತಳಸಿರಾಮ್ ನಾಯಕರು ಮಾತನಾಡುತ್ತಾ 1956ರಿಂದ ಅವರನ್ನು ಬಲ್ಲೆ, ಅವರ ಪ್ರಾಮಾಣಿಕತೆ ನಿಜಕ್ಕೂ ಮೆಚ್ಚುವಂತದ್ದು ಎಂದರು ಅವರಿಂದ ಅನೇಕ ಪಾಠಗಳನ್ನು ಕಲಿತದ್ದನ್ನು ನೆನಪಿಸಿಕೊಂಡ ಶ್ರೀ ನಾಯಕ್‌ರವರು ಅವರ ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಜನರು ಅವರು ಸಲ್ಲಿಸಿದ ಸೇವೆಯ ಪ್ರತೀಕವೆಂದು ಹೇಳಿದರು.

1973ರಿಂದ ಅವರ ಸಂಪರ್ಕವನ್ನು ನೆನಪಿಸಿಕೊಂಡ ಸಿ.ಎ. ಪಾಟೀಲರು ಮಾತನಾಡಿ ಕಾಂ. ಗಂಗಾಧರ ನವ್ಹೋಳಿಯವರ ನಿಧನದಿಂದ ಎಂ.ಎಸ್.ಕೆ. ಮಿಲ್ ಯೂನಿಯನ್ ಮುಗಿಯಿತು ಎದು ತಿಳಿದ್ದವರಿಗೆ ಕಾಂ. ತಿಮ್ಮಣ್ಣನವರು ಶಾಕ್ ನೀಡಿ ಯೂನಿಯನ್‌ನ್ನು ಬಲಪಡಿಸಲು ಅವರು ಸಲ್ಲಿಸಿದ ಸೇವೆ ಮರೆಯಲಾರದು ಎಂದರು.

ಕಾಂ. ಮಹ್ಮದ್ ಜಲಾಲ್, ಕಾಂ. ಶೇಖ್ ಗುಡು, ಡಿ.ವೈ.ಎಫ್.ಐನ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಹೆಚ್.ವೈ. ಚವ್ಹಾಣ್, ಮೇಘರಾಜ ಕಠಾರೆ, ಎನ್.ಎಫ್.ಪಿ.ಇ. ಯೂನಿಯನ್ ನಾಯಕ ಯಪೂರರವರುಗಳು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಕೊನೆಯಲ್ಲಿ ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿಗಳಿಂದ ಕಾಂ. ಕಲ್ಲಪ್ಪ ಕಿರಣಗಿ ವಂದನಾರ್ಪಣೆ ಮಾಡಿದರು.

ಸಂತಾಪ : ಕಾಂ. ತಿಮ್ಮಣ್ಣ ದೊಡ್ಡಮನಿಯವರ ನಿಧನಕ್ಕೆ ಗುಲ್ಬರ್ಗಾ ಜಿಲ್ಲಾ ಸಮಿತಿಯು ತನ್ನ ಅತೀವ ದುಃಖ ವ್ಯಕ್ತಪಡಿಸಿ ಅವರ ದುಃಖತಪ್ತ ಕುಟುಂಬಕ್ಕೆ ಸಹಾನುಭೂತಿಯನ್ನು ಸಲ್ಲಿಸುತ್ತದೆಂದು ಪ್ರತ್ಯೇಕ ಪತ್ರಿಕಾ ಪ್ರಕಟಣೆಯಲ್ಲಿ ಗುಲ್ಬರ್ಗಾ ಜಿಲ್ಲಾ ಸಮಿತಿಯ ಹೇಳಿಕೆ ತಿಳಿಸಿದೆ.

ಸಿಐಟಿಯು ಸಂಯೋಜಿತ ಸಮಿತಿ ಆರಂಭ

ಹಗರಿ ಬೊಮ್ಮನ ಹಳ್ಳಿ(ಬಳ್ಳಾರಿ): ಇಲ್ಲಿನ ಲಾರಿ ಡ್ರೈವರ್ಸ್ ಮತ್ತು ಕ್ಲೀನರ್ಸ್ ಅಸೋಸಿಯೇಷನ್‌ನ (ಸಿಐಟಿಯು ಸಂಯೋಜಿತ) ಸಮಿತಿಯು 25.9.1993 ರಂದು ಆರಂಭಗೊಂಡಿತು. ಸಿಐಟಿಯು ತಾಲೂಕು ಸಂಚಾಲಕರಾದ ಆರ್.ಎಸ್. ಬಸವರಾಜ್‌ರವರು ಸಂಘಟಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಬಳ್ಳಾರಿ ಸಿಪಿಐ(ಎಂ)ನ ಕಾರ್ಯಕಾರಿ ಸಮಿತಿ ಸದಸ್ಯರಾದ ಜಿ.ಎಂ. ವೀರಸಂಗಯ್ಯನವರು ವಹಿಸಿದ್ದರು. ಈ ತಾಲೂಕು ಸಮಿತಿಯ ಪದಾಧಿಕಾರಿಗಳನ್ನು ಈ ಕೆಳಕಂಡಂತೆ ಆಯ್ಕೆ ಮಾಡಲಾಯಿತು.

ಅಧ್ಯಕ್ಷರು -ಟಿ. ವೆಂಕಟೇಶ್, ಉಪಾಧ್ಯಕ್ಷರು-ಬಿ. ರಹಮಾನ್ ಸಾಹೇಬ್, ಆರ್.ಕೆ. ಕಾಶೀಂ ಸಾಹೇಬ್, ಅಜೀಜ್ ಸಾಹೇಬು, ಕಾರ್ಯದರ್ಶಿ-ಯು. ಚಿದಾನಂದಪ್ಪ, ಸಹ ಕಾರ್ಯದರ್ಶಿ ಶ್ರೀ ಯಲ್ಲಪ್ಪ, ಎಸ್. ಹನುಮಂತಪ್ಪ, ಅನ್ವರ್ ಖಾನ್, ಖಜಾಂಚಿ ನಟರಾಜ್, ಸಲಹೆಗಾರರಾಗಿ ಆರ್.ಎಸ್. ಬಸವರಾಜ್‌ರಲ್ಲದೆ ಏಳು ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಎಸ್.ಎಫ್.ಐಗೆ ವಿಜಯ

ಕೆ.ಜಿ.ಎಫ್. (ಕೋಲಾರ): ಇಲ್ಲಿನ ಪ್ರಥಮ ದರ್ಜೆ ಕಾಲೇಜಿನಲ್ಲಿ 30.9.1993 ರಂದು ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ ಸಿಂಡಿಕೇಟ್ ಬಹಳಷ್ಟು ಸ್ಥಾನವನ್ನು ಗೆದ್ದಿದೆ ಎಂದು ತಿಳಿದುಬಂದಿದೆ. ಎಸ್.ಎಫ್.ಐನ ಸಿ. ಬಾಲಾಂದ್ರನ್ ಉಪಾಧ್ಯಕ್ಷರಾಗಿ ಆರ್. ದಿನಾಯಕ ಮೂರ್ತಿ ಪ್ರಧಾನ ಕಾರ್ಯದರ್ಶಿ ಹಾಗೂ ವೇಲು ಸಹ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ.

ಚುನಾವಣಾ ಫಲಿತಾಂಶ ಘೋಷಣೆಯಾದ ನಂತರ ಎಸ್.ಎಫ್.ಐ ನೇತೃತ್ವದಲ್ಲಿ ಒಂದು ಮೆರವಣಿಗೆಯನ್ನು ನಡೆಸಿ ನಂತರ ಗಾಂಧಿ ಪ್ರತಿಮೆಯೆದುರು ನಡೆದ ಸಭೆಯಲ್ಲಿ ಕೋಲಾರ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಎಂ.ವಿ. ನಾರಾಯಣ ಸ್ವಾಮಿ, ಕೆ.ಜಿ.ಎಫ್. ಘಟಕದ ಅಧ್ಯಕ್ಷರಾದ ರವಿಚಂದ್ರ, ಸಹಕಾರ್ಯದರ್ಶಿ ಎ. ರವಿಚಂದರ್ ಬಾಲು, ಬಂಗಾರಪೇಟೆ ಘಟಕದ ಅಧ್ಯಕ್ಷರಾದ ಮನ್ಸೂರು ಅಹ್ಮದ್ ಮುಂತಾದವರು ಮಾತನಾಡಿದರು. ಈ ಗೆಲುವಿಗೆ ಸಹಕರಿಸಿದ ಎಲ್ಲರಿಗೂ ಸ್ಥಳೀಯ ಘಟಕ ಕೃತಜ್ಞತೆಯನ್ನು ಅರ್ಪಿಸಿದೆ.

ಭಟ್ಕಳ ಯಶಸ್ವಿ ಜೈಲ್ ಭರೋ

ಭಟ್ಕಳ: "ಜೈಲ್ ಭರೋ" ಕಾರ್ಯಕ್ರಮದ ಅಂಗವಾಗಿ ಕೋಮುಗಲಭೆ ಪಿಡಿತ ಪ್ರದೇಶವಾದ ಭಟ್ಕಳ ನಗರದಲ್ಲಿ ನೂರಾರು ಮಹಿಳೆಯರು ಸೇರಿದಂತೆ 350 ಕ್ಕೂ ಅಧಿಕ ಹಂಚು ಕಾರ್ಮಿಕರು ಮತ್ತು ಎಸ್.ಎಫ್.ಐ ಡಿ.ವೈ.ಎಫ್.ಐ ಕಾರ್ಯಕರ್ತರು ಶಿರಾಲಿ ಅಶೋಕ ಮೈದಾನದಿಂದ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ಭಟ್ಕಳ ತಹಶೀಲದಾರ ಕಛೇರಿ ಎದುರು "ಪಿಕೇಟಿಂಗ್" ನಡೆಸಿದಾಗ ಪೋಲೀಸರು ಬಂಧಿಸಿ ಬಹಳ ಸಮಯದ ನಂತರ ಬಿಡುಗಡೆ ಮಾಡಿದರು.

ಮೆರವಣಿಗೆಯಲ್ಲಿ ಸಿಪಿಐ(ಎಂ) ಭಟ್ಕಳ ಶಾಖೆ ಕಾರ್ಯದರ್ಶಿ ವಿ.ಎಸ್. ಬಾಗಿಲ, ಎಸ್.ಎಫ್.ಐ ರಾಜ್ಯ ಸಮಿತಿ ಸದಸ್ಯ ಕಾಂ. ವಿಠಲ ಭಂಡಾರಿ, ಡಿ.ವೈ.ಎಫ್.ಐನ ಸುಭಾಷ್ ಕೊಪ್ಪಿಕರ, ಹಂಚು ಕಾರ್ಮಿಕರ ಮುಖಂಡರಾದ ನಾಗಪ್ಪ ನಾಯ್ಕ, ಶಂಕರ ದೇವಾಡಿಗ, ಎಸ್.ಎಫ್.ಐ ತಾಲೂಕು ಅಧ್ಯಕ್ಷ ಆನಂದ ಶೆಟ್ಟಿ ಶಂಭುಭಟ್, ಕೆ.ಪಿ. ಜೋಸ್, ಮುರ್ಡೇಶ್ವರ ಹಂಚಿನ ಕಾರ್ಖಾನೆ ಕಾರ್ಮಿಕ ಮುಖಂಡ ವೆಂಕಟೇಶ್ ಭಾಗವಹಿಸಿದ್ದರು.

ಭಟ್ಕಳದಲ್ಲಿ 144 ಕಲಂ ಆ ಸಮಯದಲ್ಲಿ ಜಾರಿಯಲ್ಲಿದ್ದರೂ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿ ಸಮಯ ತೆಗೆದುಕೊಂಡು ಶಿಸ್ತುಬದ್ಧ ಮೆರವಣಿಗೆ ನಡೆಸಿದ್ದಲ್ಲದೇ ಕೋಮು ಸೌಹಾರ್ದತಾ ಘೋಷಣೆಯನ್ನು ಕೂಗಿ ಭಟ್ಕಳ ಶಾಂತ ಪ್ರಿಯ ಜನತೆಯ ಗಮನ ಸೆಳೆಯುವಲ್ಲಿಯೂ ಈ ಕಾರ್ಯಕ್ರಮ ಯಶಸ್ವಿಯಾಗಿದೆ.

ಜೂನ್ ತಿಂಗಳ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ

1993ರ ಜೂನ್ ಮಾಹೆಯ ಕರ್ನಾಟಕ ರಾಜ್ಯದ 15 ಕೇಂದ್ರಗಳ (ರಾಜ್ಯ ಸರಣಿಯ 11 ಕೇಂದ್ರಗಳು ಮತ್ತು ಕೇಂದ್ರ ಸರಣಿಯ 4 ಕೇಂದ್ರಗಳು) ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಾಂಕಗಳು ಮತ್ತು ಅಖಿಲ ಭಾರತ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆಗಳ ಸೂಚ್ಯಂಕಗಳನ್ನು ಈ ಕೆಳಕಂಡಂತೆ ಸೂಚಿಸಲಾಗಿದೆ.

ಕ್ರ. ಸಂ.	ಕೇಂದ್ರಗಳು	ಪರಿವರ್ತನಾ ಅಪವರ್ತ್ಯ (Linking factor) 1960ರ ಶ್ರೇಣಿ	ಸಾಮಾನ್ಯ ಮೇ 1993	ಸೂಚ್ಯಾಂಕ ಜೂನ್ 1993
1	2	3	4	5
ರಾಜ್ಯ ಸರಣಿ:				
(ಆಧಾರಿತ ವರ್ಷ: 1987-88=100)				
1.	ಬಳ್ಳಾರಿ	7.39	162	167
2.	ಭದ್ರಾವತಿ	9.19	155	157
3.	ದಾವಣಗೆರೆ	8.27	168	171
4.	ಗುಲ್ಬರ್ಗಾ	8.26	160	162
5.	ಹಾಸನ	9.25	150	151
6.	ಮಂಡ್ಯ	7.92	163	163
7.	ಮಂಗಳೂರು	9.31	164	168
8.	ಮೈಸೂರು	9.05	154	154
9.	ತುಮಕೂರು	-	148	149
10.	ದಾಂಡೇಲಿ	-	163	164
11.	ರಾಯಚೂರು	-	161	162
ಕೇಂದ್ರ ಸರಣಿ:				
(ಆಧಾರಿತ ವರ್ಷ: 1982-100)				
12.	ಬೆಂಗಳೂರು	5.66	245	247
13.	ಬೆಳಗಾಂ	-	249	253
14.	ಹುಬ್ಬಳ್ಳಿ-ಧಾರವಾಡ		255	257
15.	ಮಡಿಕೇರಿ	-	238	239
	ಅಖಿಲ ಭಾರತ	4.93	246	250

ಕಾಣೆಯಾಗಿದ್ದಾನೆ



ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರೂ, ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾಧ್ಯಕ್ಷರಾದ ಮಾರುತಿ ಮಾನ್ಪಡೆಯವರ ಮಗನಾದ ಸುನಿಲ್ ಮಾರುತಿ ಮಾನ್ಪಡೆಯು ಸುಮಾರು 15 ದಿನಗಳಿಂದ ಕಾಣೆಯಾಗಿದ್ದಾನೆ. ಈತನನ್ನು ಹುಡುಕಲು ಪಕ್ಷದ ಸಂಗಾತಿಗಳು ನೆರವಾಗಬೇಕೆಂದು ಮಾರುತಿ ಮಾನ್ಪಡೆಯವರು ಈ ಮೂಲಕ ಕೋರಿದ್ದಾರೆ.

ನವೆಂಬರ್ ಚುನಾವಣೆಗಳ...............

ಪುಟ 1ರಿಂದ

ರಕ್ಷಿಸುವುದು ಎಲ್ಲಕ್ಕೂ ಮೊದಲ ಸಮಸ್ಯೆ ಇದಲ್ಲದೆ ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಐ.ಎಂ.ಎಫ್. ವಿಶ್ವ ಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳನ್ನು ಒಪ್ಪಿಕೊಂಡು ತನ್ನ ನಿಲುವು ಮತ್ತು ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿದೆ. ದೇಶದ ಆರ್ಥಿಕ ಸಾರ್ವಭೌಮತೆಯನ್ನು ಹರಾಜಿಗಿಡುತ್ತಿರುವ ಈ ನೀತಿಗಳು ದೇಶದ ಬಡ ಜನತೆಗೆ ತೀವ್ರತರವಾದ ಕಷ್ಟ ಕಾರ್ಪಣ್ಯಗಳನ್ನು ತರುತ್ತಿವೆ. ದುಡಿವ ವರ್ಗದ ತೀವ್ರ ಪ್ರತಿರೋಧದ ನಡುವೆಯೂ ಈ ಉದಾರೀಕರಣ ಕ್ರಮಗಳು ಅವ್ಯಾಹತವಾಗಿ ನಡೆಯುತ್ತಿವೆ. ಇದು ಎಡ ಮತ್ತು ಜಾತ್ಯಾತೀತ ಶಕ್ತಿಗಳು ಒಗ್ಗಟ್ಟಿನ ಅವಶ್ಯಕತೆಯನ್ನು ಹೆಚ್ಚು ಹೆಚ್ಚು ತೋರುತ್ತಿದೆ. ಕಾಂಗ್ರೆ ಮತ್ತು ಬಿಜೆಪಿ ಇವೆರಡನ್ನೂ ಸೋಲಿಸಬೇಕಾದ ಅವಶ್ಯಕತೆ ಇಂದು ಇದೆ.

ಈ ದಿಸೆಯಲ್ಲಿ ಈ ನಾಲ್ಕು ರಾಜ್ಯಗಳ ಪರಿಸ್ಥಿತಿಯನ್ನು ವಿಶ್ಲೇಷಿಸಬೇಕು. ಉತ್ತರ ಪ್ರದೇಶದಲ್ಲಿ ಬಿಜೆಪಿ ತನ್ನ ಅಧ್ವಾನದ ಆಡಳಿತದಿಂದ ಜನತೆಯ ತಾತ್ಸಾರಕ್ಕೆ ಈಡಾಗಿದೆ. ಹಾಗೇ ತನ್ನ ನಿಷ್ಕ್ರಿಯತೆ ಮತ್ತು ರಾಜಿಯಿಂದಾಗಿ ಕಾಂಗ್ರೆಸ್ ಸಹ ಬೆಂಬಲ ಕಳೆದುಕೊಂಡಿದೆ. ಆದರೆ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಬಿಜೆಪಿ ಮತ್ತು ಕಾಂಗ್ರೆಸ್ ಇವೆರಡನ್ನೂ ಜನರಿಂದ ದೂರ ವಿಡಲು ಸಮರ್ಥವಾಗಿವೆ. ಜನತಾದಳ, ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜ ಪಕ್ಷವಲ್ಲದೆ ಎರಡು ಕಮ್ಯುನಿಸ್ಟ್ ಪಕ್ಷಗಳಿವೆ. ಎಡಪಕ್ಷಗಳು ಜನತಾದಳದ ವಿವಿಧ ಗುಂಪುಗಳು, ಒಟ್ಟಿಗೆ ಬರಲು ಪ್ರಯತ್ನ ಮಾಡುತ್ತಿವೆ. ಮುಲಾಯಂ ಸಿಂಗರನ್ನು ಈ ರಂಗಕ್ಕೆ ತರುವ ಗಂಭೀರ ಪ್ರಯತ್ನ ಮಾಡಿದರೂ ದುರಾದೃಷ್ಟವಶಾತ್ ಅವರು ಸರಿಯಾಗಿ ಪ್ರತಿಕ್ರಿಯಿಸಿಲ್ಲ. ಕೋಮುವಾದದ ವಿರುದ್ಧ ಮಾತನಾಡುವ ಕಾಂಗ್ರೆಸ್‌ಗೆ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಬಗ್ಗೆ ಯಾವುದೇ ಆಸಕ್ತಿಯಿಲ್ಲ.

ಸಮಾಜವಾದಿ ಪಕ್ಷ ಬಹುಜನ ಸಮಾಜ ಪಕ್ಷ ಇವೆರಡೂ ತಮ್ಮ ಧೋರಣೆ ಮುಂದುವರಿಸಿದರೂ ನಮ್ಮ ಹೋರಾಟ ನಿಲ್ಲುವುದಿಲ್ಲ ಜನತಾದಳದ ವಿವಿಧ ಗುಂಪುಗಳು ಒಟ್ಟಿಗೆ 94 ವಿಧಾನ ಸಭಾ ಕ್ಷೇತ್ರಗಳನ್ನು ಪ್ರತಿನಿಧಿಸಿದ್ದವು ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದಲೇ ಇಂದೂ ಎಡ ಪಕ್ಷಗಳು ಮತ್ತು ಜನತಾದಳ ಸೇರಿದರೆ ಒಂದು ಪ್ರಬಲ ಶಕ್ತಿಯಾಗಬಲ್ಲವು.

ಮಧ್ಯಪ್ರದೇಶ, ರಾಜಸ್ತಾನ, ಹಿಮಾಚಲ ಪ್ರದೇಶ ಮತ್ತು ದೆಹಲಿಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆನ ನಡುವೆ ಸ್ಪರ್ಧೆಯಿರುತ್ತದೆ. ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳೂ ಇವೆ. ಇವು ಸಾಕಷ್ಟು ಶಕ್ತಿಶಾಲಿಗಳಲ್ಲದೇ ಇರಬಹುದು. ಆದರೆ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಸ್ಪರ್ಧೆ ನೀಡುತ್ತವೆ.

ದೆಹಲಿ ಒಂದು ಪೂರ್ಣ ರಾಜ್ಯವಲ್ಲದಿದ್ದರೂ ಅದು ದೇಶದ ರಾಜಧಾನಿಯಾಗಿರುವುದರಿಂದ ಪ್ರಾಮುಖ್ಯತೆ ಪಡೆಯುತ್ತದೆ. ಬಿಜೆಪಿ ತನ್ನ ಗಮನವನ್ನು ಇಲ್ಲಿ ಕೇಂದ್ರೀಕರಿಸಿದೆ. ಆದರೆ ಅದು ಗೆಲ್ಲಲು ಬಿಡಬಾರದು.

ಎಡ ಮತ್ತು ಜಾತ್ಯಾತೀತ ಪಕ್ಷಗಳ ಜವಾಬ್ದಾರಿ

ಎಡ ಮತ್ತು ಜಾತ್ಯಾತೀತ ಪಕ್ಷಗಳಿಗೆ ಇದು ಒಂದು ಅತ್ಯಂತ ಗಂಭೀರ ಹೋರಾಟ. ಕೇಂದ್ರ ಸರ್ಕಾರದ ಜನ ವಿರೋಧಿ ಆರ್ಥಿಕ ನೀತಿಗಳು, ಬಿಜೆಪಿಯ ದೇಶವನ್ನೇ ಕೋಮು ದಳ್ಳುರಿಗೆ ತಳ್ಳುವ ಪ್ರಯತ್ನಗಳನ್ನು ಈ ಶಕ್ತಿಗಳು ಈ ಚುನಾವಣೆಯಲ್ಲಿ ಸೋಲಿಸಬೇಕು. ಕೂಡಲೆ ಆರ್ಥಿಕ ನೀತಿಯನ್ನು ಬದಲು ಮಾಡಲು ಸಾಧ್ಯವಾಗದೇ ಹೋಗಬಹುದು. ಆದರೆ ಬಿಜೆಪಿಯನ್ನು ಸೋಲಿಸುವ ಮೂಲಕ ದೇಶದ ಐಕ್ಯತೆಯನ್ನು ರಕ್ಷಿಸಬೇಕು. ಕೋಮು ದಳ್ಳುರಿ ಹೊತ್ತದಂತೆ ನೋಡಿಕೊಳ್ಳಬೇಕು. ಇದು ನಮ್ಮ ಮುಂದಿರುವ ಅತ್ಯಂತ ಮುಖ್ಯ ಕಾರ್ಯ.

ರಷ್ಯದಲ್ಲಿ ವರ್ತಮಾನ............

ಪುಟ 1ರಿಂದ

ಯೆಲ್ಟ್‌ಸಿನ್ ವಿರುದ್ಧ ಹೋರಾಟ

ಯೆಲ್ಟ್‌ಸಿನ್ ಸಂವಿಧಾನಕ್ಕೆ ವಿರುದ್ಧವಾಗಿ ಕಾನೂನು ಬಾಹಿರವಾಗಿ, ಪಾರ್ಲಿಮೆಂಟನ್ನು ವಿಸರ್ಜಿಸಿದ, ಕಾಂಗ್ರೆಸ್ ಆಫ್ ಡೆಪ್ಯುಟೀಸ್ ಮತ್ತು ಸುಪ್ರೀಂ ಸೋವಿಯೆತ್‌ಗಳ ಅಧಿಕಾರವನ್ನು ವಹಿಸಿಕೊಂಡ, ಅವರ ಆಸ್ತಿಯನ್ನು, ಹಣಕಾಸನ್ನು, ಕಟ್ಟಡಗಳನ್ನು, ಮುದ್ರಣಾಲಯಗಳನ್ನು ವಾಹನಗಳನ್ನು ವಶಪಡಿಸಿಕೊಂಡ ಹಾಗೂ ಟೆಲಿಫೋನ್‌ಗಳನ್ನು ನೀರು ಸರಬರಾಜನ್ನು ಕಡಿದು ಹಾಕಿದ.

ರಷ್ಯದ ಪಾರ್ಲಿಮೆಂಟು ಯೆಲ್ಟ್‌ಸಿನ್ನನ್ನುಗೆ ದೋಷಾರೋಪಣೆ ಗುರಿಪಡಿಸಿ, ಅಲೆಗ್ಸಾಂಡರ್ ರುತ್ಸ್‌ಕೋಯಿಯವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿತು.

ರಷ್ಯದಲ್ಲಿರುವ 87 ಪ್ರಾದೇಶಿಕ ಸೋವಿಯತ್‌ಗಳ ಪೈಕಿ 47 ಸೋವಿಯೆತ್‌ಗಳು ಯೆಲ್ಟ್‌ಸಿನ್ನರ ಕೃತ್ಯಗಳನ್ನು ಖಂಡಿಸಿವೆ. ಇವುಗಳಲ್ಲಿ ಯೆಲ್ಟ್‌ಸಿನ್ನರ ಭದ್ರ ನೆಲೆಗಳಾದ ಮಾಸ್ಕೋ, ಸೆಂಟ್ ಪೀಟರ್ಸ್‌ಬರ್ಗ್ ಮತ್ತು ನಿಜನಿ ನೋವ್ಗೋರಾಡ್ ಸೇರಿವೆ. ಮಾಸ್ಕೋ ಸಿಟಿ ಸೋವಿಯತ್ ಯೆಲ್ಟ್‌ಸಿನ್ನರ ಕೃತ್ಯವನ್ನು ಬುಡಮೇಲು ಕೃತ್ಯ ಎಂದು ಕರೆದಿದೆ. ಲೆನಿನ್‌ಗ್ರಾಡ್ ಸೋವಿಯತ್ ರುತ್ಸ್‌ಕೋಯಿಗೆ ಬೆಂಬಲ ಕೊಟ್ಟಿತ್ತು. ಉಲ್ಯನೋವ್ಸ್ಕ, ಲಿಪೆಟ್ಸ್ಕ್, ಕಿಮೆರೊವ್ಹೊ, ಕೋಸ್ಟ್ರೋಮಾ ಮತ್ತು ಮರ್ಮಾನ್ಸ್ ಸೋವಿಯತ್‌ಗಳು ದೃಢವಾಗಿ ಸಂವಿಧಾನಿಕ ಆಡಳಿತವನ್ನು ಬೆಂಬಲಿಸುತ್ತಿವೆ. ಸಶಸ್ತ್ರ ಪಡೆಗಳು ಇನ್ನು ಯೆಲ್ಟ್‌ಸಿನ್ನರ ಹತೋಟಿಯಲ್ಲಿದ್ದರೂ ರಷ್ಯನ್ ಫೆಡರೇಷನ್ನಿನ ಸಂವಿಧಾನಕ್ಕೆ ಮತ್ತು ಕಾನೂನಿನಿಗೆ ವಿಧೇಯತೆ ಹಾಗೂ ಕಮಾಂಡರ್ ಇನ್ ಛೀಫ್ ನಡುವೆ ಹಂಚಿ ಹೋಗಿವೆ.

ಸೈಬೀರಿಯ, ವೋಲ್ಗ ಮತ್ತು ಲೆನಿನ್‌ಗ್ರಾಡ್ ಮಿಲಿಟರಿ ಜಿಲ್ಲೆಗಳು, ಅನೇಕ ಡಿವಿಜನ್‌ಗಳು, ರೆಜಿಮೆಂಟುಗಳು ಯೆಲ್ಟ್‌ಸಿನ್ನರ ಅಸಂವಿಧಾನಿಕ ಕೃತ್ಯಗಳ ವಿರುದ್ಧ ಪ್ರತಿಭಟಿಸಿವೆ. ಕಪ್ಪು ಸಮುದ್ರ ಮತ್ತು ಉತ್ತರದ ದನೌಕಾ ಪಡೆಗಳಲ್ಲಿಯೂ ಇದೇ ಭಾವನೆ ಇದೆ. ಭಿನ್ನಮತೀಯ ಘಟಕಗಳ ಮೇಲೆ ವಿಪರೀತ ಒತ್ತಡ ಹೇರಲಾಗುತ್ತಿದೆ.

ಪ್ರಸಾರ ಮಾಧ್ಯಮಗಳ ಮೇಲೆ ನಿಷೇಧ ವಿಧಿಸಿದುದರಿಂದ ಮಾಸ್ಕೋ ಮತ್ತು ಇತರ ನಗರಗಳಲ್ಲಿ ಕರಪತ್ರಗಳ ಹೊಳೆಯೇ ಹರಿಯುತ್ತಿದೆ.

ಪಾರ್ಲಿಮೆಂಟ್ ಮೇಲೆ ದಾಳಿ ನಡೆಯುವ ಮುನ್ನ ಪಾರ್ಲಿಮೆಟ್ ಮುಂದೆ ಒಂದು ಲಕ್ಷ ಜನ ಜಮಾಯಿಸಿದ್ದರು. ಅವರ ನಡುವೆ ದೊಡ್ಡ ಪ್ರಮಾಣದಲ್ಲಿ ಯುವಕರಿದ್ದರು, ಧಾರ್ಮಿಕ ವ್ಯಕ್ತಿಗಳಿದ್ದರು, ಎತ್ತರದ ಫರ್ ಹ್ಯಾಟ್‌ಗಳನ್ನು ಧರಿಸಿದ್ದ ಕೋಸಾಕರಿದ್ದರು. ಪೋಲೀಸರು ಏನೂ ಮಾಡಲಾಗಲಿಲ್ಲ. ಯಾವ ಅಡೆತಡೆಗಳೂ ಅವರನ್ನು ತಡೆಯಲಿಲ್ಲ. ಜನರು ಯೆಲ್ಟ್‌ಸಿನ್ ವಿರುದ್ಧ ಹೋರಾಡಿದರು. ಕಾರ್ಮಿಕ ಸಂಘಗಳು ಪ್ರತಿಭಟನಾ ಮುಷ್ಕರಕ್ಕೆ ಕೊಟ್ಟವು. ಕಲೆಕ್ಟಿವ್ ಫಾರ್ಮ್‌ಗಳ ರೈತರು ಹೋರಾಡಿದರು.

ರಷ್ಯದ ಜನರು ಯೆಲ್ಟ್‌ಸಿನ್ ವಿರುದ್ಧ ಹೋರಾಡಿದರು ಎಂಬ ವಿಚಾರವನ್ನು ಪ್ರಸಾರಮಾಧ್ಯಮವು ಜನರಿಂದ ಮರೆಮಾಚಿದೆ.

ಏಳು ದಶಕಗಳಿಗಿಂತಲೂ ಹೆಚ್ಚು ಕಾಲ ರಷ್ಯದಲ್ಲಿ ಬೇರುಬಿಟ್ಟಿರುವ ಸಮಾಜವಾದದ ಬೇರುಗಳನ್ನು ಕೀಳುವುದು ಕಷ್ಟಸಾಧ್ಯ. ಅಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ಹೇರುವುದು ಸುಲಭವಲ್ಲ, ಅದು ಆಮ್ಲೆಟ್ಟಿನಿಂದ ಮೊಟ್ಟೆಯನ್ನು ಮಾಡಲು ಪ್ರಯತ್ನಿಸಿದಂತೆ ಎಂಬುದನ್ನು ರಷ್ಯದ ಕಾರ್ಮಿಕ ವರ್ಗ, ರಷ್ಯದ ಜನತೆ ಜಗಜ್ಜಾಹೀರು ಮಾಡುವ ಕಾಲ ಬಹಳ ದೂರವೇನಿಲ್ಲ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ : 12, 18ನೇ ಅಡ್ಡರಸ್ತೆ, ಶಾಸಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ.: 236462. ಸಂಪಾದಕರು : ಪಿ.ರಾಮಚಂದ್ರರಾವ್